ಸಂಕ್ರಮಣ

ಬೆಲೆ ೫

ಸಪ್ಟಂಬರ್ + ಅಕ್ಟೋಬರ್

೨೦೦೩

ಸಂಪಾದಕರು

೨೯

ಸಿದ್ಧಲಿಂಗ ಪಟ್ಟಣಶೆಟ್ಟಿ

ಹೇಮಾ ಪಟ್ಟಣಶೆಟ್ಟಿ

ಸಂಕಲನದ ಲೇಖಕರಿಗೆ + ಓದುಗರಿಗೆ ಕೆಲವು ಸೂಚನೆಗಳು

೧. ಲೇಖನಗಳ ಕೈಬರೆಹದ / ಟೈಪ್ ಮಾಡಿದ / ಡಿಟಿಪಿ ಮಾಡಿದ ಮೂಲ ಪ್ರತಿಗಳನ್ನೇ ಕಳಿಸಬೇಕು. ಝೆರಾಕ್ಸ್ ಪ್ರತಿ ಪರಿಶೀಲಿಸಲಾಗುವುದಿಲ್ಲ.

೨. ಲೇಖನಗಳು ಪ್ರಕಟಣೆಗೆ ಸ್ವೀಕೃತವಾದರೆ ಅವು ತಲುಪಿದ ೨ ತಿಂಗಳೊಳಗೆ ತಿಳಿಸಲಾಗುವುದು.

೩. ಸಂಕಲನದ ೧ ಸಂಚಿಕೆ ಪ್ರಕಟವಾಗುವಾಗ ಅದರ ಮುಂದಿನ ೩ ಸಂಚಿಕೆಗಳಿಗಾಗಿ ಆಯ್ದ ಲೇಖನಗಳು ಡಿಟಿಪಿ ಆಗಿ ಸಿದ್ಧವಾಗಿರುವುದರಿಂದ ಯಾವುದೇ ಹೊಸ ಲೇಖನ ಕನಿಷ್ಠ ನಾಲ್ಕಾರು ತಿಂಗಳ ನಂತರ ಪ್ರಕಟವಾಗುತ್ತದೆ. ಆದ್ದರಿಂದ ಲೇಖಕರು ಅನಗತ್ಯ ಕುತೂಹಲ ಅಥವಾ ಅವಸರ ತಳೆಯದಿರಲು ಕೋರಿಕೆ.

೪. ಉತ್ತರವನ್ನು ನಿರೀಕ್ಷಿಸಿ ಯಾರೂ ಸ್ವವಿಳಾಸದ ಲಕೋಟೆ ಅಥವಾ ಅಂಚೆಚೀಟಿ ಕಳಿಸುವುದು ಬೇಡ. ಕವಿತೆಗಳನ್ನು ಹೊರತುಪಡಿಸಿ ಅಸ್ವೀಕೃತ ಲೇಖನಗಳನ್ನು ಸಂಕಲನದ ವೆಚ್ಚದಲ್ಲಿಯೇ ಆಯಾ ಲೇಖಕರಿಗೆ ಮರಳಿಸಲಾಗುವುದು.

೫. ಪರಿಶೀಲನೆಗೆ ಪುಸ್ತಕದ ೨ ಪ್ರತಿ ಕಳಿಸಿದರೆ ಮಾತ್ರ ಪರಿಗಣಿಸಲಾಗುವುದು. ಎರಡು ಪ್ರತಿ ಸ್ವೀಕರಿಸಿದ ಮಾತ್ರಕ್ಕೆ ಅದರ ಪರಿಶೀಲನೆ ಮಾಡಿಸಲೇಬೇಕೆಂಬುದು ಸಂಕಲನಕ್ಕೆ ಬಂಧನಕಾರಿಯಲ್ಲ. ಒಮ್ಮೊಮ್ಮೆ ಪರಿಶೀಲಿತ ವಿಮರ್ಶಾಲೇಖನ ಪ್ರಕಟಣೆಗೆ ಸಿಗುವುದು ಅತಿ ವಿಳಂಬದ್ದೂ ಕಷ್ಟದ್ದೂ ಆಗಬಹುದಾಗಿದೆ.

೬. ಜನೆವರಿ, ಮಾರ್ಚ್, ಮೇ, ಜುಲಾಯಿ, ಸಪ್ಟಂಬರ್, ನವಂಬರ್ ತಿಂಗಳಲ್ಲಿ ಪ್ರಕಟವಾಗುವ ಸಂಚಿಕೆಗಳು ಸಕಾಲದಲ್ಲಿ ಚಂದಾಹಣ ಕೊಟ್ಟ ಎಲ್ಲರಿಗೂ ಸಾಮಾನ್ಯವಾಗಿ ಆಯಾ ತಿಂಗಳ ೧೦-೧೨ ನೇ ದಿನಾಂಕದೊಳಗಾಗಿ ತಲುಪುತ್ತವೆ.

೭. ಲೇಖಕರು ತಮ್ಮ ಒಳ್ಳೆಯ ಬರೆಹಗಳನ್ನು ಕಳಿಸುವುದರೊಂದಿಗೆ ತಮ್ಮ ಗಮನಕ್ಕೆ ಬರುವ ಹೊಸ ಲೇಖಕರ ಒಳ್ಳೆಯ ಲೇಖನಗಳನ್ನೂ ಸಂಕಲನಕ್ಕೆ ಕಳಿಸಲು ಪ್ರೇರೇಪಿಸಿರಿ.

೮. ಪ್ರಕಟವಾಗುವ ಪ್ರತಿಯೊಂದು ಲೇಖನಕ್ಕೆ ಸಾಂಕೇತಿಕ ಗೌರವಧನ ರೂ. ೧೦೦/- ಲೇಖನ ಪ್ರಕಟವಾದ ಎರಡು ವಾರದೊಳಗಾಗಿ ಕಳಿಸಲಾಗುವುದು.

ಸಂಕಲನ

ಸಪ್ಟಂಬರ್ + ಅಕ್ಟೋಬರ್ ೨೦೦೬

ಸಂಪಾದಕರು

ಸಿದ್ಧಲಿಂಗ ಪಟ್ಟಣಶೆಟ್ಟಿ

ಹೇಮಾ ಪಟ್ಟಣಶೆಟ್ಟಿ

ಸಂಕಲನ ಪ್ರಕಾಶನ

ಹೂಮನೆ, ಶ್ರೀದೇವಿನಗರ, ವಿದ್ಯಾಗಿರಿ

ಧಾರವಾಡ - ೫೮೦ ೦೦೪

R N I No. KARKAN 14160 / 10 / 1 / 2002 - TC
SANKALANA :
A Kannada Literary Magazine
Volume 5, Issue 5 : September + October 2006
Edited by Dr. Siddhaling Pattanshetti
Hoomane, Shridevinagar, Vidyagiri, Dharwad - 580 004
Printed by Saraswati Offset Printers, Shivaji Road, Dharwad - 580 001

•

•

•

ಸಂಕಲನ - ೨೯
ಸಂಪುಟ ೫, ಸಂಚಿಕೆ ೫ : ಸಪ್ಟೆಂಬರ್ + ಅಕ್ಟೋಬರ್ ೨೦೦೬

ಸಂಪಾದಕರು : ಡಾ. ಸಿದ್ಧಲಿಂಗ ಪಟ್ಟಣಶೆಟ್ಟಿ, ಮತ್ತು ಡಾ. ಹೇಮಾ ಪಟ್ಟಣಶೆಟ್ಟಿ,
ಹೂಮನೆ, ಶ್ರೀದೇವಿನಗರ, ವಿದ್ಯಾಗಿರಿ, ಧಾರವಾಡ - ೫೮೦ ೦೦೪
✆ : ೦೮೩೬-೨೪೬ ೨೭೧೮, ಮೊಬೈಲ್ : ೯೪೪೮೬ ೩೦೬೩೭, ೯೪೪೮೮ ೬೧೬೦೪

•

ಸಂಕಲನದಲ್ಲಿ ಪ್ರಕಟವಾದ ಲೇಖನಗಳಲ್ಲಿ ವ್ಯಕ್ತವಾದ
ಅಭಿಪ್ರಾಯಗಳ ಹೊಣೆ, ಹಕ್ಕು ಆಯಾ ಲೇಖಕರವು.

•

ವಾರ್ಷಿಕ ಚಂದಾ ರೂ. ೨೦೦/- (ಚೆಕ್ ೨೨೦/-)
೨೦೦೫ ರಿಂದ ಒಟ್ಟು ೩ ವರ್ಷಗಳ ಚಂದಾ ರೂ. ೫೦೦/- (ಚೆಕ್ ೫೫೦/-)

•

ಡಿಟಿಪಿ : ಬಿಜಿಗ್ರಾಫಿಕ್ಸ್, ೧ನೇ ಕ್ರಾಸ್, ಜೋಶಿ ಫಾರ್ಮ್, ಧಾರವಾಡ - ೫೮೦ ೦೦೮
ಮೊಬೈಲ್ : ೯೯೮೦೩ ೮೧೮೬೯

ಸಂಕಲನ - ೨೯ : ಪರಿವಿಡಿ

೧. ಒನ್ನೇಪುಟ : ಸಿದ್ಧಲಿಂಗ ಪಟ್ಟಣಶೆಟ್ಟಿ ೫

೨. ಸಿ. ಎನ್. ರಾಮಚಂದ್ರನ್ ಅವರ 'ಬಯಲು-ರೂಪ' – ಜಿ. ಬಿ. ಹರೀಶ ೬–೧೨

೩. ಎರಡು ಕವಿತೆಗಳು – ಆರ್. ಪವಿತ್ರ ಪ್ರಿಯಭಾಷಿಣಿ ೧೩–೧೪

೪. ಬೇಂದ್ರೆ ಕಾವ್ಯಪದ್ಧತಿ – ಸುಮತೀಂದ್ರ ನಾಡಿಗ ೧೫–೧೭

೫. ದೇಸಿ ದಿಬ್ಬ – ಎಸ್. ಜಿ. ಸಿದ್ಧರಾಮಯ್ಯ ೧೮–೨೦

೬. ಅದಲು -ಬದಲು – ಎಸ್. ಆರ್. ಕುವಾರಕರ ೨೦

೭. ನಾಲ್ಕು ಕವಿತೆಗಳು – ಬಸವರಾಜ ವಕ್ಕುಂದ ೨೧–೨೫

೮. ಎರಡು ಕವಿತೆಗಳು – ರಾಜೇಶ್ವರಿ ಪ್ರವೀಣ ಶಿಂಧೆ ೨೫

೯. ಕೆಲವು ಟಿಪ್ಪಣಿಗಳು – ಪಿ.ಪಿ.ಕೆ. ೨೬- ೩೩

೧೦. ಪತ್ರ – ಕವಿತೆ – ಜಯಶ್ರೀ ಕೆ. ಸಿ. ೩೩

೧೧. ನನ್ನ ಶಾಲಾ ಗುರುಗಳು : *ಗೌರವ - ೧೨* – ಮಂದಾಕಿನಿ ಪುರೋಹಿತ ೩೪- ೪೧

೧೨. ಎರಡು ಕವಿತೆಗಳು – ರಜಿಯಾ ಡಿ. ಬಿ. ೪೧

೧೩. ನನ್ನ ಅವ್ವ ನನ್ನ ಅಪ್ಪ : ಕೃತಜ್ಞತೆ - ೨೯ – ನಾ. ಡಿಸೋಜ ೪೨–೫೦

೧೪. ಎರಡು ಕವಿತೆಗಳು – ಶಂಕರಗೌಡ ಸಾತ್ಮಾರ ೫೦

೧೫. ಕವಿರಾಜಮಾರ್ಗಮಂಥನ : ಲೇಖನ ಮಾಲೆ - ೧೦ –ಷ. ಶೆಟ್ಟರ್ ೫೧- ೬೯

೧೬. ಪುಸ್ತಕ ಪರಿಶೀಲನೆ : ೭೦- ೭೭

೧. ಹೀಗೊಂದು ವೃತ್ತಾಂತ : ವ್ಹಿ. ಬಿ. ಅರ್ತಿಕಜೆ – ಅಶೋಕ ಶೆಟ್ಟರ್

೨. ಜಾಗತೀಕರಣ ಮತ್ತು ಸಂಸ್ಕೃತಿ : ಸಂ. ದಸ್ತಗೀರಸಾಬ್ ದಿನ್ನಿ – ಚಿದಾನಂದ ಸಾಲಿ

೩. ಒಂದು ಪಯಣದ ಕಥೆ : ಬೆರ್ಟೊಲ್ಟ್ ಬ್ರೆಕ್ಟ್, ಅನು : ಎಸ್. ಮಾಲತಿ – ಬಂದಗದ್ದೆ ರಾಧಾಕೃಷ್ಣ

೪. ಕನ್ನಡ ಕಲಾ ಸಂವಹನ : ಸ್ವಾಮಿರಾವ ಕುಲಕರ್ಣಿ – ಬಿ. ಜಿ. ಚನ್ನೇಶ್ ಹೊನ್ನಾಳಿ

೫. ಓ! ಕೆನಡಾ : ಗುರುಮೂರ್ತಿ ಪೆಂಡಕೂರು – ಹೆಚ್. ಎ. ಪಾರ್ಶ್ವನಾಥ್

೬. ಕಪ್ಪು ನದಿ ಮತ್ತು ಅರಣ್ಯ : ಅಮರೇಶ ಕುಂಬಾರ – ದೇಶಪಾಂಡೆ ಸುಬ್ಬರಾಯ

೭. ಚಿತ್ರದುರ್ಗ ಜಿಲ್ಲಾ ಇತಿಹಾಸ .... : ಲಕ್ಷ್ಮಣ ತೆಲಗಾವಿ – ಕಿಕ್ಕೇರಿ ನಾರಾಯಣ್

೧೭. ಸಂಕಲನ : ಅನಿಸಿಕೆ ೭೭- ೭೯

೧೮. ಕಡೀಪುಟ : ಸಿದ್ಧಲಿಂಗ ಪಟ್ಟಣಶೆಟ್ಟಿ ೮೦ + ಆವರಣ ಪುಟ ೩

ಸಂಪಾದಕರ ಮಾತು

'ಕವಿರಾಜಮಾರ್ಗಮಂಥನ ಮಾಲೆ'ಯ ಈ ಸಲದ ೧೦ ನೇ ಲೇಖನ ಅನಿರೀಕ್ಷಿತವಾಗಿ ದೀರ್ಘವಾಯಿತು. ಕ್ರಿಸ್ತ ಪೂರ್ವದ ದಕ್ಷಿಣ ಭಾರತವನ್ನು ಬೆಸೆದ ಬ್ರಾಹ್ಮೀ ಲಿಪಿ ಕುರಿತ ಈ ದೀರ್ಘ ಲೇಖನವನ್ನು ಎರಡು ಭಾಗಗಳಲ್ಲಿ ಹಾಕುವುದು ಅಷ್ಟು ಸಮರ್ಪಕವಾಗಿ ತೋರಲಿಲ್ಲ. ಹೀಗಾಗಿ ಅನಿವಾರ್ಯವಾಗಿ ಮುದ್ರಣಕ್ಕೆ ಅಣಿಯಾಗಿದ್ದ ಬೇರೆ ಮೂರು ಲೇಖನಗಳನ್ನು ಮತ್ತು ಕೆಲವು ಪುಸ್ತಕ ಪರಿಶೀಲನೆಗಳನ್ನು ಮುಂದಿನ ಸಂಚಿಕೆಗಾಗಿ ಇಟ್ಟುಕೊಳ್ಳಬೇಕಾಯಿತು. ಅವನ್ನು ಈ ಸಂಚಿಕೆಯಲ್ಲಿ ಪ್ರಕಟಿಸುವ ಕುರಿತು ಮೊದಲೇ ಆಯಾ ಲೇಖಕರಿಗೆ ತಿಳಿಸಿಯೂ ಆಗಿತ್ತು. ಈಗ ಅವರು ನಮ್ಮನ್ನು ಮನ್ನಿಸಲಿ.

ಇನ್ನು ಮುಂದೆ ಹೀಗಾಗದಂತೆ ಪ್ರಯತ್ನಿಸಲಾಗುವುದು. ಮುಂದಿನ ಸಂಚಿಕೆಯಲ್ಲಿ ಇತರ ಲೇಖನಗಳಿಗೆ ಸಲ್ಲಬೇಕಾದ ಪ್ರಾಶಸ್ತ್ಯ ಉಳಿದುಕೊಳ್ಳುವಂತೆ ನೋಡಿಕೊಳ್ಳಲಾಗುವುದು.

ನವಂಬರ್ ಮೊದಲ ವಾರದಲ್ಲಿ ಬರುವ ಸಂಕಲನ-೩೦ ಪ್ರಕಟಣೆಯ ೫ ನೇ ವರ್ಷದ ಕೊನೆಯ ಸಂಚಿಕೆ. ಅದರಲ್ಲಿ ೪ ಮತ್ತು ೫ ನೇ ವರ್ಷದ ಸಮಗ್ರಸಾಮಗ್ರಿದರ್ಶನವನ್ನು ಪ್ರಕಟಿಸಲು ನಿರ್ಧರಿಸಿರುವುದರಿಂದ ಒಂದೆರಡು ಲೇಖನಗಳನ್ನು ಸಂಕಲನ-೩೧ ರಲ್ಲಿ ಪ್ರಕಟಿಸಲು ಇಟ್ಟುಕೊಳ್ಳುವುದು ಮಾತ್ರ ಅನಿವಾರ್ಯವಾಗಬಹುದು.

೧ ಸಪ್ಟೆಂಬರ್ ೨೦೦೬
ಹೂಮನೆ, ಧಾರವಾಡ-೪

ಸಿದ್ಧಲಿಂಗ ಪಟ್ಟಣಶೆಟ್ಟಿ
ಹೇಮಾ ಪಟ್ಟಣಶೆಟ್ಟಿ

ಯಾವಾಗಲೂ ಯುದ್ಧ, ಅಂತಃಕಲಹ, ಪರಕೀಯರ ದಾಳಿಗಳಿಂದ ನರಳಿ ಕಂಗೆಟ್ಟಿದ್ದ ರಾಜಸ್ಥಾನದೊಳಗ ಭಕ್ತಿರಸ ಸುರಿಸಿ ಗಾನಸುಧೆ ಬೆರೆಸಿ ಗೀತಗಂಗೆಯನ್ನ ಹರಿಸಿದಾಕಿ ಮೀರಾಬಾಯಿ. ಮೇಡ್‌ತಾದ ಹತ್ತಿರ ಕುಡ್‌ಕೀಯಲ್ಲಿ ಕ್ರಿ.ಶ. ೧೫೦೩ ರಲ್ಲಿ ಮೀರಾ ಜನಿಸಿದಳು. ಅವಳ ಅಜ್ಜ ರಾವ್ ದೂದಾಜಿ ಸ್ಥಾಪಿಸಿದ ರಾಜ್ಯ ಮೇಡ್‌ತಾ. ಸಣ್ಣಾಕಿದ್ದಾಗನ್‌ಅ ತಾಯಿನ್ನ ಕಳಕೊಂಡಳು. ಅಜ್ಜ-ಅಜ್ಜಿಯ ಜೊತೆಗೇ ಇರತಿದ್ದಳು. ಮೊದಲಿಂದ ಅಕಿಗೆ ಸಂಗೀತ ಅಂದರ ಬಹಳ ಪ್ರೀತಿ. ಬಾಲ್ಯದೊಳಗ ಒಬ್ಬ ಅಲೆಮಾರಿ ಸಾಧು ಕೊಟ್ಟ ಕೃಷ್ಣ-ವಿಗ್ರಹ ಅಕೀ ಪಾಲಿಗೆ ಪತಿ, ಪರಮಾತ್ಮ ಎಲ್ಲಾ ಆತು.

ಚಿತ್ತೌಡದ ರಾಣಾ ಸಾಂಗಾನ ಹಿರೇಮಗ ಭೋಜರಾಜನನ್ನ ತನ್ನ ೧೩ ನೇ ವಯಸ್ಸಿನ್ಯಾಗ ಲಗ್ನ ಆದ ಮೀರಾ, ಗಂಡನ ಮನಿಗೆ ಬಂದ ಮ್ಯಾಲೂ ಅಲ್ಲಿಯ ಕುಲದೇವತೆ ಕಾಳಿಯನ್ನ ಪೂಜಿಸಲಿಲ್ಲ, ಅಲ್ಲಿನೂ ತನ್ನ ಕೃಷ್ಣನನ್ನೇ ಆರಾಧಿಸಿದಳು. ಭೋಜ ತನ್ನ ಹೆಂಡತಿಯ ಎಲ್ಲಾ ಇಚ್ಛೆಗಳನ್ನ ನೆರವೇರಿಸಿದ. ಮದುವಿ ಆಗಿ ೧೧ ವರ್ಷಕ್ಕ ಗಂಡ ತೀರಿದ. ನಂತರದ ಬದುಕು ಮೀರಾಳ ಪಾಲಿಗೆ ಭಯಾನಕ ಆತು. ಆಗ ಅಕಿ ತನ್ನ ಕೃಷ್ಣ-ಪತಿಯನ್ನ ಇನ್ನಷ್ಟು ಆಳವಾಗಿ ಭಜಿಸಿದಳು. ಅರಮನೆ ಬಿಟ್ಟಳು, ಗಂಡ ಕಟ್ಟಿಸಿದ ಕೃಷ್ಣಮಂದಿರದಲ್ಲೇ ಉಳಿದಳು. ಸಾಮಾನ್ಯರ್ಹಂಗ ಊಟ ವಾಸ, ಸಾಧು-ಸಂತರ ಕೂಡ ಭಜನೆ, ಭಕ್ತಿಪರವಶಳಾಗಿ ನೃತ್ಯ. ಅರಸೊತ್ತಿಗೆ ಇದನ್ನ ಸಹಿಸಲಿಲ್ಲ. ಭೋಜರಾಜನ ತಮ್ಮಂದಿರು+ಅವರ ತಾಯಿ ಮೀರಾನ್ನ ಮುಗಿಸಿಯೇ ಬಿಡಬೇಕಂತ ಕಳಿಸಿದ ಹಾವು ಹೂ ಆತು, ವಿಷ ಅಮೃತ ಆತು ಅಂತ ಹೇಳತಾರ. ತನ್ನ ಕೃಷ್ಣನೇ ರಕ್ಷಿಸಿದ ಅಂತ ಮೀರಾಳ ನಂಬಿಕೆ. ಅತ್ತೆ ಮೈದುನರ ಉಪದ್ರವ ತಡ್ಯಾಕ ಆಗದ, ಗಂಡನ ಮನೆ ಬಿಟ್ಟಳು. ಮೇಡ್‌ತಾ, ವೃಂದಾವನ, ದ್ವಾರಕಾ ಸುತ್ತಾಡಿ ೧೫೪೬ ರಲ್ಲಿ ತೀರಿಕೊಂಡಳು.

'ಮೀರಾ' ಅನ್ನುವ ಹೆಸರು ಬಂದದ್ದು ವಿಚಿತ್ರ. ಸಂಸ್ಕೃತದ 'ಮೀರ' (ಮೀರಾ ಅಲ್ಲ) ಶಬ್ದಕ್ಕ ಸಮುದ್ರ, ನೀರು, ಸೀಮೆ ಅಂತ ಅರ್ಥ. ಫಾರ್‌ಸೀಯೊಳಗ 'ಅಮೀರ್' ಶಬ್ದದ ಲಘುರೂಪ 'ಮೀರ್'. ಅದಕ್ಕ ಸರದಾರ, ನೇತಾರ, ಸ್ಪರ್ಧೆಯಲ್ಲಿ ಪ್ರಥಮಸ್ಥಾನ ಪಡೆದವ ಇತ್ಯಾದಿ ಅರ್ಥ. 'ಮೀರ್'ದ ಬಹುವಚನ ರೂಪ 'ಮೀರ್ಸಾ'. ಅದು ಆದರಾರ್ಥಕವಾಗಿ ಅಕಿಗೆ ಹೆಸರಾಯ್ತು. ಮುಂದ ಮಂದೀ ನಾಲಗೀ ಮ್ಯಾಲ 'ಮೀರಾ' ಉಳಕೊಂಡಳು.

ಮೀರಾಳದು ಭಕ್ತಿಪೂರ್ಣವಾದ ಅಂತಃಸ್ಫೂರ್ತಿಯ ಶ್ರೇಷ್ಠ ಕಾವ್ಯ. ಹೃದಯದ ಒಂದೊಂದು ಉದ್ಗಾರವನ್ನೂ ಹಾಡಿದ ಕುಣಿದ ಮೀರಾಳದು ನಿರಾಶೆಯ, ಅನಾಸ್ಥೆಯ ಕಾವ್ಯ ಅಲ್ಲ; ಅದು ಆಶೆಯ, ಆಸ್ಥೆಯ ಕಾವ್ಯ ಅಂತನೂ ಹೇಳಾಕ ಬರೂದುಲ್ಲ. ತನಗ ಸರ್ವಸ್ವವಾದುದನ್ನ ಪಡೆಯಲಿಕ್ಕೆ ತನ್ನ ಸರ್ವಸ್ವವನ್ನು ತ್ಯಜಿಸಿದ ಮೀರಾಬಾಯಿಯನ್ನ ಓದುವಾಗ ಅಕಿಗಿಂತ ಮೊದಲೇ ಆಗಿಹೋದ ನಮ್ಮ ಮಹಾದೇವಿ ಅಕ್ಕ ನೆನಪಾಗುವುದು ಸಹಜ.

ಸಂಗೀತ ನೃತ್ಯ ಕಾವ್ಯದೊಳಗ ಲೌಕಿಕ ಅನುಭವ, ಭಕ್ತಿ, ಅಧ್ಯಾತ್ಮಗಳನ್ನ ಒಂದಾಗಿಸಿದ್ದು ಮೀರಾಳ ಪ್ರತಿಭೆ. ಅಕಿ ಬರೆದದ್ದು ರಾಜಸ್ಥಾನೀ. ಅಕ್ಕಪಕ್ಕದ ಎಲ್ಲರೂ ಅಕೀ ಹಾಡು ತಮ್ಮವೇ ಅಂತ ಹೇಳತಾರ. ಮೀರಾಳ 'ಪದ'ಗಳ ಆಂತರ್ಯಗಳು ಎಲ್ಲಾ ಹೃದಯಗಳನ್ನೂ ಸಮಾನವಾಗಿ ಸ್ಪಂದಿಸತಾವ ಅನ್ನಾಕ ಇಲ್ಲಿ ಒಂದು 'ಪದ' ನೋಡೋಣ : ಬಸೋ ಮೋರೇ ನೈನನ ಮ್ನೇ ನಂದಲಾಲ್ । ಮೋಹನಿ ಮೂರತಿ ಸಾವ್ನರಿ ಸೂರತಿ ನೈನಾ ಬನೇ ವಿಸಾಲ್ । ಅಧರ ಸುಧಾರಸ ಮುರಲೀ ರಾಜತಿ ಉರ ವೈಜಂತೀ ಮಾಲ್ ॥ ಛುದ್ರ ಘಂಟಿಕಾ ಕಟಿ ತಟ ಸೋಭಿತ ನೂಪುರ ಸಬದ ರಸಾಲ್ । ಮೀರಾ ಪ್ರಭು ಸಂತನ ಸುಖದಾಈ ಭಕ್ತ ಬಛಲ ಗೋಪಾಲ್ ॥

'ಹೇ ನಂದಪುತ್ರ ಕೃಷ್ಣ, ನೀನು ನನ್ನ ಕಣ್ಣುಗಳಲ್ಲಿ ನೆಲೆಸು. ನಿನ್ನದು ಮೋಹನ ಮೂರ್ತಿ. ಶ್ಯಾಮವರ್ಣ. ವಿಶಾಲ ನಯನಗಳು. ನಿನ್ನ ತುಟಿಗಳ ಮೇಲಿರುವುದು ಅಮೃತರಸಪ್ರದಾಯಕ ಮುರಲಿ. ಎದೆಯ ಮೇಲೆ ತುಳಸೀ ಮಾಲೆ. ನಡದಲ್ಲಿ ಶೋಭಿಸುವ ಕಿರುಗೆಜ್ಜೆಗಳು. ನೂಪುರದ ಇಂಪು ಧ್ವನಿ. ನೀನು ಸಂತರಿಗೆ ಸುಖಪ್ರದಾತ್ರ, ಭಕ್ತವತ್ಸಲ ಗೋಪಾಲ.

ಸಿ. ಎನ್. ರಾಮಚಂದ್ರನ್ ಅವರ 'ಬಯಲು-ರೂಪ'

ಜಿ. ಬಿ. ಹರೀಶ

೧

ಎರಡು ದಶಕದಷ್ಟು ಕಾಲ ಕನ್ನಡ, ಸಂಸ್ಕೃತ ಮತ್ತು ಇಂಗ್ಲಿಷ್ ಸಾಹಿತ್ಯದ (ಮುಖ್ಯವಾಗಿ) 'ಸಹವಾಸ' ಮಾಡಿರುವವರು ಡಾ. ಸಿ. ಎನ್. ರಾಮಚಂದ್ರನ್. ಸಾಹಿತ್ಯ ಕ್ಷೇತ್ರಕ್ಕೆ ಕಾದಂಬರಿಕಾರರಾಗಿ ಕೈಯಿಟ್ಟ ಇವರ ಮೊದಲ ಕಾದಂಬರಿ 'ಶೋಧ'(೧೯೭೭). ತದನಂತರ, ಇಪ್ಪತ್ತೆರಡು ವರ್ಷಗಳ ಅಂತರದಲ್ಲಿ ಸಿ. ಎನ್. ಆರ್. ಅವರು ತಮ್ಮ ಬರವಣಿಗೆಯ ದಿಕ್ಕನ್ನು ಬದಲಿಸಿಕೊಂಡು, ವಿಮರ್ಶೆ-ಅನುವಾದಗಳಲ್ಲಿ ವ್ಯಾಪಕವಾಗಿ ತೊಡಗಿಸಿಕೊಂಡರು. 'ಸಾಹಿತ್ಯ ವಿಮರ್ಶೆ' (೧೯೮೯), 'ಓದುಗರು ಮತ್ತು ಓದುವಿಕೆ'(೧೯೯೮), 'ವಸಾಹತೋತ್ತರ ಚಿಂತನೆ' (೨೦೦೦), 'ತ್ರಿವೇಣಿ' (೧೯೯೮), 'ಎಡ್ವರ್ಡ್ ಸೈದ್'(೨೦೦೩), 'ಪರಂಪರೆ-ಪ್ರತಿರೋಧ' (೨೦೦೨), 'ಸಂಕಥನಗಳು' (೨೦೦೪) ಇವು ಅವರ ಕನ್ನಡ ವಿಮರ್ಶಾ ಕೃತಿಗಳು. ಇಂಗ್ಲಿಷಿನಲ್ಲಿ ಕೂಡ ಅವರು ಕನ್ನಡ-ಕನ್ನಡೇತರ ವಿಷಯಗಳನ್ನು ಕುರಿತು ಬರೆದಿದ್ದಾರೆ. 'ತ್ರಿವೇಣಿ'(೧೯೯೮), ಕೆ. ಶಿವರಾಮ ಕಾರಂತ(೨೦೦೧) ಇವು ಅವರ ಪ್ರಮುಖ ಇಂಗ್ಲಿಷ್ ವಿಮರ್ಶಾ ಕೃತಿಗಳು. 'ಮಲೆಮಾದೇಶ್ವರ' ಕಾವ್ಯವನ್ನು ದೀರ್ಘ ಮುನ್ನುಡಿಯೊಡನೆ 'Male Madeshwara' ಎಂಬ ಹೆಸರಿನಲ್ಲಿ ಸಿ. ಎನ್. ಆರ್. ಅನುವಾದಿಸಿದ್ದು, ಇದು ಸಾಹಿತ್ಯ ಅಕಾಡೆಮಿಯಿಂದ ಪ್ರಕಟಗೊಂಡಿದೆ(೨೦೦೧).

ಪ್ರೊ. ಸಿ. ಎನ್. ಆರ್. ಎಂದೇ ಸಾಹಿತ್ಯಾಸಕ್ತರ ನಡುವೆ ಪ್ರಸಿದ್ಧರಾಗಿರುವ ರಾಮಚಂದ್ರನ್ ಅವರ ವಿಮರ್ಶೆ ಕನ್ನಡಕ್ಕೆ ಹೊಸ ವೈಚಾರಿಕ ಸಂವೇದನೆಯ ಆಯಾಮ ತಂದುಕೊಟ್ಟಿರುವುದರಲ್ಲಿ ಸಂದೇಹವಿಲ್ಲ. ಈಗ ನಾನು ಅವರ ಆಯ್ದ ವಿಮರ್ಶಾ ಲೇಖನಗಳ ಸಂಕಲನ, 'ಬಯಲು-ರೂಪ' ಕುರಿತು ಕೆಲವು ಮುಖ್ಯ ಅಂಶಗಳನ್ನು ಇಲ್ಲಿ ಚರ್ಚಿಸುತ್ತೇನೆ.

ಕೆಲವು ಮುಖ್ಯ ಎನ್ನುವುದಕ್ಕೆ ಕಾರಣವಿದೆ. "ಅಪಾರ ವಿದ್ವತ್ತು, ಸಾಹಿತ್ಯ ಕೃತಿಯ ಸಾವಯವ ಸ್ವರೂಪದ ಅರಿವು, ಸಾಹಿತ್ಯದ ಅಧ್ಯಯನದಲ್ಲಿ ಒಳನೋಟಗಳನ್ನು ಕಾಣಿಸಬಲ್ಲ ಪ್ರತಿಭೆ– ಇವುಗಳ ತ್ರಿವೇಣಿ ಸಂಗಮ ಡಾ. ಸಿ. ಎನ್. ರಾಮಚಂದ್ರನ್ ಅವರ ಸಾಹಿತ್ಯ ವಿಮರ್ಶೆ... ಸಾಹಿತ್ಯ ಕೃತಿಗೆ, ಸಾಹಿತ್ಯ-ಸಂಸ್ಕೃತಿಗಳಿಗೆ ಮತ್ತು ಸಮಾಜಕ್ಕೆ : ಈ ಮೂರು ಹೊಣೆಗಳನ್ನು ಸಮರ್ಥವಾಗಿ ನಿರ್ವಹಿಸುವ ಸಾಹಿತ್ಯ ವಿಮರ್ಶೆ... ಅವರದು." (ಎಲ್. ಎಸ್. ಶೇಷಗಿರಿರಾವ್ : 'ಬಯಲು-ರೂಪ' ಸಂಪುಟ-೨ : ಬೆನ್ನುಡಿ). ಇದು ಸಿ. ಎನ್. ಆರ್. ಅವರ ವಿಮರ್ಶಾ ಶಕ್ತಿಯ ಸ್ವರೂಪ, ಅಳವು. ಅವರು ಕಾಲಕಾಲಕ್ಕೆ ಬರೆದ ಲೇಖನಗಳು ಮತ್ತು ಅವರದೇ ಪ್ರಕಟಿತ ಗ್ರಂಥಗಳಿಂದ ಆಯ್ದ ಲೇಖನಗಳ ಸಂಕಲನವೇ 'ಬಯಲು-ರೂಪ' (ಸಂಪುಟ-೧, ಕಾವ್ಯ, ನಾಟಕ, ಭಾಷಾಂತರ, ಪು. xvii+381; ಸಂಪುಟ-೨, ಸಣ್ಣ ಕತೆ, ಕಾದಂಬರಿ, ವಿಮರ್ಶೆ, ಸಂವಾದ, ಪು. iv+551; ಸಪ್ನ ಬುಕ್ ಹೌಸ್, ಗಾಂಧಿನಗರ, ಬೆಂಗಳೂರು). ಒಟ್ಟು ೯೩೨ ಪುಟಗಳ ವಿಸ್ತಾರದ, ೭೫ ಲೇಖನಗಳ ಎರಡು ಸಂಪುಟಗಳ ಸ್ಥೂಲ ಪರಿಚಯ ಮಾಡುವುದೂ ಅಸಾಧ್ಯ. ಆದ್ದರಿಂದ ಸಿ. ಎನ್. ಆರ್. ಅವರಿಂದ ಪಡೆಯಬಹುದಾದ

ಹಲವು ಒಳನೋಟಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಪ್ರಸ್ತಾಪಿಸಿ, ಉಳಿದಿದ್ದನ್ನು ಓದುಗರ ಪಾಲಿಗೆ ಬಿಡುತ್ತೇನೆ.

(೧) ಸಿ. ಎನ್. ಆರ್. ಅವರ ವಿಮರ್ಶಾ ದೃಷ್ಟಿಯೇನು? ಎಂಬುದು ಕುತೂಹಲದ ಪ್ರಶ್ನೆ. 'ಜಿ. ಎಸ್. ಎಸ್. : ಸಫಲ ಕವಿ-ವಿಮರ್ಶಕ' ಲೇಖನದಲ್ಲಿ (ಸಂ. ೨, ಪು. ೫೯೧) ಅವರು ಹೇಳಿರುವ ಮಾತು ಗಮನಿಸಿ : "ವಿಮರ್ಶೆಯನ್ನು/ತಾತ್ವಿಕ ಚಿಂತನೆಯನ್ನು ನಾವೊಂದು 'ರಿಲೇ ರೇಸ್'ಗೆ ಹೋಲಿಸಬಹುದು. ಪ್ರತಿಯೊಬ್ಬ ಪ್ರಮುಖ ವಿಮರ್ಶಕನೂ ತನ್ನದೇ ಆದ ಹೊಸ ಮಾರ್ಗವನ್ನು ಸಾಧ್ಯವಿದ್ದಷ್ಟೂ ಕ್ರಮಿಸಬೇಕೆಂದು ನಾವು ಅಪೇಕ್ಷಿಸುತ್ತೇವೆ..." ಅದಕ್ಕೆಂದೇ ಸಿ. ಎನ್. ಆರ್. ಯಾವುದೇ ಮಾತನ್ನು ಹೇಳುವುದಕ್ಕೂ ಮೊದಲು ಹಿಂದಿನ/ಸಮಕಾಲೀನ ವಿಮರ್ಶಕರು ಹೇಳಿರುವುದನ್ನು ಗಮನಿಸಿ ಅದಕ್ಕೆ ತಮ್ಮ ಟಿಪ್ಪಣಿ ಸೇರಿಸುವುದಿದ್ದರೆ ಸೇರಿಸಿ ಮುಂದುವರಿಯುತ್ತಾರೆ. ಇದು ಅವರ ವಿಮರ್ಶಾ ವಿಧಾನದ ಪ್ರಮುಖ ಲಕ್ಷಣವಾಗಿದೆ.

(೨) ಸಿ. ಎನ್. ಆರ್. ಅವರ ಎಲ್ಲ ವಿಮರ್ಶೆಗಳೂ ಅಧ್ಯಯನ, ವಿಷಯ ಸಂಗ್ರಹ, ಮಂಡನೆಯ ದೃಷ್ಟಿಯಿಂದ ಸಮತೂಕ ತೂಗುತ್ತವೆ. ಆದರೆ ಅವರ ಮನಸ್ಸು ಹೃದಯದೊಡನೆ ಸೇರಿದಾಗ ಸೊಗಸಾಗಿ ಬರೆಯಬಲ್ಲರು ಎಂಬುದಕ್ಕೆ 'ಭಕ್ತಿ ಸಾಹಿತ್ಯ : ಒಂದು ವಿವೇಚನೆ' ಒಂದು ಉದಾಹರಣೆ ಮಾತ್ರ. "ತನ್ನ ವಿಪುಲತೆಯಿಂದಾಗಿ ಮತ್ತು ಶ್ರೀಮಂತಿಕೆಯಿಂದಾಗಿ ಭಕ್ತಿ ಸಾಹಿತ್ಯವು ವಿಮರ್ಶಕರಿಗೆ ದೊಡ್ಡ ಸವಾಲಾಗಬಹುದು" ಎಂದು ಆರಂಭವಾಗುವ ದೀರ್ಘ ಲೇಖನದಲ್ಲಿ ಸಿ. ಎನ್. ಆರ್. "ಭಕ್ತಿ ಸಾಹಿತ್ಯದ ಕೇಂದ್ರ ನಿಜವಾಗಿ ಮಾನವನಲ್ಲದೆ ದೇವರಲ್ಲ, ಮತ್ತು ಆ ಸಾಹಿತ್ಯ ಒತ್ತು ಕೊಡುವುದು ಇಹಕ್ಕೇ ವಿನಹ ಪರಕ್ಕಲ್ಲ" (ಸಂ. ೧೨, ಪು. ೩೧), ಎಂದು ವಾದಿಸುತ್ತಾರೆ, ಕಾರಣಗಳನ್ನು ಕೊಡುತ್ತಾರೆ. ಅವರು ಸಂಸ್ಕೃತದ 'ಶ್ಯಾಮಲಾ ದಂಡಕ' ಕುರಿತು ಬರೆದಿರುವ ಸಾಲುಗಳಲ್ಲಿ ಏಕಾಗ್ರ ಪ್ರತಿಭೆ ಕಂಡುಬರುತ್ತದೆ.

(೩) 'ಭಕ್ತಿ ಸಾಹಿತ್ಯ...'ದಂಥ ಏಕಾಗ್ರ ಪ್ರತಿಭೆ ಮತ್ತೆ ಸಿ. ಎನ್. ಆರ್. ಅವರಲ್ಲಿ ಕಂಡುಬರುವುದು 'ಕುಮಾರವ್ಯಾಸ ಭಾರತ ಮತ್ತು ಜನಪದ ಮಹಾಭಾರತಗಳು' ಲೇಖನದಲ್ಲಿ. ವೈಚಾರಿಕತೆ ಸರಳವಿದ್ದಷ್ಟೂ ಕಥೆ ಪಡೆಯುವ ಪ್ರಾಮುಖ್ಯ, ವೈಚಾರಿಕತೆ ಸಂಕೀರ್ಣವಾದಷ್ಟೂ ಕಥೆಗಿಂತ ಅದೇ ಪ್ರಮುಖವಾಗುವಿಕೆಯನ್ನು ಭಿಲ್ಲ ಜನಾಂಗದ 'ಭಾರತ್', ಕನ್ನಡದ 'ಗಜಮೋಹಿನಿ', ಕುಮಾರವ್ಯಾಸ ಭಾರತಗಳ ಮುಖಾಮುಖಿಯ ಬೆಳಕಿನಲ್ಲಿ ಸಿ. ಎನ್. ಆರ್. ಬಿಚ್ಚಿ ತೋರಿಸಿದ್ದಾರೆ. ಅಪಾರವಾದ ಒಳನೋಟವಿರುವ ಈ ಲೇಖನದಲ್ಲಿ ಸಿ. ಎನ್. ಆರ್. ವಿಸ್ಮಯ ಹುಟ್ಟಿಸುವಂಥ ಒಳನೋಟಗಳನ್ನು ಕೊಟ್ಟಿದ್ದಾರೆ. ಉದಾಹರಣೆಗೆ ಕೆಲವನ್ನು ನೋಡಬಹುದು :

ಅ) " 'ಭಿಲ್ಲ ಭಾರತ'ದ ಜನಾಂಗಕ್ಕೆ ಕೌರವರು ಮತ್ತು ಪಾಂಡವರು ಇಬ್ಬರೂ ಒಂದೇ; ಅಧಿಕಾರದ ಸ್ಪರ್ಧಿಗಳು. ಅವರ ನಡುವೆ 'ಸಜ್ಜನರು-ದುರ್ಜನರು' ಎಂಬಂತಹ ಮೌಲ್ಯಾತ್ಮಕ ಗ್ರಹಿಕೆಯಿಲ್ಲ. ಆದ್ದರಿಂದ ವಾಸುಕಿ ದ್ರೌಪದಿಯನ್ನು ಭೋಗಿಸಿದರೂ ಆ ಕಥನಕಾರರಿಗೆ ಅದಷ್ಟೇನೂ ಮಹತ್ವಪೂರ್ಣ ಘಟನೆಯಾಗುವುದಿಲ್ಲ." (ಸಂ. ೧, ಪು. ೯೫).

ಆ) "ವರ್ಣಾಶ್ರಮ ವ್ಯವಸ್ಥೆಯ ಹೊರಗೆ ಕರ್ಣ ದುರಂತ ಪಾತ್ರವಾಗುವುದು ಸಾಧ್ಯವೇ ಇಲ್ಲ. ಭಿಲ್ಲ ಭಾರತದಲ್ಲಿ ಅವನೂ ಒಬ್ಬ ವೀರ, ಅಷ್ಟೇ". (ಅದೇ).

೪) ಸಿ. ಎನ್. ಆರ್. ಅವರ ವಿಮರ್ಶೆಯ ಇನ್ನೊಂದು ದೊಡ್ಡ ಗುಣವೆಂದರೆ ಓದುಗರ ಬಗೆಗಿನ ಗೌರವ. ಅವರ ಯಾವುದೇ ಬರಹದಲ್ಲೂ 'ಶಿಸ್ತಿ'ದೆ. ತಾವು ಆಯ್ಕೆ ಮಾಡಿದ ವಿಷಯ, ಅದರಲ್ಲಿ ಹೇಳಲು ಹೊರಟಿರುವುದರ ಪಾತ್ರ-ಪ್ರಮಾಣದ ಅರಿವನ್ನು ಸಾಮಾನ್ಯವಾಗಿ ಲೇಖನದ ಮೊದಲ ಭಾಗದಲ್ಲೇ ಮಾಡಿಕೊಡುತ್ತಾರೆ. ಇದರಿಂದ ಓದುಗನಿಗೆ ಲೇಖನ ಮುಂದುವರಿಸಲು/ಚರ್ಚಿಸಲು ಅವಕಾಶವಾಗುತ್ತದೆ. ಉದಾಹರಣೆಗೆ– 'ಜನ್ನನ ಯಶೋಧರ ಚರಿತೆ : ಕಥನ-ಸಂಕಥನ'ದ ಆರಂಭದಲ್ಲಿ, ಕನ್ನಡದ ವಿಮರ್ಶಕರು ಜನ್ನನನ್ನು ಕುರಿತು ವ್ಯಾಖ್ಯಾನಿಸಿರುವುದನ್ನು ಸ್ಮರಿಸಿಕೊಂಡು, "ಅವರೆಲ್ಲರ ವಾದ ವಿವಾದಗಳನ್ನು ಇಲ್ಲಿ ಮಂಡಿಸಲು ಅಸಾಧ್ಯ. ಆದ್ದರಿಂದ ನನ್ನ ವಿಷಯಕ್ಕೆ ನೇರವಾಗಿ ಸಂಬಂಧಿಸಿದ ಒಂದು ಲೇಖನವನ್ನು ಪ್ರಸ್ತಾಪಿಸಿ ನನ್ನ ಚರ್ಚೆಯನ್ನು ಪ್ರಾರಂಭಿಸುತ್ತೇನೆ. ೧೯೬೪ ರಲ್ಲಿ ಪ್ರಕಟವಾದ ಗಿರಡ್ಡಿ ಗೋವಿಂದರಾಜರ 'ಜನ್ನನ ಯಶೋಧರ ಚರಿತೆ' ಎಂಬ ಲೇಖನ ಈ ಕೃತಿಯ ಪುನರ್ವಿಮರ್ಶೆಯಲ್ಲಿ ಒಂದು ಮೈಲಿಗಲ್ಲು" (ಸಂ. ೧, ಪು. ೭೨) ಎಂದು ಘೋಷಿಸುತ್ತಾರೆ. ಸಿ. ಎನ್. ಆರ್. ಅವರು ತಾವು ನೀಡುವ ಒಳನೋಟಗಳ ಬೆಲೆಯನ್ನು ಅರಿತವರಾಗಿದ್ದು ಅದಕ್ಕೆ ತಕ್ಕ "ಅರ್ಥವಂತಿಕೆಯ ಬಾಗಿಲುಗಳನ್ನು" ಕಲ್ಪಿಸಿಕೊಡುತ್ತಾರೆ. ಇದರಿಂದಾಗಿ ಅವರಿಗೆ ವಿಮರ್ಶಕ ಮತ್ತು ಸಾಹಿತ್ಯದ ಇತರ (ವಿಮರ್ಶೆ ಬರೆಯದಿರುವ) ಓದುಗರೊಡನೆ ಸಂವಹನ ಸಾಧ್ಯವಾಗುತ್ತದೆ.

೫) ವಿಮರ್ಶಕರ ನಿರ್ಲಕ್ಷ್ಯದಿಂದ ಕನ್ನಡದ ಎಷ್ಟೋ 'ಉತ್ತಮ' ಲೇಖಕರು ಚರ್ಚೆಯ ಆಚೆ ಉಳಿಯುವುದುಂಟು. ಸಿ. ಎನ್. ಆರ್. ಅವರು ಈಗಾಗಲೇ ಚರ್ಚೆಗೆ ಒಳಗಾಗಿರುವ ಹೊಸಗನ್ನಡ ಸಾಹಿತಿಗಳೊಡನೆ, ಚರ್ಚೆಗೆ ಯೋಗ್ಯ ಗ್ರಾಸ ಒದಗಿಸುವ ಕುಸುಮಾಕರ ದೇವರಗೆಣ್ಣೂರರ ಕಾದಂಬರಿಗಳು, ವೀರಪ್ಪ ಮೊಯಿಲಿಯವರ 'ಕೊಟ್ಟ' ಮತ್ತು 'ತೆಂಬರೆ' ಹಾಗೂ ಮುಮ್ಮಡಿ ಕೃಷ್ಣರಾಜ ಒಡೆಯರ್ ಬರೆದಿರುವ 'ಸೌಗಂಧಿಕಾ ಪರಿಣಯ' ಕುರಿತು ವಿಮರ್ಶಿಸಿದ್ದಾರೆ. ಇದು ವಿಮರ್ಶಕರಾಗಿ ಹೊಸತನ್ನು ಹುಡುಕುವ ಅವರ ಶೋಧಕ ಪ್ರವೃತ್ತಿಗೆ ಸಾಕ್ಷಿ. ಬ್ರಿಟಿಷ್ ಆಡಳಿತ ಕಾಲದಲ್ಲಿ ಮೈಸೂರು ಸಂಸ್ಥಾನದಲ್ಲಿ ನಡೆದ ಅಧಿಕಾರ ಕಸಿದುಕೊಳ್ಳುವ ಐತಿಹಾಸಿಕ ಪ್ರಕ್ರಿಯೆಯ ಬೆಳಕಿನಲ್ಲಿ ಸಿ. ಎನ್. ಆರ್. 'ಸೌಗಂಧಿಕಾ ಪರಿಣಯ' ಕುರಿತು ಚರ್ಚೆ ಬೆಳೆಸುತ್ತಾರೆ. ಕನ್ನಡದಲ್ಲಿ ಈ ಕೃತಿಯ ಬಗ್ಗೆ ಪ್ರಾಯಃ ಮತ್ತೊಂದು ಈ ಬಗೆಯ ಲೇಖನವಿಲ್ಲ!

೬) ಈಗ ಸಿ. ಎನ್. ಆರ್. ವಿಮರ್ಶೆಯಲ್ಲಿ ಕಂಡುಬರುವ ಕೆಲವು ಪರಿಕಲ್ಪನೆಗಳು ಮತ್ತು ಅವುಗಳ ಅನ್ವಯವನ್ನು ನೋಡಬಹುದು. 'ಪರಿಭ್ರಮಣ' ಮತ್ತು 'ಶೋಧ', 'ಸ್ವಾಭಿಮುಖತೆ' ಇವು ಅವರ ವಿಮರ್ಶೆಯ ಒಂದೆರಡು ಮುಖ್ಯ ಪರಿಕಲ್ಪನೆಗಳು. ಕಾಲಾತೀತ ಸಾಂಕೇತಿಕತೆ ಪಡೆದ 'ಆರ್ಕಿಟೈಪ್'ಗಳಲ್ಲಿ 'ಪರಿಭ್ರಮಣ' ಮತ್ತು 'ಶೋಧ' ಒಂದು ಪ್ರಮುಖ ಉದಾಹರಣೆ. ಹೋಮರನ ಕಾವ್ಯಗಳ ಪಾತ್ರ, ಯೂಲಿಸಿಸ್‌ನನ್ನು 'ಪರಿಭ್ರಮಣ' ಮತ್ತು 'ಶೋಧ'ದ ಪರಿಕಲ್ಪನೆಯಡಿ ಚರ್ಚಿಸಿ ಸಿ.ಎನ್.ಆರ್. ತಲುಪುವ ತೀರ್ಮಾನ ಹೀಗಿದೆ : "ಎಷ್ಟೋ ಸಲ ದಿಕ್ಕು-ದಿವಾಣವಿಲ್ಲದ ಅಲೆದಾಟಕ್ಕಿಂತ ಸಾವೇ ವಾಸಿ ಎಂದು ಯೋಚಿಸುತ್ತಿದ್ದ ಯೂಲಿಸಿಸ್ ಅಕಿಲೀಸ್ ಮುಂತಾದವರ ಮೂಲಕ ಎಷ್ಟೇ ನಿಷ್ಠುರ ಜೀವನವಾದರೂ ಸಾವಿಗಿಂತ ಮೇಲೆಂದು ತಿಳಿದುಕೊಳ್ಳುತ್ತಾನೆ. ಬದುಕು ಮತ್ತು ಆ ತಿಳುವಳಿಕೆಯ ಮೂಲಕ ತನ್ನ ಬದುಕಿನ ಬಗ್ಗೆ ಇದ್ದ ಜಿಗುಪ್ಸೆಯನ್ನು ದೂರ ಮಾಡಿ ಬದುಕಿನ ಪಾವಿತ್ರ್ಯವನ್ನು ಮನಗಾಣುತ್ತಾನೆ."

(ಸಂ. ೧, ಪು. ೧೧೫). ಲಕ್ಷ್ಮೀಶನ 'ಜೈಮಿನಿ ಭಾರತ' ಸಿವಿಎನ್‌ಆರ್ ಅವರಿಗೆ ಪ್ರಿಯವಾದ ಕಾವ್ಯ, ಆದರೆ ಅದನ್ನು ಅವರು ವೈಭವೀಕರಣ– ವ್ಯಾಖ್ಯಾನದ ನೆಲೆಯಲ್ಲಿ ನೋಡುವುದಿಲ್ಲ. ಬದಲಿಗೆ, ವರ್ಣವ್ಯವಸ್ಥೆಯ ಚೌಕಟ್ಟಿನಲ್ಲಿ ಬ್ರಾಹ್ಮ-ಕ್ಷಾತ್ರಗಳ ಮೇಲಾಟದ ನೆಲೆಯಲ್ಲಿ ನೋಡುತ್ತಾರೆ. ಮುಖ್ಯವಾಗಿ ಅರ್ಜುನನ ಪಾತ್ರದ ಮೂಲಕ ಅವರು ಕ್ಷಾತ್ರ ಮೌಲ್ಯದ ಬಗ್ಗೆ ತೋರಿಸುವ ಪ್ರತಿಕ್ರಿಯೆ ಗಮನಾರ್ಹ. ಅರ್ಜುನ ಯಜ್ಞಾಶ್ವದ ಹಿಂದೆ ಹೊರಟು ಪದೇ ಪದೇ ಏಕೆ ಸೋಲುತ್ತಾನೆ?– ಇದು ಅವರನ್ನು ಕಾಡಿರುವ ಪ್ರಶ್ನೆ. ಕೃಷ್ಣನ ಬೆಂಬಲವಿಲ್ಲದೆ, ಅರ್ಜುನ ನಿರುಪಯುಕ್ತ ಎಂಬ ಸಾಂಪ್ರದಾಯಿಕ ಭಕ್ತಿಪರ ವ್ಯಾಖ್ಯಾನವನ್ನು ಪಕ್ಕಕ್ಕಿಟ್ಟು ಸಿವಿಎನ್‌ಆರ್ ತರುವ ಒಳನೋಟ ಹೀಗಿದೆ : "ಅರ್ಜುನನ ಸೋಲು ಮತ್ತು ಸಾವು ಕ್ಷಾತ್ರಧರ್ಮದ, ಅಹಂಕಾರದ ಮತ್ತು ಕುಲಾಭಿಮಾನದ ಸೋಲು." "ರಾಜತ್ವವನ್ನು, ಕ್ಷಾತ್ರಧರ್ಮವನ್ನು ಮತ್ತು ಧೈರ್ಯ ಸಾಹಸ ಮುಂತಾದ ಯುದ್ಧಭೂಮಿಯ ಮೌಲ್ಯಗಳನ್ನು ಕವಿ ಸಂಪೂರ್ಣ ನಿರಾಕರಿಸುವುದು ಅರ್ಜುನನ ಪಾತ್ರದ ಮೂಲಕ." (ಪು. ೧೨೫). ಆದರೆ ಇಲ್ಲಿ ಏಳುವ ಪ್ರಶ್ನೆಯೆಂದರೆ– ಧೈರ್ಯ ಸಾಹಸಗಳನ್ನು ಕೇವಲ "ಯುದ್ಧಭೂಮಿಯ ಮೌಲ್ಯ"ಗಳು ಎಂದು ಏಕೆ ಸೀಮಿತಗೊಳಿಸಿ ವ್ಯಾಖ್ಯಾನಿಸಬೇಕು? ಪಂಪನ ಬಾಹುಬಲಿಯದು ಆಧ್ಯಾತ್ಮಿಕ ಧೈರ್ಯ-ಸಾಹಸವಲ್ಲವೆ? ಕುಮಾರವ್ಯಾಸನ ಉತ್ತರಕುಮಾರನ ಬೆಳವಣಿಗೆ ಧೈರ್ಯ ಸಾಹಸದತ್ತ ನಡೆಸುವ ಪ್ರಯಾಣವಲ್ಲವೆ? (ಈ ಅಂಶಕ್ಕೆ ನಾನು ಜಿ. ಎಸ್. ಆಮೂರರ ಉತ್ತರಕುಮಾರನ ಪಾತ್ರ ('ಸಾತ್ವಿಕ ಪಥ' ಗ್ರಂಥ ಲೇಖನಕ್ಕೆ ಆಭಾರಿ). ಅಷ್ಟೇಕೆ ಕಾರಂತರ 'ಬೆಟ್ಟದ ಜೀವ'ದ ಗೋಪಾಲಯ್ಯ, ಶಂಕರಿ, ಭೈರಪ್ಪನವರ 'ಗೃಹಭಂಗ'ದ ನಂಜಮ್ಮ, ಚಿತ್ತಾಲರ 'ಪುರುಷೋತ್ತಮ'ದ ಪುರುಷೋತ್ತಮನ ಪಾತ್ರ– ಇವೆಲ್ಲ ಬೇರೆ ಬೇರೆ ರುಚಿಭೇದದಲ್ಲಿಯೂ ಮಾನವ ಜೀವನದ ಧೈರ್ಯ-ಸಾಹಸಗಳ ಅದಮ್ಯ ಪ್ರತೀಕಗಳಲ್ಲವೆ? ನನ್ನ ಪ್ರಶ್ನೆಯಿರುವುದು– ವರ್ಣವ್ಯವಸ್ಥೆಯ ನೆಲೆಯಲ್ಲಿ ಆರೋಪಿಸಿರುವ "ಇಂತಿಂಥ ಮೌಲ್ಯ ಇಂತಿಂಥ ವರ್ಣಕ್ಕೆ" ಎಂಬ ಸಾಂಪ್ರದಾಯಿಕತೆಯನ್ನು ಸಿವಿಎನ್‌ಆರ್ ಪರಿಷ್ಕರಿಸಿ ನೋಡಬಹುದಿತ್ತು ಎಂದಷ್ಟೆ. ಹೀಗೆಂದ ಮಾತ್ರಕ್ಕೆ ಈ ಲೇಖನದ ಮೌಲಿಕತೆ ಕಡಿಮೆಯಾಗದು. ಋತುಗಳ ಚಲನೆ ಮತ್ತು ಅರ್ಜುನನ ಬದುಕಿನ ಗತಿಯನ್ನು ಸಿವಿಎನ್‌ಆರ್ ಅದ್ಭುತ ಎನ್ನುವಂತೆ ಹಿಡಿದಿಟ್ಟಿದ್ದಾರೆ (ಪು. ೧೨೬). ಸಿವಿಎನ್‌ಆರ್ ಮಾಡಿರುವ 'ಜೈಮಿನಿ ಭಾರತ' ವಿಮರ್ಶೆ, ಬೇಂದ್ರೆ, ವಾಮನ ಬೇಂದ್ರೆ (ಅದನ್ನು ಅವರೇ ಸೂಚಿಸಿದ್ದಾರೆ) ರೀತಿಯದಾದರೂ ಅವರು ಬೇಂದ್ರೆಯಂತೆ ಭಕ್ತಿಯ ಪಾರಮ್ಯ ಎತ್ತಿ ಹಿಡಿಯುವುದಿಲ್ಲ. ಬದಲಾಗಿ ಕೌಟುಂಬಿಕ ('ಮನೆ') ನೆಲೆಯನ್ನು ಎತ್ತಿಹಿಡಿಯುತ್ತಾರೆ.

ನನಗೆ ವಿಚಿತ್ರವೆಂದು ತೋರುವುದೆಂದರೆ– ಸಿವಿಎನ್‌ಆರ್ ಕೆಲವೊಮ್ಮೆ ಅನಗತ್ಯವಾಗಿ ಬೇರೆಯವರಿಗೆ 'ಕ್ರೆಡಿಟ್' ಕೊಡುವುದು! ಇಷ್ಟು ಮೌಲಿಕ ಲೇಖನ ಬರೆದ ಅವರು, ಇದೇ ಲೇಖನದ ಮಧ್ಯದಲ್ಲಿ ಡಾ. ವಾಮನ ಬೇಂದ್ರೆಯವರ 'ಲಕ್ಷ್ಮೀಶನ ಜೈಮಿನಿ ಭಾರತ : ಒಂದು ಅಧ್ಯಯನ' ಗ್ರಂಥದಿಂದ ತಾವು ಪ್ರಯೋಜನ ಪಡೆದಿರುವುದನ್ನು ಕೃತಜ್ಞತೆಯಿಂದ ನೆನೆಸಿಕೊಳ್ಳುತ್ತಾರೆ. ಅಲ್ಲಿಗೇ ನಿಲ್ಲದೆ ಭಾವಾತಿರೇಕದಿಂದ– "ನನ್ನ ಲೇಖನ ಅವರ ಅನೇಕ ವಿಚಾರಗಳ ಪ್ರಯೋಜನವನ್ನು ಪಡೆದುಕೊಂಡ ಅವರ ಗ್ರಂಥದ ಒಂದು ಅನುಬಂಧವೆಂದೂ ಹೇಳಬಹುದು". (ಪು. ೧೧೭) ಯಾವುದೇ ಸ್ವತಂತ್ರ, ಅಧ್ಯಯನದ ನೆಲೆಯಿಂದ ಬರೆದ ಲೇಖನ, ಮತ್ತ್ಯಾವುದೇ ಲೇಖಕನ (ಅವನು ಎಷ್ಟೇ ದೊಡ್ಡ/ಸಾಧಾರಣ/ಸಾಮಾನ್ಯ

ಲೇಖಕನಾಗಿರಬಹುದು) ಅಥವಾ ಕೃತಿಯ ಅನುಬಂಧವಾಗಿರಲು ಸಾಧ್ಯವೇ? ಈ ಮಾತುಗಳನ್ನು ಸಿವಿನ್‌ಆರ್ ಅವರ ವಿನಯದ ಪ್ರತೀಕ ಎಂದಷ್ಟೇ ತೆಗೆದುಕೊಳ್ಳಬಹುದು.

೮) 'ಸ್ವಾಭಿಮುಖತೆ' ಸಿವಿನ್‌ಆರ್ ವಿಮರ್ಶೆಯ ಮತ್ತೊಂದು ಮುಖ್ಯ ಪರಿಕಲ್ಪನೆ. ಅದನ್ನು ಅವರು ಹೀಗೆ ಗುರುತಿಸಿ– ಆ ನೆಲೆಯಲ್ಲಿ ಮುದ್ದಣ, ಅಡಿಗ, ರಾಮಚಂದ್ರ ಶರ್ಮ ಸಾಹಿತ್ಯದ ವಿಮರ್ಶೆ ಮಾಡಿದ್ದಾರೆ :

೧. ಕೃತಿಯಲ್ಲಿಯೇ ಬರುವ 'ಕಲ್ಪಿತ ಲೇಖಕ' (ಈತ ಪಾತ್ರವಿರಬಹುದು ಅಥವಾ 'ನಾನು/ ನನ್ನ' ಎಂದು ಬಳಸುವ ಸ್ವಯಂ ಲೇಖಕನೇ ಇರಬಹುದು.

೨. ಪಾತ್ರಗಳ ಲೋಕ ಮತ್ತು 'ಕಲ್ಪಿತ ಲೇಖಕ'ನು ನಿರ್ಮಿಸಿಕೊಂಡ ಕಾಲ್ಪನಿಕ ಲೋಕ– ಎಂಬ ಎರಡು ಲೋಕಗಳ ಕಲ್ಪನೆ.

(ಇಲ್ಲಿ ಹೇಳಬೇಕಾದ ಸ್ವಾರಸ್ಯವೆಂದರೆ, ನನಗೆ ತಿಳಿದಂತೆ 'ಅಲ್ಪಡು' ಪ್ರತ್ಯಯವನ್ನು ಬಳಸುವ ಏಕೈಕ ವಿಮರ್ಶಕ ಸಿವಿನ್‌ಆರ್! ಕರ್ಮಣಿ ಪ್ರಯೋಗ ಕೂಡ ಅಗತ್ಯವಿದ್ದಾಗ ಅವರ ಲೇಖನಗಳಲ್ಲಿ ಕಾಣಿಸಿಕೊಳ್ಳುತ್ತದೆ. (ಉದಾ : ಸಂ. ೧, ಪು. ೧೩೦).

೩. ಒಂದನ್ನೊಂದು ಹಿಂಬಾಲಿಸುವ ಕಾಲ್ಪನಿಕ ಜಗತ್ತು ಮತ್ತು ಅದರ ವ್ಯಾಪ್ತಿ.

ಸಿವಿನ್‌ಆರ್ ಅವರು ರಾಮಾಯಣಗಳ ಪರಂಪರೆ ಮಹಾಕಾವ್ಯ ಪರಿಕಲ್ಪನೆಯನ್ನು ಪ್ರಶ್ನಿಸುವ ಧೈರ್ಯ, ಸಾಂಪ್ರದಾಯಿಕ ಕಾವ್ಯ ಮೌಲ್ಯಗಳನ್ನು ಮುರಿಯುವುದಕ್ಕೆ ಮತ್ತು "ಅಂತಹ ಮಹಾಕಾವ್ಯ ಪರಂಪರೆಯನ್ನು ಕುರಿತಾದ, ಮತ್ತು ಆ ಪರಂಪರೆಯನ್ನು ಪೋಷಿಸಿದ ಜೀವನ ಮೌಲ್ಯಗಳನ್ನು ಕುರಿತಾದ ಸಮಗ್ರ ಹಾಗೂ ಗಂಭೀರ ವಿಮರ್ಶೆಯಿದೆ" (ಪು. ೧೩೪) –ಎಂದು 'ರಾಮಾಶ್ವಮೇಧ'ದ ಸ್ವಾಭಿಮುಖತೆಯನ್ನು ನಿರ್ವಚಿಸುತ್ತಾರೆ.

ಗಂಭೀರವಾಗಿ ವಿಮರ್ಶೆ ಸಾಗುವಾಗಲೇ ಸಮರವರ್ಣನೆಗೆ ಮನೋರಮೆ ತೋರಿಸುವ ಪ್ರತಿಕ್ರಿಯೆಯನ್ನು ಸಿವಿನ್‌ಆರ್ ಸ್ವಲ್ಪ ತುಂಟತನದಿಂದ ಗುರುತಿಸುತ್ತಾರೆ : "ಸಾಹಿತ್ಯ ವಿಮರ್ಶೆಯ ಪ್ರಮುಖ ಸಾಧನವಾಗಿ ನಿದ್ದೆಯನ್ನು ಉಪಯೋಗಿಸುವವರಲ್ಲಿ ಮನೋರಮೆಯೇ ಮೊದಲಿನವಳೆಂದು ಕಾಣುತ್ತದೆ" (ಪು. ೧೩೯).

'ಅಡಿಗರ ಕಾವ್ಯ : ಪ್ರಮುಖ ಕಾಳಜಿಗಳು' –ಲೇಖನ, ಕಾವ್ಯಕ್ರಿಯೆ –ಕಾವ್ಯ ಸೃಷ್ಟಿಯ ಅವಲೋಕನದ ಹಿನ್ನೆಲೆಯಲ್ಲಿ ಅಡಿಗರ ಕಾವ್ಯದಲ್ಲಿ ಸ್ವಾಭಿಮುಖತೆಯನ್ನು ತೋರಿಸುತ್ತದೆ. 'ನನ್ನ ನುಡಿ', 'ಪ್ರಾರ್ಥನೆ', 'ಶರದ್ಗೀತ', 'ಕೂಪಮಂಡೂಕ', 'ಶ್ರೀರಾಮನವಮಿಯ ದಿವಸ' ಕವನಗಳ ಮೂಲಕ ಸ್ವಾಭಿಮುಖತೆಯನ್ನು ನಿರೂಪಿಸುವ ಲೇಖನ, ಅಡಿಗರ ಕಾವ್ಯದಲ್ಲಿ ಈ ಅಂಶಗಳೊಂದಿಗೆ ಬಹುಧ್ವನಿತ, ದುರಂತ ಪ್ರಜ್ಞೆಯನ್ನು ಗುರುತಿಸುತ್ತಾರೆ.

'ರಾಮಚಂದ್ರ ಶರ್ಮರ ಕಾವ್ಯ : ಸಮೀಕ್ಷೆ' ಲೇಖನವೂ ಮತ್ತೊಂದು ನೆಲೆಯಿಂದ ಶರ್ಮರಲ್ಲಿ ಸ್ವಾಭಿಮುಖತೆಯನ್ನು ನಿರೂಪಿಸುತ್ತದೆ. ಅಡಿಗರಿಗಿಂತ (ಉಳಿದ ನವ್ಯ ಕವಿಗಳಿಗಿಂತ) ಶರ್ಮರು ಹೆಚ್ಚು ಸ್ವಾಭಿಮುಖಿ ಎಂಬುದು ಅವರ ನಿಲುವು. ಇದಕ್ಕೆ ಆಧಾರವಾಗಿ ಗ್ರೀಕ್ ದೇವತೆ ಅಫ್ರೊಡೈಟಿಯ ರೂಪಕವನ್ನು ಶರ್ಮರ ಕವಿತೆಗಳ ಮೂಲಕ ವ್ಯಾಖ್ಯಾನಿಸುವ ಸಿವಿನ್‌ಆರ್ ಬರಹ, ಕನ್ನಡದಲ್ಲಿ ಗಂಭೀರ ವಿಮರ್ಶೆ ಬರೆಯಲು ಎಷ್ಟೊಂದು ಸಿದ್ಧತೆ ಬೇಕು ಎಂಬುದನ್ನು ತಿಳಿಸುತ್ತದೆ.

೨

ಸಿ. ಎನ್. ರಾಮಚಂದ್ರನ್ ಅವರ ವಿಮರ್ಶೆಯನ್ನು ಈಗ ಮತ್ತೊಂದು ನೆಲೆಯಿಂದ ನೋಡೋಣ. ಸಾಮಾನ್ಯವಾಗಿ ಕನ್ನಡದ ಅಭಿಜಾತ ಕಾವ್ಯಕ್ಕೆ ತೆರೆದುಕೊಂಡ ಮನಸ್ಸು ಸಂಸ್ಕೃತವನ್ನು ಆಪ್ಯಾಯಮಾನವಾಗಿಸಿಕೊಂಡು, ಜಾನಪದಕ್ಕೆ ಎರವಾಗುತ್ತದೆ (ಉದಾ : ಕುರ್ತಕೋಟಿಯವರ ವಿಮರ್ಶೆ). ಬೇರೊಂದು ಕಡೆ ಸಿಎನ್ಆರ್, ಕುರ್ತಕೋಟಿಯವರ ಬಗ್ಗೆ ಬರೆದ ಈ ಸಾಲುಗಳು ನೆನಪಾಗುತ್ತವೆ : "ಕುರ್ತಕೋಟಿಯವರು ತಾವು ಆಯ್ಕೆ ಮಾಡಿಕೊಂಡ ದಾರಿಯಲ್ಲೇ ನಡೆದರು– ಪ್ರಾಯಃ ಆವಶ್ಯಕತೆಗಿಂತ ಹೆಚ್ಚು ದೂರ" (ಸಂ. ೨, ಪು. ೩೭೮). ಸ್ವತಃ ಜಾನಪದ ವಿದ್ವಾಂಸರಾಗಿರುವ ಕಾರಣ, ಸಿಎನ್ಆರ್ ಅವರಿಗೆ ಪಂಪ, ಲಕ್ಷ್ಮೀಶ, ಕುಮಾರವ್ಯಾಸ ಎಷ್ಟು ಮುಖ್ಯರೋ ಹಾಲುಮತ ಪುರಾಣ, ಜುಂಜಪ್ಪನ ಕಾವ್ಯ, ಮಂಟೇಸ್ವಾಮಿ ಕಾವ್ಯ, ಭಿಲ್ಲ ಭಾರತಗಳ ಲೋಕವೂ ಅಷ್ಟೇ ಮುಖ್ಯ. ಪ್ರಾಯಃ ಅದಕ್ಕಿಂತಲೂ ಮುಖ್ಯ. ಸಾಹಿತ್ಯ ಚರಿತ್ರೆಯ ಸಾಂಪ್ರದಾಯಿಕ ವಿಂಗಡಣೆಯಲ್ಲೇ (ಅಂದರೆ ಹಳಗನ್ನಡದಿಂದ ದಲಿತ-ಬಂಡಾಯದ ತನಕ) ಸಿಎನ್ಆರ್ ವಿಮರ್ಶೆ ಸಾಗಿದರೂ ಅವರು ರಾಜಮಾರ್ಗದ ಸಮೀಪದಲ್ಲಿರುವ ಜಾನಪದ ಮಹಾಕಾವ್ಯಗಳ ಕಿರುದಾರಿಯನ್ನೂ ಸೇರಿಸಿಕೊಂಡು ಬರೆಯುತ್ತಾರೆ. ಹೀಗೆ ಸಂಸ್ಕೃತ-ಕನ್ನಡ-ಇಂಗ್ಲಿಷ್-ಜಾನಪದ (ಕೇವಲ ಕನ್ನಡ ಜಾನಪದ ಮಾತ್ರವಲ್ಲ) ಇವು ಸಿಎನ್ಆರ್ ಅವರ ವಿದ್ವತ್ತು ಮತ್ತು ಸಂವೇದನೆಯನ್ನು ರೂಪಿಸಿವೆ.

ನಮ್ಮ ಸಾಹಿತ್ಯದಲ್ಲಿರುವ ಕೊರತೆಗಳು, ಒಂದೇ ಕೃತಿಯೊಳಗಿನ ವಿಭಿನ್ನ ಹೊಂದಾಣಿಕೆಯಿರದ ನೆಲೆಗಳು, ಕನ್ನಡದ ಸದ್ಯದ ಪರಿಸ್ಥಿತಿ, ಮುಂದೆ ಆಗಬೇಕಾದ ಕೆಲಸ, ನಮ್ಮ ಸಾಹಿತ್ಯ ಮತ್ತು ಪಾಶ್ಚಾತ್ಯ ಸಾಹಿತ್ಯದ ಯಾವ ರೂಪಗಳು ಯಾವ ಹಿನ್ನೆಲೆಯಲ್ಲಿ ಜನಿಸಿದವು ಇವೆಲ್ಲ ಸಿಎನ್ಆರ್ ವಿಮರ್ಶೆಯ ಆಸಕ್ತಿಗಳು. ಅವರ ಈ ವಿಮರ್ಶಾ ಲೇಖನ ಸಂಪುಟಗಳ ಎಲ್ಲಾ ಲೇಖನಗಳ ಎಲ್ಲಾ ವಿಷಯಗಳನ್ನು ಒಪ್ಪಬೇಕೆಂದು ಸ್ವತಃ ಸಿಎನ್ಆರ್ ಕೂಡ ನಿರೀಕ್ಷಿಸುವುದಿಲ್ಲ. ಈ ಹಿನ್ನೆಲೆಯಿಂದ ಮಹತ್ವದ ಕೃತಿಯೊಂದನ್ನು ಓದಿದಾಗ, ನಾನು ಕೆಲವು ಪ್ರಶ್ನೆಗಳನ್ನು ಕೇಳಿಕೊಂಡಿದ್ದೇನೆ :

ನಾಡಿಗರ 'ಪಂಚಭೂತಗಳು' ಕಾವ್ಯದ ಬಗ್ಗೆ ಬರೆಯುತ್ತಾ ಸಿಎನ್ಆರ್ ಭಾರತೀಯ ಪರಂಪರೆ, ಸಂಸ್ಕೃತಿ, ಧರ್ಮಗಳ ಬಗ್ಗೆ ಮಾಡುವ ಮಂಡನೆಗಳನ್ನು "ಸತ್ಯದೂರವಷ್ಟೇ ಅಲ್ಲ, ಅಪಾಯಕಾರಿ ಕೂಡಾ. ಏಕೆಂದರೆ ಇಂತಹಾ 'ಮಹಾಕಥನ'ಗಳು ಇತರ ಅಲಕ್ಷಿತ ಹಾಗೂ ಅಂಚಿನಲ್ಲಿರುವ ಇತರ ಕಥನಗಳನ್ನು ಮತ್ತು ಚಿಂತನಾಮಾರ್ಗಗಳನ್ನು ಮರೆಮಾಡುತ್ತವೆ. ಇಂದಿನ ವಸಾಹತೋತ್ತರ ಕಾಲದಲ್ಲಿ ಯಾವುದು 'ಪಶ್ಚಿಮ ಬುದ್ಧಿ' ಯಾವುದು 'ಭಾರತೀಯ', ಯಾವುದು 'ದೇಸಿ', ಯಾವುದು 'ಪರಕೀಯ' ಎಂದು ಗುರುತಿಸುವುದು, ಪ್ರಾಯಃ, ಅಸಾಧ್ಯ; ಸಾಧ್ಯವಾದರೂ ವ್ಯರ್ಥ" (ಸಂ. ೧, ಪು. ೨೨೮) ಎಂದಿದ್ದಾರೆ.

ಪ್ರಾಯಃ ಸಿಎನ್ಆರ್ ಅವರ ವಿಮರ್ಶೆಯ ದೊಡ್ಡ ಮಿತಿ ಎಂದರೆ ಇಹದ ಆಚೆಗಿನ ಬದುಕಿನ ಬಗ್ಗೆ ಇರುವ ಥಿಯರಿಗಳ ಬಗೆಗಿನ ಅಸಮಾಧಾನ. (ಅವರು ಕರ್ಮ, ದೇವರು, ಧರ್ಮ, ಎಲ್ಲವನ್ನೂ ಒಪ್ಪಬೇಕಿತ್ತು ಎಂದಲ್ಲ.) 'ದೇಸಿ', 'ಪರಕೀಯ'... ಇತ್ಯಾದಿಯಾಗಿ ಶಿಕ್ಷಿತರು ಮಾಡುವ ವಿಂಗಡಣೆಯನ್ನು ಮೀರಿಯೂ ಮತಾಂತರ, ದೇವಾಲಯ ಪ್ರವೇಶ, ಸ್ತ್ರೀ ಮತ್ತು ದೇವಾಲಯ ಕುರಿತು ಇಂದಿಗೂ ಈ ದೇಶದಲ್ಲಿ ವ್ಯಾಪಕ ಪರ-ವಿರೋಧದ ಚರ್ಚೆ ನಡೆಯುತ್ತಿದೆಯಲ್ಲ, ಆ ಬಿಂದು ಯಾವುದು? ಅದಕ್ಕೆ ಸಾಹಿತ್ಯ ವಿಮರ್ಶೆಯಲ್ಲಿ ಸ್ಥಾನ

ದೊರೆತಿವೆಯೆ? ನನ್ನ ಮಾತಿಗೆ ಪೂರಕವಾಗಿ ಈ ಗ್ರಂಥಗಳಿಗೆ ಮುನ್ನುಡಿ ಬರೆದಿರುವ ಎಂ. ಜಿ. ಹೆಗಡೆಯವರ ಮಾತನ್ನು ಬಳಸುವುದಾದರೆ– "ಪರಂಪರೆ, ಸಾತತ್ಯ, ಕ್ಯಾನನ್, ದೇಶೀಯತೆ ಇವೆಲ್ಲ ಸಮಸ್ಯಾತ್ಮಕ ಪರಿಕಲ್ಪನೆಗಳು ನಿಜ. ಆದರೆ ಸಾಹಿತ್ಯ ವಿಮರ್ಶೆಯಲ್ಲಿ ಇವು ಅಪಾಯಕಾರಿ ಮಾರ್ಗಗಳೆಂದು ರಾಮಚಂದ್ರನ್‌ರು ಮತ್ತೆಮತ್ತೆ ಹೇಳುವಾಗ ಯೇಟ್ಸ್‌ನ ಅತಿಕಲ್ಪನೆ ಕುರಿತ ಎಡ್ವರ್ಡ್ ಸೈದ್‌ರ ನಿಲುವಿಗೆ ಲೀಲಾ ಗಾಂಧಿ ನೀಡಿದ ಪ್ರತಿಕ್ರಿಯೆ ನೆನಪಾಗುತ್ತದೆ : "Mercifully there is still a world of difference between Yeats' occultism and the Taliban militia's fanatical edict against female literacy in wartorn Afghanistan" (xvi).

ನನ್ನ ಪ್ರಶ್ನೆಯನ್ನು ಸ್ವಲ್ಪ ವಿಸ್ತರಿಸಿ ನೋಡಬಹುದು. ಭಾರತದ ನವೋದಯದಲ್ಲಿ ರಾಜಾ ರಾಮಮೋಹನ್ ರಾಯ್, ಕೇಶವಚಂದ್ರ ಸೇನ್‌ರ ಪಾತ್ರದಷ್ಟಾದರೂ ರಾಮಕೃಷ್ಣ ಪರಮಹಂಸರ ಕೊಡುಗೆ ಇದೆ ಎಂಬುದು ನನ್ನ ತಿಳಿವಳಿಕೆ. ಮಾಸ್ಟರ್ ಮಹಾಶಯನ ('ಮ') 'ಶ್ರೀರಾಮಕೃಷ್ಣ ವಚನವೇದ'ದ ಶೈಲಿಯಲ್ಲಿ ಇಂಗ್ಲಿಷ್ ಶಿಕ್ಷಿತ ಭಕ್ತನು ಗುರುವಿನ ಅನುಭವವನ್ನು ಖಚಿತವಾಗಿ ನಿರೂಪಿಸುತ್ತಲೇ, ಆ ಅನುಭವ ಪ್ರಪಂಚಕ್ಕೆ ಸಂಕೋಚ ವ್ಯಕ್ತಪಡಿಸುವ ನೆಲೆಯಿದೆ. ಆದರೆ, ಸ್ವಾಮಿ ಶಾರದಾನಂದರ 'ಶ್ರೀರಾಮಕೃಷ್ಣ ಲೀಲಾಪ್ರಸಂಗ'ದಲ್ಲಿ ಪರಮಹಂಸರ ತಾಂತ್ರಿಕ. ಶಾಕ್ತ, ವೈಷ್ಣವ ಇನ್ನಿತರ ಸಾಧನಾ ಮಾರ್ಗಗಳ ಸ್ಪಷ್ಟ ಚಿತ್ರಣವಿದೆ. ಈ ನೆಲೆಯನ್ನು ಅನುಭವದ ಹಂತದಲ್ಲಿ ಒಪ್ಪದವರಿಗೂ ಅದು ಪ್ರಾಮಾಣಿಕ ಎನಿಸಿದೆ (ಉದಾ : ಪ್ರಭುಶಂಕರ). ಪ್ರಾಯಃ ಭಾರತೀಯ ಧರ್ಮ, ಅದರ ಒಂದು ಮುಖ್ಯ ಸೆಲೆಯಾದ 'ಸಾಧನಾಮಾರ್ಗ'ವನ್ನು ಸಿಎನ್ಆರ್ ವಿಮರ್ಶೆ ಪರಿಗಣಿಸುವುದಿಲ್ಲ. ಈಗ ಇರುವಂತೆ ಅವರ ವಿಮರ್ಶೆ ದೊಡ್ಡ ಬೀಸಿನಲ್ಲಿ ಕನ್ನಡ ವಿಮರ್ಶೆಗೆ ಹೊಸ ಸಂವಾದಗಳನ್ನು ಸೇರ್ಪಡೆ ಮಾಡಿಯಾಗಿದೆ. ಆದರೆ, ನನ್ನ ಕಾಳಜಿಯಿರುವುದು ಗುಡ್ಡರು, ಅಲೆಮಾರು ಸಂತರಿರುವ ಜಾನಪದ ಕಾವ್ಯದ ಮೂಲ ಸೆಲೆ ಕೂಡ ಸಾಂಸ್ಥಿಕ ಧರ್ಮಗಳನ್ನು ಮೀರಿದ 'ಆಧ್ಯಾತ್ಮಿಕತೆ' ಅಲ್ಲವೆ? ಅದು ತಾಲಿಬಾನ್– ಶಿವಸೇನೆ ನಿಲುವಿಗಿಂತ ಸಾವಿರ ಪಾಲು ಉತ್ತಮ, ಜೀವಂತ, ಮಾನವೀಯವಲ್ಲವೆ? ಮತ ನಿರಪೇಕ್ಷ ಪ್ರಪಂಚ ಇರಬಹುದಲ್ಲದೆ ಅಧ್ಯಾತ್ಮ ನಿರಪೇಕ್ಷ ಪ್ರಪಂಚ ಇರಬಹುದೇ? ಹಾಗಿದ್ದರೆ ಅದರ ಕಾಳಜಿಗಳೇನು?

೩

ಮತ್ತೊಮ್ಮೆ ಸಂಕ್ಷೇಪವಾಗಿ ಹೇಳಬೇಕೆಂದರೆ, ಕನ್ನಡ-ಸಂಸ್ಕೃತ-ಇಂಗ್ಲಿಷ್-ಜಾನಪದಗಳಲ್ಲಿ ಸಮಾನಾಸಕ್ತಿ ಇರುವ ಆಳವಾದ ಅಧ್ಯಯನ, ಅಪೋಹ, ಕೇಡಿನ ಸಮಸ್ಯೆ ಇತ್ಯಾದಿ ಕಷ್ಟದ ತಾತ್ವಿಕ ವಿಷಯಗಳನ್ನು ಆರಿಸಿಕೊಂಡು ಬರೆಯುವ ಬೌದ್ಧಿಕ ಸಾಹಸ ಪ್ರವೃತ್ತಿ, ಸರಿ ಅನಿಸಿದ್ದನ್ನು ಯಾವ ಮುಲಾಜಿಗೆ ಕಟ್ಟುಬೀಳದೆ ಬರೆಯುವ/ಮಾತನಾಡುವ ಪ್ರಾಮಾಣಿಕತೆ ಮತ್ತು ಧೈರ್ಯ (ಇವು ಕ್ಷಾತ್ರ ಗುಣಗಳೇನಲ್ಲ!)– ಇವೆಲ್ಲದರ ಜೊತೆಗೆ ತಾನು ಹುಟ್ಟಿದ ಪರಿಸರ, ಸಂಸ್ಕೃತಿಯ ಬಗ್ಗೆ ಪ್ರೀತಿ-ಶ್ರದ್ಧೆಯಿಂದ ಕೂಡಿದ ಬರಹ ಸಿಎನ್ಆರ್ ಅವರದು. ಹೀಗಾಗಿ ಅವರೊಡನೆ ಓದಿ, ಸಂವಾದಿಸುವ ಸುಖಕ್ಕೆ ತಕ್ಕ ದ್ವಾರ 'ಬಯಲು-ರೂಪ'ದ ಈ ಎರಡು ಸಂಪುಟಗಳು.

■ ಡಾ. ಜಿ. ಬಿ. ಹರೀಶ : # ೧೫೭, ೨೦ನೇ ಮೇನ್, ೬ನೇ ಕ್ರಾಸ್, ಬಿಟಿಎಂ ಮೊದಲ ಹಂತ, ಬೆಂಗಳೂರು-೫೬೦ ೦೬೮

■

೧. ಹೆದ್ದಾರಿ ಮೇಲೆ ಒಂದು ಸಂಜೆ

ಮಳೆಯೊಳಗೆ ನುಸುಳಿದ ಸೂರ್ಯ,
ಮೂಡಿತ್ತು ಕಾಮನ ಬಿಲ್ಲು;
ಪೆಟ್ರೋಲ್ ಆವಿಯಾದಂತೆ
ಬಣ್ಣಗಳೂ ಮಾಯ.
ಆಂ ಬೂಂ ಬುಷ್...
ಸುಮ್ಮನೆ ಬರುವುದಿಲ್ಲ ಮಳೆ!
ಸೋಡಿಯಂ ದೀಪದ ಸೆರಗಡಿ
ಜೋ ಮಳೆಯ ಹನಿ ಹನಿಯೂ
ಹುಟ್ಟು ಹಾಕುತ್ತೆ ನೂರು ವಿಭ್ರಮೆ
ಅದರಪ್ಪನಷ್ಟು ಕನವರಗಳು :
ಕೆಟ್ಟು, ಕರ ಹಿಡಿದ ಸಂಬಂಧ
ಹಳಸಿದ ಅನುಬಂಧ
ಸರಿ ಆದೀತೆ– ಒಂದು ಕ್ಷೀಣ ಆಸೆ.

ಗಂಟೆ ಆರಾಯಿತು
ಕೇಳಲಿಲ್ಲ ಮನೆಯತ್ತ ನುಗ್ಗುವ
ಗಾಡಿಗಳ ಭರಾಟೆ,
ತುಳುಕಿತ್ತು ಕಣ್ಣಲಿ ಹನಿ
ಕಾದಿದ್ದಳು ಗೌರಿ
ರಸ್ತೆ ತುದಿ ತನಕ
ಕಾತರದ ದೃಷ್ಟಿ ಹರಿಸಿ.
ಶಬ್ದದ ನಡುವೆ ಗಾಢ
ಮೌನವ ಆವಾಹಿಸಿ
ಸುಳ್ಳೆ ಧ್ಯಾನ ನಟಿಸಿ
ನಿರಾಳತೆಯ ಅನುಭವಿಸಿದಾಗ
ಅನಿತ್ಯತೆಯ ರಾಯಭಾರಿ
ತಾನೆ ಎಂತೆನ್ನಿಸಿತ್ತು ಅವಳಿಗೆ.

ಮರುಕ್ಷಣವೆ
ಸುರಿ ಮಳೆಯೆಂದರೆ
ಮತ್ತ್ಯಾತರದು ಅಲ್ಲ, ಗೋರ್ಕಲ್ಲು

ನಿಡುಸುಯ್ಯುವ ಮೌನ –ಥತ್!
ಎಂದುಕೊಂಡಿದ್ದು ಮಾತ್ರ ಸುಳ್ಳಲ್ಲ.

ಸಾಕಾದ ಅವಳು
ಕೊಡೆಯ ಬಿಚ್ಚಿ
ಹಾಕಿದಳು ಹೆಜ್ಜೆ -
ನಿರೀಕ್ಷೆಗಿಂತ ಮನೆಯ
ನೆಲ ಸಾರಿಸಿ ಗುಡಿಸುವುದೆ
ಲೇಸು ಎಂಬಂತೆ.

೨. ಆವಿಯಾದ ಬಣ್ಣಗಳು*

ಇಳೆಯ ಮೇಲೆ ಇದ್ದಿದ್ದು ಇಲ್ಲದ್ದನೆಲ್ಲ
ಮರೆವಿನ ಕಡಲ ತೆಕ್ಕೆಗೆ ಸೇರಿಸಿದ ಮೇಲೆ
ನಿರುಮ್ಮಳನಾದ ಕುರುಡ ನಾವಿಕನೀಗ

ಹೊರ ಕಣ್ಣಿಲ್ಲದವಗೆ
ಬಣ್ಣವೆಲ್ಲ ಆವಿಯಾಗಿ
ಕಾಣುವುದು ಹಳದಿ ಮಾತ್ರ;
ಹಾದಿ ಮೇಲೆ ಬೆಳಕ
ಚೆಲ್ಲುವುದು ಹಳದಿ ನಕ್ಷತ್ರ -
ಹಾಗಂತ ಹೇಳಿದ್ದ ಬೋರ್ಹೆಸ್.

ಪಯಣದಿ ವಟಗುಟ್ಟುವರು
ಮೌನವೆ ಬಿಳಿಲಾದವರು
ರಸ್ತೆ ಬಂದರು ತೊಂದರೆ
ಗ್ರಹಿಕೆ ಚಡಪಡಿಕೆ
ತಪಕಾಟ ಸ್ವಪ್ನಗಳು
ಗರ್ಭಿಲ್ ಥ್ಯಾನ ಝೆಬಿನ್ -
ಎಲ್ಲ ದರುಶನಗಳು

ಬೆನ್ನೇರಿದ್ದವು
ಹಳದಿ ಪಾತರಗಿತ್ತಿಯನ್ನು.

ಋತುಗಳ ಜೊತೆ
ಸವಾರಿ ಹೊರಟ ಅವನಿಗೆ
ತಾನೆ ನಿರ್ಮಿಸಿದ
ಆಕೃತಿಯ ಜಾಲದಲಿ
ಹೊಳೆದಿದ್ದು ತನ್ನ ಮುಖವೆ.

ಆದರಂತೆ ನಮ್ಮ ಕಣ್ಣ ಮುಂದಿದೆ -
ಸೃಜನಶೀಲತೆ ಒಸರಿ
ತಡೆ ತಡೆದು ಮಡುಗಟ್ಟಿ ದ್ವೀಪವಾಗಿ
ಮೀನು - ಮೀಂಚುಳ್ಳಿ ಹಾರಿ
ಹರಿತ್ತಾದ ಎಲೆಯಂತೆ ಮಾಗಿ
ಹಳದಿಗೆ ತಿರುಗಿ ಉದುರಿದ್ದು.

* ಅರ್ಜೆಂಟಿನಾದ ಲೇಖಕ ಬೋರ್ಹೆಸ್
ಕುರುಡನಾದ ಮೇಲೆ ಅನುಭವಕ್ಕೆ ಸಿಲುಕಿದ್ದ 'ಹಳದಿ' ಬಣ್ಣ ಮಾತ್ರ.
ಅವನ ಬದುಕು-ಬರಹಗಳನ್ನಾಧರಿಸಿ ಈ ಕವನ.

■ ಆರ್. ಪವಿತ್ರ ಪ್ರಿಯಭಾಷಿಣಿ : D/o ಟಿ. ಆರ್. ರಾಧಾಕೃಷ್ಣ
'ಆತ್ಮೀಯ', ಫಿಲ್ಟರ್ ಹೌಸ್ ರಸ್ತೆ, ಚಿತ್ರದುರ್ಗ-೫೭೭ ೫೦೧ ■

ಬೇಂದ್ರೆ ಕಾವ್ಯಪದ್ಧತಿ

— ಸುಮತೀಂದ್ರ ನಾಡಿಗ

ಬೇಂದ್ರೆ ಕಾವ್ಯಪದ್ಧತಿ ಅಂದ ಕೂಡಲೆ ನನ್ನ ಮನಸ್ಸಿಗೆ 'ಬೇಂದ್ರೆ ಘರಾಣೆ' ಎನ್ನುವ ಮಾತು ಹೊಳೆಯಿತು. ಬೇಂದ್ರೆ ಘರಾಣೆಯೂ ಇಲ್ಲ, ಬೇಂದ್ರೆ ಕಾವ್ಯಪದ್ಧತಿಯೂ ಇಲ್ಲ. ಬೇಂದ್ರೆ ಕಾವ್ಯ ಇದೆ. ಅದರಲ್ಲಿ 'ಬೇಂದ್ರೆತನ' ಇದೆ. ಆದರೆ ಅದು ಅನುಕರಣೀಯವಾದದ್ದಲ್ಲ.

ನಾವು ಬೇಂದ್ರೆಯವರ ಕಾವ್ಯವನ್ನು ಮತ್ತೆ ಮತ್ತೆ ಓದಬೇಕು. ಅಭ್ಯಾಸ ಮಾಡಬೇಕು. ಅದರಲ್ಲಿ ಯಾವುದು ಉತ್ತಮ, ಮಧ್ಯಮ ಮತ್ತು ಕನಿಷ್ಠ ಎನ್ನುವ ತಾರತಮ್ಯ ಜ್ಞಾನವನ್ನು ಪಡೆದುಕೊಳ್ಳಬೇಕು. ಬೇಂದ್ರೆಯವರ ವ್ಯುತ್ಪತ್ತಿಯ ಕಡೆಗೆ ಗಮನ ಕೊಡಬೇಕು. ಅವರು ಓದಿದ್ದನ್ನೆಲ್ಲ ಓದಬೇಕು. ಅವರ ಓದಿನ ಯಾವುದೋ ಒಂದು ಪರಿಕಲ್ಪನೆಯಿಂದ, ಅವರ ಮನಸ್ಸು ಅದಕ್ಕೆ ಸಂಬಂಧಿಸಿದ, ಅಥವಾ ಅದಕ್ಕೆ ವಿರುದ್ಧವಾದ ಇನ್ನೊಂದು ಪರಿಕಲ್ಪನೆಗೆ, ಆ ಪರಿಕಲ್ಪನೆಯ ಹಿಂದಿನ ಅನುಭವಕ್ಕೆ ಹೇಗೆ ಜಿಗಿಯಿತು ಅನ್ನುವುದನ್ನು ಕಂಡುಕೊಳ್ಳಬೇಕು. ಅದೇ ರೀತಿಯಲ್ಲಿ ನೀವು ನಿಮಗೆ ಕಂಡ ಪರಿಕಲ್ಪನೆಯಿಂದ. ನಿಮ್ಮ ಮನಸ್ಸು ಇನ್ನೊಂದು ಪರಿಕಲ್ಪನೆಗೆ ಜಿಗಿಯುವುದಕ್ಕೆ ಮೊದಲು ನೀವು ಕಂಡ ಪರಿಕಲ್ಪನೆಯನ್ನು ಒಂದು ಚಿಮ್ಮುಹಲಗೆಯನ್ನಾಗಿ ಮಾಡಿಕೊಳ್ಳಬೇಕು. ಕಲ್ಪನಾ ಸಮುದ್ರಕ್ಕೆ ಜಿಗಿದು ಅಲ್ಲಿಂದ ಮೇಲೇಳುವುದು ಹೇಗೆ ಅಂತ ಕಲಿಯಬೇಕು. ಬೇಂದ್ರೆಯವರಿಂದ ಕಲಿಯಬೇಕು. ಬೇಂದ್ರೆಯವರನ್ನು ಗುರುವನ್ನಾಗಿ ತೆಗೆದುಕೊಳ್ಳಬೇಕು.

ಈ ಗುರು ಮಾತಾಡುವುದಿಲ್ಲ. ಅವನ ಕವಿತೆಗಳನ್ನು ಓದುವಾಗ ಹೊಳಹುಗಳನ್ನು ಕೊಡ್ತಾನೆ. ಆ ಹೊಳಹಿನ ಬೀಜಗಳನ್ನು ಜತನವಾಗಿಟ್ಟುಕೊಂಡು ಜಪ್ತಿಸಬೇಕು. 'ಜತನ' ಅನ್ನೋ ಶಬ್ದ ಮತ್ತು 'ಜಪ್ತಿಸು' ಅನ್ನೋ ಶಬ್ದಗಳು ಸಂಸ್ಕೃತದಿಂದ ಕನ್ನಡಕ್ಕೆ ಯಾವಾಗಲೋ ಬಂದು ತಮ್ಮದೇ ಆದ ಭಾವಕೋಶವನ್ನು ಮತ್ತು ಅರ್ಥಕೋಶವನ್ನು ಪಡೆದುಕೊಂಡಿವೆ ಅನ್ನುವುದನ್ನು ನೋಡಿ. ಬೇಂದ್ರೆಯವರು ಹಾಗೆ ಪದಗಳ ಕಡೆಗೆ ಕಣ್ಣಿಟ್ಟಿರುತ್ತಿದ್ದರು. ಅದನ್ನು ನಾವು ಬೇಂದ್ರೆಯವರಿಂದ ಕಲೀಬೇಕು. ಎಷ್ಟರ ಮಟ್ಟಿಗೆ ಕಲೀಬೇಕು ಅಂದರೆ,

ಯಾವ ಪದ್ಧತಿಯಲ್ಲಿ ಪದ ಕೂಡಿ ಬರುವಾಗ / ಯಾರಾರೆ ಗುರು ಲಘು ಎಣಿಸುವರೆ?

ಎಂದು ಹೇಳುವ ಮಟ್ಟಿಗೆ ಕಲಿಯಬೇಕು. ಆ ಒಂದು ಗತ್ತು ನಮ್ಮ ಕಾವ್ಯಕ್ಕೆ ಬರುವ ವರೆಗೆ ನಾವು ಗುರು ಲಘುಗಳನ್ನು ಎಣಿಸಬೇಕು. ನಮ್ಮ ಒಳಗಿನ ಕಿವಿ ಮಿಂಚಿನ ವೇಗದಲ್ಲಿ ಲಯದ ಪ್ರಸ್ತಾರವನ್ನು ಅಂತರ್ಗತ ಮಾಡಿಕೊಳ್ಳುವ ವರೆಗೆ ಲಯದ ಕಸರತ್ತನ್ನು ಮಾಡಬೇಕು. ಹೀಗೆ ಸಾಮು ಮಾಡಬೇಕೂಂತ ನಮ್ಮ ಉಸ್ತಾದರಾದ ಬೇಂದ್ರೆಯವರಿಂದ ನಾನು ಕಲಿತುಕೊಂಡೆ.

ತುಂಬಿದೆ / ಹೂ ಬಿಟ್ಟಿದೆ ಹುಣಸೆಯ ಚಿಗುರು. / ಹೂವಾಗಿದೆ.

ಬೇಂದ್ರೆ ಈ ಯಾವ ಪ್ರಯೋಗವನ್ನೂ ಮಾಡಲಿಲ್ಲ. ಒಂದು ವೇಳೆ ಅವರು— 'ಹೂವಾಗಿದೆ ಹುಣಸೆಯ ಚಿಗುರು / ಮದರಂಗಿಯ ಬಣ್ಣದ ಉಗುರು / ಮುಡಿಗೇರಿಸಿದೆ ಹುಳಿಯೊಗರು / ನೋಡುತ್ತಲೆ ಜೀವಕೆ ಅನಿಸಿದೆ ಒಗರು' ಅಂತ ಬರೆದಿದ್ದರೆ, ಅದು ಸಪ್ಪೆಯಾಗಿ ಬಿಡುತ್ತಿತ್ತು. ಹೂತ ಹುಣಸಿ ಮರವನ್ನು ಕಂಡಾಗ ಆದ ಅದ್ಭುತ ಅನುಭವದಲ್ಲಿ ಸೇರಿದ ಬಣ್ಣದ ಮತ್ತು ರುಚಿಯ ಅನುಭವ, ಮನಸ್ಸಿಗೆ ಆದ ಆಹ್ಲಾದ, ಇವು ಯಾವುದನ್ನೂ ಹೇಳುವ

ಸಾಮರ್ಥ್ಯ ನಾನು ಉಪಯೋಗಿಸಿದ ಭಾಷೆಯಲ್ಲಿಲ್ಲ. ಆದರೆ ಬೇಂದ್ರೆಯವರ ಭಾಷೆಯಲ್ಲಿ ಆ ಎಲ್ಲವೂ ಇದೆ.

ಪುಷ್ಪಿತ ಹುಣಸೆಯ ಪಲ್ಲವ. ಕಿಡಿದನು ಕಾಮನಬಿಲ್ಲವ / ಅದರ ಬಣ್ಣ ಕವಿ ಬಲ್ಲವ /
ಹೇಳುವೆ ನಾ ನಿಮಗೆಲ್ಲವ. ಪುಷ್ಪಿತ ಹುಣಸೆಯ ಪಲ್ಲವ.

ಇಲ್ಲಿ ಎರಡು ಸನಾದ ಸಂಸ್ಕೃತ ಶಬ್ದಗಳಿಂದ ಕೂಡಿದ ಮೊದಲ ಸಾಲು. ತನ್ನ ನಾಲ್ಕು ಮಾತ್ರೆಯ ನಡಿಗೆಯಿಂದ, ಒಂದು ರೀತಿಯ ಲವಲವಿಕೆಯನ್ನು ತೋರಿಸಿದರೂ, ಇದರಲ್ಲಿ ಬುದ್ಧಿಪೂರ್ವಕ ಜೋಡಣೆಯ ಯಾಂತ್ರಿಕ ಅಂಶವೊಂದು ಇದನ್ನು ಹೃದ್ಯವಾಗಿಸುವುದಿಲ್ಲ. ಆದರೆ ಬೇಂದ್ರೆ, ಈ ಎರಡೂ ರೀತಿಯ ಪದಜೋಡಣೆಯನ್ನು ಬಿಟ್ಟು, ತನಗೊಂದು ದರ್ಶನ ವಾಗಿದೆ ಅನ್ನಿಸುವ ಹಾಗೆ, ಜಾನಪದದ ಭಾಷಾರೂಪಗಳನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ಆಯ್ಕೆ ಮಾಡಿಕೊಳ್ಳುತ್ತಾರೆ ಅನ್ನುವುದಕ್ಕಿಂತ ಆ ಮಾತುಗಳು ಅವರಿಗೆ ಪ್ರತ್ಯಕ್ಷವಾಗಿವೆ ಎನ್ನುವುದು ಹೆಚ್ಚು ಸೂಕ್ತ. ಆಯ್ಕೆ ಇದೆ ಎನ್ನುವುದಾದರೆ ಅದು ಬೇಂದ್ರೆಯವರ ಆಯ್ಕೆಯಲ್ಲ. ಅವರಿಗೆ ಗೊತ್ತಿಲ್ಲದ ಹಾಗೆ ಎಚ್ಚೆತ್ತ ಕವಿಜೀವದ ಆಯ್ಕೆ ಅನ್ನಬಹುದು. ಅಥವಾ ಅಂಬಿಕಾತನಯದತ್ತನ ಆಯ್ಕೆ ಅನ್ನಬಹುದು.

ಹೂತsದ ಹುಣಸಿಯಾ ಚಿಗುರು — ೫ ೫ ೩
ಮದರಂಗಿ ಬಣ್ಣದುಗುರು — ೫ ೬
ರುಚಿಗೆ ಹುಳಿಯೊಗರು — ೩ ೫
ನೋಡ್ಯೆ ಜೀವಕ್ಕನಿಸಿತs ಹಗುರು ॥ — ೪ ೯ ೩

ಇಲ್ಲಿ ಮಾತ್ರಾಗಣದ ಲೆಕ್ಕಾಚಾರ ಹಾಕಿದರೆ, ಲೆಕ್ಕಕ್ಕೆ ಸಿಕ್ಕುವುದಿಲ್ಲ. ಆದರೆ ಕಿವಿಗೆ ಮೊದಲನೆಯ ಸಾಲು ಮತ್ತು ನಾಲ್ಕನೆಯ ಸಾಲು ತೆಗೆದುಕೊಳ್ಳುವ ಸಮಯ ಒಂದೇ ಎನಿಸುತ್ತದೆ. ಎರಡು ಮತ್ತು ಮೂರನೆಯ ಸಾಲು ತೆಗೆದುಕೊಳ್ಳುವ ಸಮಯ ಒಂದೇ ಎನಿಸುತ್ತದೆ.

ಈ ರೀತಿಯ ಒಂದು ಶಬ್ದಲಯಾಕೃತಿಯ ಚರಣ ಅದ್ಭುತವನ್ನು ಕಂಡವನೊಬ್ಬನ ಸಹಜವಾದ ಹಾಡುಮಾತಾಗಿ ರೂಪಗೊಂಡಿದೆ.

ಇಲ್ಲಿ ದೇಸೀ ಹಾವಭಾವವಿದೆ. ಸ್ವಭಾವೋಕ್ತಿಯೋ ಎನ್ನುವಷ್ಟು ಸಹಜವಾದ ಅಭಿವ್ಯಕ್ತಿಯಿದೆ. ಕನ್ನಡದ ಲಯಗಾರಿಕೆಯಿದೆ, ದೇಸೀ ಪದಸಂಪತ್ತಿಯ ಸ್ವಚ್ಛಂದ ಚೆಲುವಿದೆ. ಇದು ಮಾತ್ರ ಬೇಂದ್ರೆಯವರ ಕಾವ್ಯದ ರೀತಿಯೇ? ಅಥವಾ ಅವರ ಪದ್ಧತಿಯೇ? ಅವರ ಪದಹತ್ತಿ ನೂರೆಂಟು ಪಾತ್ರಗಳಲ್ಲಿ ನೂರೆಂಟಾಗಿ ಕಾಣುತ್ತಿತ್ತು. 'ತುತ್ತಿನ ಚೀಲ' ಕವಿತೆ ತೆಗೆದುಕೊಳ್ಳಿ.

ಅಷ್ಟಷ್ಟ ಪ / ಚೀಗುಲಪಲ್ಲಿ / ಚೀಗೂ ಚ್ಯಗೂ / ಛೀ ಛೀ ಚೀಂ
ಮೊಂಬದ ಪ್ರಾಜೆಂಯು. / ಕಾಗೆಯ ಮಂತ್ರ. / ಗಾಳಿಯ ಪಚೆಯು. /
ಮುಚ್ಚೆಯ ಗಂಟೆ– / ಅಷ್ಟಷ್ಟ ಪ / ಚೀಗುಲಪಲ್ಲಿ!

'ಬೆಳಗು', 'ಮಾಯಾ ಕಿನ್ನರಿ', 'ಕುಣಿಯೋಣು ಬಾರ' ಮೊದಲ ಕವಿತೆಗಳ ಜಾನಪದ ವೆನ್ನಿಸುವ ರೀತಿ 'ತುತ್ತಿನ ಚೀಲ'ದಲ್ಲಿ ಇಲ್ಲ. 'ಕರುಳಿನ ವಚನಗಳು'ದಲ್ಲಿ ಇಲ್ಲ. ಹಾಗಿದ್ದಾಗ

ಯಾವುದು ಬೇಂದ್ರೆಯವರ ಪದ್ಧತಿ? ಬೇಂದ್ರೆಯವರಿಗೆ ಅವರದೇ ಆದ ಒಂದು ಪದಪತಿ ಇದೆಯೇ ಹೊರತು, ಪದ್ಧತಿ ಇಲ್ಲ.

ಆದರೆ ಬೇಂದ್ರೆಯವರ ಕಾವ್ಯಕ್ಕೆ ಲೋಕಕಲ್ಯಾಣದ ಒಂದು ಗುರಿಯಿದೆ. "ಸಮನಾದು ಲೋಕಕ್ಕೆ ಚಿಮ್ಮಲಿ ಈ ಸುಖ" ಎನ್ನುವ "ಕಲ್ಯಾಣಶಕ್ತಿಯ ಕ್ಷೈಯು ಕುಶಲತೆಯಿಂದ ಪಾಕವಾಗಲಿ ಪ್ರೇಮ" ಎನ್ನುವ ಉದ್ದೇಶವಿದೆ. ಏಕಾಂತ ಬೇಕು, ಆದರೆ ಲೋಕಾಂತವೂ ಬೇಕು ಎನ್ನುವ ಎಳೆತವಿದೆ. ಕೊಡಗರು, ತುಳುವರು, ಬಡಗರು, ಸಾರಸ್ವತರು, ಮೈಸೂರಿನವರು, ಉತ್ತರ ಕರ್ನಾಟಕದವರು, ಗುಲ್ಬರ್ಗದವರು, ದಕ್ಷಿಣ ಕನ್ನಡದವರು ಎಲ್ಲರೂ ಓದುವಂತಹ ಕಾವ್ಯ ಬೇಕು ಎನ್ನುವದು ಬೇಂದ್ರೆಯವರು ಯೋಚಿಸಿದ ಕಾವ್ಯಮಾರ್ಗವಾಗಿತ್ತು. ಪ್ರಾದೇಶಿಕ ವೈವಿಧ್ಯವನ್ನೂ ಬಿಟ್ಟುಕೊಡದೆ, ಕನ್ನಡ ನಾಡಿನ ಎಲ್ಲ ಆಶೋತ್ತರಗಳನ್ನು ಮತ್ತು ಅನುಭವಗಳನ್ನು ಬಿಂಬಿಸುವ ಭಾಷೆಯಲ್ಲಿ, ಮತ್ತು ಭಾಷೆಯ ಮೂಲಕ ಏಕೀಕರಣ ಮಾಡಹೊರಟದ್ದು ಬೇಂದ್ರೆಯವರು ಕನಸು ಕಂಡ ಕಾವ್ಯಮಾರ್ಗವಾಗಿತ್ತು.

ಬೇಂದ್ರೆಯವರು ಕಿಟೆಲ್ ಡಿಕ್ಶನರಿಯನ್ನು ಭಾಷೆಯ ಅಭ್ಯಾಸದ ದೃಷ್ಟಿಯಿಂದ ನೋಡುತ್ತಿದ್ದರು ಎಂದು ವಾಮನ ಬೇಂದ್ರೆ ಹೇಳಿದ್ದಾರೆ. ಬೇಂದ್ರೆಯವರು ಶಬ್ದಗಳ ಜನ್ಮಕುಂಡಲಿಗಳನ್ನು ಅಭ್ಯಾಸ ಮಾಡುತ್ತಿದ್ದರು. ಒಂದೊಂದು ಶಬ್ದವೂ ಇನ್ನೊಂದು ಶಬ್ದದ ಜೊತೆಗೆ ನಡೆಸುವ ದಾಂಪತ್ಯದಿಂದ ಹೊಸ ಅರ್ಥ ಸ್ಫುರಿಸುವುದನ್ನು ಕಾಣುತ್ತಿದ್ದರು. ಕಿಟೆಲ್ ಕೋಶದ ೧೪ನೇ ಪುಟದಲ್ಲಿ 'ಅಗೋ' ಎಂಬ ಶಬ್ದ ಕಂಡೊಡನೆ ಅವರು "ಅಗೋ ಎಂದು ತೋರಿಸಿಂತು ಅಗೋಚರನು ನಾನು" ಅನ್ನುವ ಸಾಲು ಅವರಿಗೆ ಹೊಳೆಯಿತು. 'ಅಗೋ' ಶಬ್ದದಲ್ಲಿ ಅಗೋಚರವಾದದ್ದನ್ನು ಕಂಡರು. ಭಾಷೆಯ ಇಂಥ ಉಪಯೋಗವನ್ನು ಬೇಂದ್ರೆಯವರು ಕಲಿಸಿಕೊಟ್ಟರು.

ಬೇಂದ್ರೆಯವರಿಗೆ ಅಸಂಖ್ಯ ಶಬ್ದಗಳು ಗೊತ್ತಿದ್ದವು. ಭಾಷೆಯೂ ಗೊತ್ತಿತ್ತು. ನಮ್ಮಲ್ಲಿ ಬಹಳ ಕವಿಗಳಿಗೆ ಶಬ್ದಗಳು ಗೊತ್ತಿರುತ್ತವೆಯೇ ಹೊರತು ಭಾಷೆ ಗೊತ್ತಿರುವುದಿಲ್ಲ. ವಾಗರ್ಥ ಬೇರೆ, ಶಬ್ದಾರ್ಥ ಬೇರೆ. ವಾಗರ್ಥ ನಮ್ಮ ದಿನನಿತ್ಯದ ಮಾತುಗಳಲ್ಲಿರುತ್ತವೆ. ಶಬ್ದಾರ್ಥ ಶಬ್ದಕೋಶಗಳಲ್ಲಿರುತ್ತೆ. ಮಾತಿನಲ್ಲಿ ಉಪಯೋಗಿಸುವ ಶಬ್ದಗಳ ಅರ್ಥಗಳನ್ನು ಹಿಡಿದಿಡಲಿಕ್ಕೆ ಕೋಶಗಳು ಪ್ರಯತ್ನಿಸುತ್ತವೆ. ಕೋಶಗಳು ವಸ್ತುಗಳಿಗೆ ಸಂಬಂಧಿಸಿದ ಶಬ್ದಗಳನ್ನು ಹಿಡಿದಿಡುವ ಹಾಗೆ, ಮಾತಿನಲ್ಲಿರುವ ಶಬ್ದಗಳಲ್ಲಿ ಹೊಮ್ಮುವ ಧ್ವನಿಯ ಏರಿಳಿತದಿಂದ ಹುಟ್ಟುವ ಅರ್ಥಗಳನ್ನು ಹಿಡಿದಿಡಲಿಕ್ಕೆ ಸಾಧ್ಯವಾಗುವುದಿಲ್ಲ. ಎಲ್ಲ ರೀತಿಯ ಶ್ರೇಷ್ಠ ಕಾವ್ಯವೂ ಮಾತನ್ನು ಬಂಡವಾಳ ಮಾಡಿಕೊಂಡಿರುತ್ತದೆಯೇ ಹೊರತು ಶಬ್ದಕೋಶವನ್ನಲ್ಲ. ಶಬ್ದಕೋಶದಲ್ಲಿರುವ ಶಬ್ದಗಳ ನಿಷ್ಪತ್ತಿ ಕವಿಗೆ ಗೊತ್ತಿರುತ್ತದೆ. ಆದರೆ ಶಬ್ದಗಳನ್ನು ಕವಿ ಮಾತಿಗೆ ತಿರುಗಿಸಿದಾಗ, ಕೋಶದಲ್ಲಿರುವ ಅರ್ಥವನ್ನೂ ಮೀರಿ, ಅದನ್ನು ವಿಸ್ತರಿಸುತ್ತಾನೆ ಅಥವಾ ಅದನ್ನು ತಿರುಚಿ ಹೊಸ ಅರ್ಥಗಳನ್ನು ಧ್ವನಿಸುತ್ತಾನೆ. ಹಳೆಯ ಶಬ್ದಗಳ ಹೊಸ ಜೋಡಣೆಯ ಮೂಲಕ ಹೊಸತಾದ ಪರಿಕಲ್ಪನೆಯನ್ನು ಹುಟ್ಟುಹಾಕುತ್ತಾನೆ. ಬೇಂದ್ರೆಯವರ 'ಹಕ್ಕಿ', 'ತುತ್ತಿನ ಚೀಲ', 'ಪಾತರಗಿತ್ತಿ', 'ಅನ್ನಾವತಾರ', 'ಕುರುಡುಕಾಂಚಾಣ' ಆ ರೀತಿಯ ಸೃಷ್ಟಿಗಳು.

■ ಡಾ. ಸುಮತೀಂದ್ರ ನಾಡಿಗ : # ೩೮, ಅಪೂರ್ವ, ೧ ನೇ ಮೇನ್, ೩ ನೇ ಹಂತ, ೬ ನೇ ಬ್ಲಾಕ್, ಬನಶಂಕರಿ ೩ ನೇ ಸ್ಟೇಜ್, ಬೆಂಗಳೂರು-೫೬೦ ೦೮೫ ■

ಊರ ಬಡಗಲ ಭಾಗ
ಕೊಡಗಿಯೀಚಲ ದಾಟಿ
ಬೀಸುಕಲ್ಲಿನ ತಿಟ್ಟು
ಅಲ್ಲಗೆದು ಇಲ್ಲಗೆದು
ನೆಲಮೂಲ ಗುಂಡಿಗುಳಿ

ಹಿಂದೊಮ್ಮೆ ನಕ್ಕಿತ್ತು ತಂಗಡೆಯ ತನಿಹಾಸು
ದೇವದಾರಿನ ಬುಡದಿ ಕೆಂಪು ಹವಳದ ಹುಲುಸು
ಕರಿಲೆಕ್ಕೆಯಡಿಯಲ್ಲಿ ಹಿಕ್ಕೆ ಮೂಸುವ ಮೊಲವು
ಹೊತ್ತು ಯಾಮಾರಿದರೆ ಗೊತ್ತು ತಪ್ಪಿದ ಕರಡಿ

ಬದಿಯಲ್ಲೆ ತುಂಬಿ ತೂಟಾಡುವ ಗಂಗೆಮಾಯಿ
ಅರುಗಿನಲಿ ನರುಗಂಪು ಕೇದಿಗೆಯ ಕರಿನಾಗ

ಹೊತ್ತಾರೆ ಏಳುತಲೆ ಕಣ್ಣಬಿಚ್ಚಿದ ರಾಸು
ಕಲ್ಲು ಸಾರೆಗೆ ತಡವಿ ಗೂಟಬಂದಿ
ಗೊಂತಿಗುಡಿಸಿದ ಮೇಲೆ
ತಿಪ್ಪೆ ಮಾಳಕೆ ತೊಪ್ಪೆ.

ಕೂಗು ಕೇಕೆಯ ಹಾರು
ಬೀಸುಕಲ್ಲಿಗೆ ಹೋಗಿ
ತಂಗಾಡೆ ಅಂಬಳ್ಳಿ ತಟ್ಟಿ ತುಂಬಿ
ನಡಮುರಿದ ಹಸಿರಿನ ಕೈಯಿಕಂಪು

ಹೊತ್ತೇರಿದಂತೆಲ್ಲ ಊರ ಜಂಗಲಿಜನುಮ
ಕೇರಿಕೇರಿಯ ಸಾರಿ ಹೊಡೆತರುವ ಹನುಮ

ಗಂಗೆ ಗೌರಿ ತುಂಗಭದ್ರೆ
ಕೆಂದ ಕರಿಯ ಈರಭದ್ರ
ಮುಳ್ಗ್ಗರ ಬಾಯಿನ
ಗುದ್ದ್ಯಯ ಕಾಲಿನ
ತೋಂಡು ತುಡುಚೆ ತಂಟಕೋರ
ಜೋಡು ಮಲೆಯ ಮೇಕೆ ಹಿಂಡು
ಬ್ಯಾಬ್ಯಾಗರೆವ ಕುರಿಯ ಮಂದೆ
ಬೆದೆಗೆ ಬಂದ ಮಣಕನೇರು
ಮೂಸುಗರೆವ ಕೋಣದಿಗರು

ಗುಡ್ಡದವ್ವನ ಗಂಡ
ಗಿರಿಸಾನು ಮಿಂಡ
ಜಂಗಲಿಯ ಜಾಡಿನಲಿ ಜೀವಜಾತ್ರೆ

ಕೊಡಗಿನಯೀಚಲ ದಾಟಿ ಬೀಸುಕಲ್ಲನು ಏರಿ
ಕತ್ತಾಳೆ ಓಣಿಯಲಿ ಹಡಬೆ ಹಲವಕೆ ಬಡಿದು
ರೋಟುದಾರಿಯ ಸಾರಿ ಪೆಂಚೆ ಮಾಳವ ತುಳಿದು
ಗದ್ದಲವು ಕರಕರಗಿ
ಚಿಕ್ಕಬಾಯಿ ದೊಡ್ಡಬಾಯಿ
ಕರಿಕಲ್ಲು ದೊಣೆಸಾಲು
ಜೀವ ಜೀವದ ಉಣಿಸು

ಉರಿಯೋ ದೇವರು ಮತ್ತೆ ನೆತ್ತಿಗೇರಿದ ಹೊತ್ತು
ಕೇದಿಗೆಯ ಕರಿನಾಗ ಬೀಸುಕಲ್ಲಿಗೆ ಹರಿದು
ದ್ಯಾವುದಾರೆಯ ಬುಡದಿ ಗೌಜುಗನ ಕೂಗು

ರಣಮೌನದೊಡಲಲ್ಲಿ
ಕರಿಲೆಕ್ಕೆ ಮಡಿಲಲ್ಲಿ
ಜಾಂಬವಗೆ ಜನುಮ ಸುಖನಿದ್ರೆ.

ನೆತ್ತಿ ಇಳಿದಾ ಸ್ವಾಮಿ ಗುಡಿ ಸೇರುವ ಹೊತ್ತು
ರಂಗು ರಾಜುಣ ಬಣ್ಣ ಬೀಸುಕಲ್ಲಿನ ಮಾಳ
ತಾಯನಗಲಿದ ಕರುವು ತಾವು ತಾವಲಿ ಕರೆದು
ಬೀಸುಕಲ್ಲಿನ ತೆವರು ತಾಯಿಕೂಗಿನ ತವರು
ಗೂಡು ಸೇರಿದ ಜೀವ ಸೊದೆಗರೆವ ಹೊತ್ತಲ್ಲಿ
ತಿಟ್ಟು ಸಾರಿದ ಮೋಡ ತಿರಿಗೆ ತಂಪೆರೆದಿತ್ತು.

ಇಂತಪ್ಪ ಮೂಲಕ್ಕೆ
ಎಂತು ಬಡಿಯಿತು ರಾವು?
ಈ ಪಾಟಿ ಜೀವಕ್ಕೆ
ಹೇಗೆ ಸಾರಿತು ಸಾವು?

ಮಾತು ಸೂತಕವಾದ ಮಾರಿನೇಗಿಲ ದಾರಿ
ಜೀವ ಪಾತಕವಾದ ಬಿಳಿಯ ಬೂದಿಯ ಕಾರಿ
ಕುಣಿವ ಕಾಲ್ಗೆಜ್ಜೆಗಳ ಹೆಜ್ಜೆಗತಿ ಬತ್ತಿತ್ತು.

ಲಿಂಗಮಾದನ ಉಸಿರು ಬೆಂಗಳೂರನು ಸೇರಿ
ಕಾರುಬಾರಿನ ಒಳಗೆ ಕಾಲಕಸವಾಗಿತ್ತು.

ಇಂತಪ್ಪ ಹೊತ್ತಿನಲಿ
ಎಂತು ಬಂದೆಯೊ ಹಂಸ
ಹಾವು ನಾರಿದ ನೆಲಕೆ
ಜೀವದೇರಿನ ಭಾವ

ದೇಸಿ ಎಂಬುವ ಹೆಸರ
ಭಾವ ಜಾಲಕೆ ಬಿತ್ತಿ
ದೇಸಿ ಎಂಬವ ಉಸಿರ
ನೆಲದ ಬಾಳಿಗೆ ತಂದೆ

ಯಾವ ಜನ್ಮದ ಗಂಟು ಹೀಗೆ ಬೆಸೆಯಿತು ನಂಟು
ಲೇಖಿದೊಳಗಿನ ಮನಸು ಬೆಳಗಬಯಸಿತು ಕನಸು
ದೇಸಿ ಎಂಬುದು ಜೀವ ದೇಸಿ ಎಂಬುದು ಭಾವ
ದೇಸಿ ದಿಬ್ಬದಲೀಗ ಕಳ್ಳುಬಳ್ಳಿಯ ತುಡಿತ
ಸುತ್ತಲಿನ ಹತ್ತೂರ ಜೀವ ಜಂಗಮ ಮಿಡಿತ

■ ಎಸ್. ಜಿ. ಸಿದ್ಧರಾಮಯ್ಯ :
ಅಧ್ಯಕ್ಷರು, ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ಭವನ, ಜೆ. ಸಿ. ರಸ್ತೆ, ಬೆಂಗಳೂರು-೨ ■

ಅದಲು-ಬದಲು

ಎಸ್. ಆರ್. ಕುಮಾರಕರ

ಅದಲು

ನಗದೇ ಇರುವ ಈ ಗತ್ತು
ಕೆಲವೊಮ್ಮೆ ಬೇರೆಯವರಿಗಾಗೆ ಆಪತ್ತು,
ಈ ಮುಖ ನೋಡಿ, ಮುಂದೆ ಕುಳಿತವ ಸುಸ್ತು
ತಾವು ತಿಳಿವರು ನಾವೇS ಮಹಾ ಶಿಸ್ತು.

ಬದಲು

ಜೀವವಿಡಿ ನಗದೇ ನರನಾಡಿಗಳಾದವು ಗಂಟು.
ಕೊನೆಗಾದರು, ವೈದ್ಯರೇ ಇವರಿಗೆ ಬಹು ನಂಟು.
ಅವರಾಣತಿಯಂತೆ ಪಾರ್ಕಾಯಿತು ಇವರಿಗೆ ಪರ್ಮನಂಟು.
ಜೋರಾಗಿ ನಕ್ಕು, ಬಾರಿಸಲು ಚಪ್ಪಾಳೆ ನೂರೆಂಟು.

■ ಎಸ್. ಆರ್. ಕುಮಾರಕರ : ಗೋಕುಲ ರೋಡ್, ಸಿಲ್ವರ್ ಟೌನ್, ಹುಬ್ಬಳ್ಳಿ-೫೮೦ ೦೩೦ ■

೧. ತಮದ ಜಡೆ

ದಟ್ಟ ಕಾಡಿನ ನಡುವೆ ಬೆಳೆದು ಹರಡುತ್ತಿರುವ
ಪುಟ್ಟ ರಾಮ ಲಕ್ಷ್ಮಣರಿಗೆ ಎದುರಾದ
ತಾಟಕಿಯ ಕೆದರಿದ ಮುಡಿಯೇ?
ವಿಷದ ಮೊಲೆಗಳ ಬಾಲಕೃಷ್ಣನ ಬಾಯಿಗಿಟ್ಟ
ಮೊಳೆಯುತ್ತಿರುವ ಪೂತನಿಯ ಹೆಣದ ಹೆರಳೇ?
ಸಕಲ ಜೀವರಾಶಿಗಳ ರಕ್ತದಲ್ಲಿ
ಕಲಬೆರಕೆಗೊಳ್ಳುತ್ತಿರುವ ಧೃತರಾಷ್ಟ್ರ ಗಾಂಧಾರಿಯರ
ಕುರುಡು ಸಂತಾನಗಳ ಕರುಳ ಮಾಲೆಯೇ?
ಈ ಕೂದಲಿನ ಉದ್ದ ತಿಳಿಯಲಾರದ್ದು ಅಳೆಯಲಾಗದ್ದು
ಕತ್ತಲೆಗಿಂತ ಕಪ್ಪಾದ ಮೈಯ ತಳಾತಳದೊಳಗೆ ಬೆಳೆದದ್ದು
ಉದ್ದುದ್ದ ಇಳಿಬಿದ್ದು ಪಳೆಯುಳಿಕೆಗಳ ಹಾವಸೆಯಾಗಿ
ಒಳ ಹೊರಗೆ ಹರಿವ ಕಾಳಿಂದಿ ಹೊಳೆಯಾಗಿ
ನಕ್ಷತ್ರ ಕಣ್ಣುಗಳ ಕವಿವ, ಮಿಂಚುಗಳ ಕುಡಿವ
ಬಂಜೆ ಮೋಡಗಳ ಪಡೆಯಾಗಿ ಅಡ್ಡಗಟ್ಟುತ್ತಿದೆ
ಹಗಲ ಕೊರಳಿಗೆ ಉರುಲು ಬಿಗಿವ ಮುಗಿಲ ಮರೆಮಾಡುವ
ಯಾವ ಮಾಯಗಾರ್ತಿ ಜೋಗಮ್ಮನ ಜಡೆಯಿದು?
ಹೊತ್ತ ಭೂಮಿಯ ಹುತ್ತವಾಗಿಸುತ್ತಿರುವ
ಯಾವ ಆದಿಸರ್ಪನ ಹೆಡೆಯಿದು?

೨. ಕಟ್ಟಬೇಕು

ಮಳೆಯಾಗಲು ಮೋಡ ಕಟ್ಟಬೇಕು
ಮಗುವಾಗಲು ಗರ್ಭ ಕಟ್ಟಬೇಕು
ತೊಟ್ಟಿಲು ಕಟ್ಟಬೇಕು ತೋರಣ ಕಟ್ಟಬೇಕು
ಸಿಹಿ ಬಾಯಿ ಕಟ್ಟಬೇಕು
ಉಡದಾರ ಕಟ್ಟಬೇಕು ಶಿವದಾರ ಕಟ್ಟಬೇಕು
ಜನಿವಾರ ಕಟ್ಟಬೇಕು ಕಣ್ಣು ಕಟ್ಟಬೇಕು
ಬೇಲಿ ಕಟ್ಟಬೇಕು ಗೋಡೆ ಕಟ್ಟಬೇಕು
ಮಾತಿನಿಂದ ಬಾಯಿ ಕಟ್ಟಬೇಕು
ಪರೀಕ್ಷೆ ಕಟ್ಟಬೇಕು ದುಡ್ಡು ಕಟ್ಟಬೇಕು
ಗಂಟು ಕಟ್ಟಬೇಕು ಕನಸು ಕಟ್ಟಬೇಕು
ಕಣ್ಣೆದುರು ಚೆಲುವು ಕಟ್ಟಬೇಕು

ಮುಡಿಯಲು ಹೂ ಕಟ್ಟಬೇಕು ತಾಳಿ ಕಟ್ಟಬೇಕು
ಒಂದಕ್ಕೊಂದು ಜೋಡಿಸಿ ಕಸಿ ಕಟ್ಟಬೇಕು
ಬ್ರಹ್ಮಗಂಟು ಕಟ್ಟಬೇಕು ಬಿಚ್ಚಿ ಕಟ್ಟಬೇಕು
ಎತ್ತಿ ಕಟ್ಟಬೇಕು ಬೆನ್ನು ಕಟ್ಟಬೇಕು
ಹಸು ಕಟ್ಟಬೇಕು ಹೋರಿ ಕಟ್ಟಬೇಕು
ಮಂಗ ಕಟ್ಟಬೇಕು ಲಂಗ ಕಟ್ಟಬೇಕು
ರಾಕಿ ಕಟ್ಟಬೇಕು ಜೋಕಾಲಿ ಕಟ್ಟಬೇಕು
ಮಡಿ ಕಟ್ಟಬೇಕು ಮುಡಿ ಕಟ್ಟಬೇಕು
ಜೇನು ಹುಟ್ಟು ಕಟ್ಟಬೇಕು ಹಾಲು ಕೆನೆ ಕಟ್ಟಬೇಕು
ಕಂಕಣ ಕಟ್ಟಬೇಕು ಕಚ್ಚೆ ಕಟ್ಟಬೇಕು
ತೆನೆ ಕಾಳು ಕಟ್ಟಬೇಕು ಉಡಿ ಕಟ್ಟಬೇಕು
ಕಣಜ ಕಟ್ಟಬೇಕು ಬುತ್ತಿ ಕಟ್ಟಬೇಕು
ಹೊಟ್ಟೆ ಕಟ್ಟಬೇಕು ಹೊಟ್ಟೆಗೆ ಬಟ್ಟೆ ಕಟ್ಟಬೇಕು
ಅವರಿವರ ಕೈಕಾಲು ಕಟ್ಟಬೇಕು
ಸಾಲ ಕಟ್ಟಬೇಕು ಬಡ್ಡಿ ಕಟ್ಟಬೇಕು
ಆಯುಷ್ಯವೆಲ್ಲಾ ಕಂತು ಕಂತಾಗಿ ಕಟ್ಟಬೇಕು
ಗೂಡು ಕಟ್ಟಬೇಕು ಗುಡಿಸಲು ಕಟ್ಟಬೇಕು
ಮನೆ ಕಟ್ಟಬೇಕು ಮಠ ಕಟ್ಟಬೇಕು ಬಂಗಲೆ ಕಟ್ಟಬೇಕು
ನಾಡು ಕಟ್ಟಬೇಕು ನುಡಿ ಕಟ್ಟಬೇಕು
ದೇಶ ಕಟ್ಟಬೇಕು ಜಗ ಕಟ್ಟಬೇಕು
ಜನ ಕಟ್ಟಬೇಕು ದನ ಕಟ್ಟಬೇಕು ಗುಂಪು ಕಟ್ಟಬೇಕು
ಮಂದಿರ ಕಟ್ಟಬೇಕು ಮಸೀದಿ ಕಟ್ಟಬೇಕು
ಪಕ್ಷ ಕಟ್ಟಬೇಕು ಪಂಥ ಕಟ್ಟಬೇಕು
ಪಂದ್ಯ ಕಟ್ಟಬೇಕು ಸೆರಗಿನೊಳಗೆ ಕೆಂಡ ಕಟ್ಟಬೇಕು
ಉಸಿರು ಕಟ್ಟಬೇಕು ರಕ್ತ ಹೆಪ್ಪು ಕಟ್ಟಬೇಕು
ಕ್ಯಾನ್ಸರು ಗಡ್ಡೆ ಕಟ್ಟಬೇಕು ಗಾಯಕ್ಕೆ ಪಟ್ಟಿ ಕಟ್ಟಬೇಕು
ಮುರಿದ ಕಾಲು ಕಟ್ಟಬೇಕು
ಮುರಿದ ಮನಸು ಕಟ್ಟಬೇಕು
ತಿಳಿವು ಹುತ್ತ ಕಟ್ಟಬೇಕು
ಮುರಿದು ಕಟ್ಟಬೇಕು ಕೆಡವಿ ಕಟ್ಟಬೇಕು
ಸೇತುವೆ ಕಟ್ಟಬೇಕು ಹಾಡು ಕಟ್ಟಬೇಕು
ಕತೆ ಕಟ್ಟಬೇಕು ಕುಣಿಯಲು ಅಟ್ಟ ಕಟ್ಟಬೇಕು
ಗೆಜ್ಜೆ ಕಟ್ಟಬೇಕು ತರತರದ ವೇಷ ಕಟ್ಟಬೇಕು
ಹತ್ತು ಕಟ್ಟುವಲ್ಲೊಂದು ಮುತ್ತು ಕಟ್ಟಬೇಕು

ಬ್ಯಾಜು ಕಟ್ಟಬೇಕು ವಾಚು ಕಟ್ಟಬೇಕು
ಹಲ್ಲು ಕಟ್ಟಬೇಕು ವಿಗ್ಗು ಕಟ್ಟಬೇಕು
ಗಂಟು ಮೂಟೆ ಕಟ್ಟಬೇಕು ಚಟ್ಟ ಕಟ್ಟಬೇಕು
ಗೋರಿ ಕಟ್ಟಬೇಕು ಮೋರಿ ಕಟ್ಟಬೇಕು
ಹರಿಯುವುದಕ್ಕೆ ಒಡ್ಡು ಕಟ್ಟಬೇಕು
ನಿಂತಿರುವುದಕ್ಕೆ ಕಾಲುವೆ ಕಟ್ಟಬೇಕು
ವೃಂದಾವನ ಕಟ್ಟಬೇಕು
ಮೈಸ...ಸೂರಿನ ಬೃಂದಾವನ ಕಟ್ಟಬೇಕು
ಕಾರಂಜಿಯೊಳಗೆ ಸರಿಗಮ ಕಟ್ಟಬೇಕು
ಬೆಳದಿಂಗಳು ಕಣ ಕಟ್ಟಬೇಕು.

೩. ಕವಿತೆಯ ಶಕ್ತಿ

ನನ್ನ ಕವನ ಓದಿ ಕೇಳಿ ಹತ್ತಿರ ಕರೆದರು
ಆ ಪ್ರೀತಿಗೆ ನಾನು ದಂಗಾದೆ
ಕವನಕ್ಕೂ ಇಷ್ಟೊಂದು ಬೆಲೆಯಿದೆಯೆಂದು ಹಿಗ್ಗಿದೆ
ನಾನು ಬರೆದೆ ನನ್ನ ನೋವು, ಬಡತನ, ಅವಮಾನ
ಅದರಾಳದ ಚೆಲುವು ಅನಾವರಣಗೊಳಿಸಲು ಹಾತೊರೆದೆ
ಅದೆಲ್ಲ ಬೇಕಾಗಿರಲಿಲ್ಲ ಅವರಿಗೆ
ಸುರುವಾಯಿತು ಮಾತು ಮಾತಿಗೆ ಅಪಮಾನ ಕಾಲೆಳೆವ ಕರಾಮತ್ತು
ವರವೆಂದು ತಿಳಿದದ್ದು ಆಯಿತೀಗ ಕುತ್ತು
ಅವರಿಗೆ ಏನು ಬೇಕಾಗಿತ್ತೋ ತಿಳಿಯಲಿಲ್ಲ
ಒಂದಂತು ನಿಜ, ನಾನು ಅವರನ್ನು ಹಾಡಿ ಹೊಗಳಿ
ಕವಿತೆ ಬರೆಯಲಿಲ್ಲ ಅವರ ಬಾಲ ಬಡಿಯಲಿಲ್ಲ
ಅವರು ಕವಿತೆ ಹುಟ್ಟುವ ನನ್ನ ಟೊಂಗೆಗಳನ್ನು
ಕಡಿಯ ತೊಡಗಿದರು ಒಂದೊಂದಾಗಿ
ನೀರು ಗಾಳಿ ಬೆಳಕುಗಳ ನಿಲ್ಲಿಸಿದರು
ಹುಡುಕತೊಗಿದರು ಬೇರುಗಳ ಸವರಲು
ಸಂಗೀತಗಾರನ ನಾಲಿಗೆ ಶಿಲ್ಪಿಯ ಕೈಗಳ
ಕತ್ತರಿಸಿದವರೇ ಇವರೆಂದು ತಿಳಿಯುವಷ್ಟೊತ್ತಿಗೆ
ಅವರು ಕಡಿದಿದ್ದರು ನನ್ನ ಅನೇಕ ಕರಣಗಳ
ಹರಣ ಹುಡುಕುತ್ತ ಸುತ್ತುವರಿದಿದ್ದರು ಶಸ್ತ್ರಾಸ್ತ್ರ ಸಮೇತ
ಎಷ್ಟು ಗಿರಿಗಳ ಆಚೆ ಎಷ್ಟು ಸಾಗರಗಳಾಚೆ
ಯಾವ ಕಾಡಿನ ಗಿಡದ ಪಂಜರದ ಗಿಣಿಯೊಳಗೆ
ನನ್ನ ಪ್ರಾಣವಿತ್ತೋ ನನಗೇ ಗೊತ್ತಿಲ್ಲ
ಅವರಿಗೆ ತಿಳಿಯುವದು ಹೇಗೆ?

ನನ್ನೊಳಗಿನ ಕವಿಯನ್ನು ಕೊಂದು ಕೇವಲ ಮನುಷ್ಯನನ್ನು ಬಿಡಿ ಎಂದೆ
ಮನುಷ್ಯ ಬದುಕಿದರೆ ಕವಿ ಸಾಯುವುದಿಲ್ಲ
ಕವಿ ಸತ್ತರೆ ಮನುಷ್ಯ ಬದುಕುವುದಿಲ್ಲ ಎಂದರವರು
ಇವರು ನನ್ನನ್ನು ಬಿಡುವುದಿಲ್ಲವೆಂದು ತಿಳಿದಾಗ
ಕವಿತೆಯನ್ನೇ ಕೇಳಿಕೊಂಡೆ ಪಾರು ಮಾಡೆಂದು
ಇದ್ದಕ್ಕಿದ್ದಂತೆ ನನಗೆ ರೆಕ್ಕೆ ಮೂಡಿದವು
ಕವಿತೆಯ ಈ ಶಕ್ತಿ ನನಗೆ ಗೊತ್ತಿರಲಿಲ್ಲ
ಅವರ ಕೈಗಳಿಗೆ ಸಿಲುಕದೆ ಶಸ್ತ್ರಾಸ್ತ್ರಗಳಿಗೆ ನಿಲುಕದೆ
ಅವರ ನೀರು ಗಾಳಿ ಬೆಳಕುಗಳ ಹಂಗಿರದೆ ಹಾರಿದೆ
ಕವಿತೆಯ ದಾರಿ ನಿಗೂಢ ಅದರ ದಾರಿ ಅನಂತ
ಬಂದರೆ ಬರಲಿ ಬೆನ್ನಟ್ಟಿ ಅವರೂ ಆಗುತ್ತಾರೆ ಕವಿತೆ

೪. ಒಡೆಯಲಾರದ ಪ್ರತಿಮೆ

ಕಲ್ಲಮೂರ್ತಿಗಳಲ್ಲಿ ಬುದ್ಧ ಬದುಕಿದ್ದಾನೆಯೇ?
ಆ ಮೂರ್ತಿಗಳ ಒಡೆದರೆ ಬುದ್ಧ ಸಾಯುತ್ತಾನೆಯೇ?
ಬುದ್ಧ ಅಲ್ಲ ಕಲ್ಲ ಮೂರ್ತಿ
ಆತ ಒಡೆಯಲಾರದ ಪ್ರತಿಮೆ ಸಾಯಲಾರದ ಜೀವ-ವೃಕ್ಷ
ಬುದ್ಧ ಅಂದರೆ ತಾಯಿತನದ ಭಾವ ಕರುಣೆಯ ಸಾಕಾರ ರೂಪ
ಜಗವ ಇರುವಂತೆ ತಿಳಿಯುವ ವಿವೇಕ
ದುಃಖವ ಜಯಿಸುವ ದಾರಿಗೆ ದೀಪ
ಸಾವಿನ ಸಹಜತೆ ಅನಿವಾರ್ಯತೆಗಳ
ಮನದಟ್ಟು ಮಾಡಿಕೊಟ್ಟ ತರ್ಕದಾಚೆಯ ಸತ್ಯ
ಹೇಳುತ್ತ ಹೋದರೆ ಶಬ್ದಗಳಿಗೆ ಸಿಗದವನು
ನಿರ್ಜೀವ ಕಲ್ಲೊಳಗೆ ಎಷ್ಟು ಮೂಡ್ಯಾನು?
ಆ ಕಲ್ಲುಗಳ ಒಡೆದರೆ ಹೇಗೆ ಕೆಡೆದಾನು?
ಕಾಲ ದೇಶ ದ್ರವ್ಯಗಳ ರಾಶಿಯಲ್ಲಿ ಸೇರಿ
ಜೀವಗಳು ಎರಕಗೊಳ್ಳುವಾಗ ಪ್ರಜ್ಞೆಯ ಪಾಕವಾಗಿ
ಬೆರೆತುಕೊಳ್ಳುವ ರಸವಾಹಿನಿ ಬುದ್ಧ
ಹೇಳಲಾರದ ಹೇಳಬಾರದ ಆದರೆ ಅರಿವಿಗೆ ನಿಲುಕುವ
ಗುಣವಿಶೇಷಗಳ ಪ್ರತಿಮೆ ಆತ;
ಪ್ರತಿಮೆ ನಿರಾಕಾರ, ಅಮೂರ್ತ, ಅನುಭವ ಮೂಲ, ಅನುಭವ ಸಂವೇದ್ಯ
ಚಿತ್ರ ಶಿಲ್ಪ ಶಬ್ದಗಳಲ್ಲದು ದುರ್ಲಭ
ಕಲ್ಲು ಕಂಚು ಬೆಳ್ಳಿ ಬಂಗಾರಗಳಲ್ಲಿ ಕಟೆದು ನಿಲ್ಲಿಸಬಹುದು ಮೂರ್ತಿಗಳನ್ನು
ಪ್ರತಿಮೆ ಒಂದೇ ಒಂದು, ಅದನ್ನು ಹಿಡಿಯಲೆಂದು

ಕಟೆದ ಮೂರ್ತಿಗಳ ಸಂಖ್ಯೆ ಕೋಟಿ ಇರಬಹುದು
ಚಿತ್ರಗಳಾಗಿ ಕಣ್ಣಲ್ಲಿ, ಸ್ಮಾರಕಗಳಾಗಿ ಸ್ಮರಣೆಯಲ್ಲಿ
ನಿಂತು ಹೊಳೆಯಿಸಬಹುದು ಒಂದು ಮಿಂಚು
ಪ್ರತಿಮೆಯಾಗಿ ಅನುಭವ ರಸಾಯನವಾಗಿ
ಜೀವ ಕಣಕಣದ ಎಚ್ಚರವಾಗಿ ಬೆಳಗಿದಾಗ
ಆ ಮೂರ್ತಿಗಳು ತಾನಾಗಿ ಒಡೆದು ಬೀಳುತ್ತವೆ
ಆದ್ದರಿಂದ ಮೂರ್ತಿಗಳನ್ನು ಒಡೆಯಬಹುದು ಪ್ರತಿಮೆಯನ್ನಲ್ಲ
ಮೂರ್ತಿಗಳ ಒಡೆದರೆ ಪ್ರತಿಮೆಗೆ ನಷ್ಟವಿಲ್ಲ
ಆದರೆ ಮೂರ್ತಿಗಳು ಕಲಕುವ ರಕ್ತ ತಿಳಿಯಾಗುವುದು ನೀರಿನಷ್ಟು ಸುಲಭವಲ್ಲ
ಯಾಕಂದರೆ ಜೀವಗಳು ಆಗ ಕುದಿಯುವ ಸುಣ್ಣದ ಕಲ್ಲು
ಯಾವ ತೆರೆಗಳು ಅಲುಗಾಡಿಸದ ಪ್ರತಿಮೆಗೆ ರಕ್ತ ನೀರುಗಳ ಹಂಗಿಲ್ಲ
ಅದು ಜೀವಂತವಾಗಿರುತ್ತದೆ ಕಾಲ ದೇಶಗಳನ್ನು ಮೀರಿದ ಅನಂತದಲ್ಲಿ
ಪ್ರತೀಕ್ಷಣದ ಮನಮನದ ನಿರಾಳದಲ್ಲಿ
ಕಾಲ ದೇಶದ ವರ್ತಮಾನದ ತುರ್ತಿಗನುಗುಣವಾದ ಸಂಧಿಗಳಲ್ಲಿ
ಒಡೆದ ಮೂರ್ತಿಗಳಿಂದ ಸಿಡಿದ ಕಿಡಿಗಳಲ್ಲಿ
ಸುಡುವ ಬೆಂಕಿಯಂತಲ್ಲ ಕೊಲ್ಲುವ ಕೈದುಗಳಂತಲ್ಲ
ಸಾವಿನ ಸ್ಮೃತಿಗಳನ್ನು ಮೀರಿದ ಸಜೀವ ಶ್ರುತಿಯಾಗಿ
ಮೂರ್ತಿಗಳ ನಿಲಿಸಿದವರು, ಒಡೆದವರು
ಅಳಿದ ಮೇಲೆಯೂ ನಿಂತೇ ಇರುತ್ತದೆ
ನಿಶ್ಚಲವಾಗಿ, ಅನಂತ ಚಲನೆಯ ಅವಿಚ್ಛಿನ್ನ ಭಾಗವಾಗಿ.

■ ಬಸವರಾಜ ಪಕ್ಕುಂದ : ಮಾಲತೇಶ ಬಿಲ್ಡಿಂಗ್, ನಂ. ೬೨, ೧ನೇ ಕ್ರಾಸ್
ಕೆಲಗೇರಿ ರಸ್ತೆ, ಕುಸುಮನಗರ, ಧಾರವಾಡ - ೫೮೦ ೦೦೮ ■

ಎರಡು ಕವಿತೆಗಳು

ರಾಜೇಶ್ವರಿ ಪ್ರವೀಣ ಶಿಂಧೆ

೧. ಮಾತು ಮೌನವಾಗುವ ಮುನ್ನ

ಮಾತು ಬೆಳ್ಳಿ ಮೌನ ಬಂಗಾರ
ನಿಜವಲ್ಲವೆ ಈ ಗಾದೆ ಗೆಳೆಯ,
ಮಾತು ಮಾತಿಗೂ ಜಗಳವಾದಾಗ
ಪುಣ್ಯವಂತರು ಮಾತು ಬರದವರು ಅನಿಸುತ್ತದೆ
ಮಾತು ಮೌನವಾಗುವ ಮುನ್ನ ಅನಾಹುತ ತಪ್ಪುತ್ತದೆ.

೨. ನನ್ನೊಳಗೆ ನಾನಿದ್ದೆ

ನನ್ನೊಳಗೆ ನಾನಿದ್ದೆ
ನಿನ್ನೊಳಗೆ ನೀನಿದ್ದೆ
ತಟ್ಟಿದಾಗ ನಿನ್ನ
ಹೃದಯ
ತೆರೆಯಿತು ಬಾಗಿಲು
ಕಂಡೆ
ನಿನ್ನೊಳಗೆ ನಾನಿದ್ದೆ
ನನ್ನೊಳಗೆ ನೀನಿದ್ದೆ

■ ರಾಜೇಶ್ವರಿ ಪಿ. ಶಿಂಧೆ : ಸಹಪ್ರಾಧ್ಯಾಪಕರು
ಅರಣ್ಯಶಾಸ್ತ್ರ ಮಹಾವಿದ್ಯಾಲಯ, ಬನವಾಸಿ ರಸ್ತೆ, ಸಿರ್ಸಿ-೫೮೧ ೪೦೧ ■

೧. ವಾಚ್ಯತೆ ಮತ್ತು ಕವಿತೆ

ವ್ಯಂಗ್ಯಾರ್ಥ(ಅಥವಾ ಧ್ವನಿ) ಕಾವ್ಯದ ಜೀವಾಳವೆಂದು ಭಾರತೀಯ ಕಾವ್ಯಮೀಮಾಂಸೆಯ ನಿರ್ಣಯ. (ಈ ಅಭಿಪ್ರಾಯದ ಉಕ್ತಿಗಳು ಪಾಶ್ಚಾತ್ಯ ವಿಮರ್ಶೆಯಲ್ಲೂ ಗೋಚರಿಸುತ್ತವೆ.) ಅದನ್ನು ಇಂದು ಕೂಡ ಪ್ರಶ್ನಿಸುವ ಅಗತ್ಯವಿಲ್ಲ. ಆದರೆ ವಾಚ್ಯಾರ್ಥಸ್ತರದಲ್ಲಿ ಕಾವ್ಯತ್ವ ಸಿದ್ಧಿಸುವುದೇ ಇಲ್ಲವೆ ಎಂಬುದೊಂದು ಪ್ರಶ್ನೆ. ಯಾವುದೋ ಮಿತಿಯಲ್ಲಿ ಸಿದ್ಧಿಸಬಹುದು ಎಂಬುದೇ ಇದಕ್ಕೆ ಉತ್ತರ. ಆದರೆ ಧ್ವನಿಪೂರ್ಣವಾದ ಕಾವ್ಯ ಶ್ರೇಷ್ಠ, ವಾಚ್ಯವಲಯದ ಕಾವ್ಯ ಅಷ್ಟು ಶ್ರೇಷ್ಠವಾಗಲಾರದು ಎಂದು ಒಪ್ಪಬೇಕು.

ರಸವಿಲ್ಲದಿದ್ದರೂ ಧ್ವನಿಯಿಂದಲೇ ಕಾವ್ಯವಾಗಬಹುದು; ಹಾಗೆಯೆ ಧ್ವನಿಯಿಲ್ಲದಿದ್ದರೂ ವಾಚ್ಯತೆಯಿಂದಲೆ ಕಾವ್ಯವಾಗಬಹುದು, ಕೆಲವೊಮ್ಮೆ. ಹಾಗಾಗಬೇಕಾದರೆ, ಅದರಲ್ಲಿ ತೀವ್ರತೆ, ಉತ್ಕಟತೆ ಇರಬೇಕು. (ಭಾವಗೀತೆಯಲ್ಲಿ ಭಾವತೀವ್ರತೆಯೆ ಮುಖ್ಯ ತಾನೆ); ಆವೇಶ, ಆರ್ದ್ರತೆ, ಆರ್ತತೆ, ಕಳಕಳಿಗಳಿರಬೇಕು. ಕಾವ್ಯವೆಂಬುದು "spontaneous overflow of powerful feelings" –ಸಶಕ್ತ ಭಾವಗಳ ಸಹಜ ಸ್ಫುರಣ– ಎಂಬ ವರ್ಡ್ಸ್‌ವರ್ತನ ಲಕ್ಷಣೀಕರಣವನ್ನು ನೆನೆಯಬಹುದು; "ಕಾವ್ಯವೊಂದು ಆವೇಶ (passion)" ಎಂಬ ಲೀ ಹಂಟ್‌ನ ಉಕ್ತಿಯನ್ನು ಕೂಡ.

ರನ್ನನಂಥ ಕವಿ, ಪಂಪನ ಧ್ವನಿಸಂಪತ್ತಿಯಿಲ್ಲದೆಯೂ ತೀವ್ರತೆ, ಉತ್ಕಟತೆಗಳಿಂದಲೆ ಪರಿಣಾಮವೆಸಗುತ್ತಾನೆ ಎಂಬುದನ್ನು ಗಮನಿಸಬೇಕು.

ಬಸವಣ್ಣನವರ ಈ ವಾಚ್ಯಪ್ರಧಾನವಾದ ವಚನವನ್ನು ಲಕ್ಷಿಸಬಹುದು :

ಕಾಯವಿಕಾರ ಕಾಡಿಹುದಯ್ಯಾ,
ಮನೋವಿಕಾರ ಕೂಡಿಹುದಯ್ಯಾ,
ಇಂದ್ರಿಯವಿಕಾರ ಸುಳಿವುದಯ್ಯಾ!
ಸುಳುವಿನೊಳಗೆ ಸುಳಿವುತ್ತಲಿದ್ದೇನೆ. ಸಿಲುಕಿಸದಿರಯ್ಯಾ!
ಅನ್ಯ ಚಿತ್ತದಲ್ಲಿರಿಸಯ್ಯಾ, ನಿಮ್ಮ ಚಿತ್ತದಲ್ಲಿರಿಸಯ್ಯಾ.....

ಇದು ಖಂಡಿತ ಬಸವಣ್ಣನವರ ಉತ್ಕೃಷ್ಟ ವಚನಗಳಲ್ಲಿ ಒಂದಲ್ಲ; ಆದರೆ ಇದಕ್ಕೆ ಕಾವ್ಯತ್ವವನ್ನು ನಿರಾಕರಿಸುವುದು ಸಾಧ್ಯವೆ?

'ಧ್ವನಿಧುರಂಧರ'ನಾದ ಆನಂದವರ್ಧನನೆ ಆಡಿರುವ ಎಚ್ಚರಿಕೆಯ ಮಾತೊಂದನ್ನು ಮರೆಯಬಾರದು: "ನ ಸರ್ವತ್ರ ಧ್ವನಿರಾಗಿಣಾ ಭವಿತವ್ಯಂ"(ಎಲ್ಲೆಲ್ಲೂ ಧ್ವನಿಯನ್ನರಸಬಾರದು).

ಹೀಗಾಗಿ, ವಾಚ್ಯತೆಯಿಂದ ಕಾವ್ಯವಾಗುವುದೇ ಇಲ್ಲವೆಂಬ ಹಟ ಬೇಕಾಗಿಲ್ಲ. ಕಾವ್ಯ ಎನ್ನುವುದು ನಾನಾಸ್ತರಘಟಿತವಾದುದು; ವೈವಿಧ್ಯಸಮನ್ವಿತವಾದುದು. ಧ್ವನಿ ಪರಮರಮಣೀಯ. ಆದರೆ ವಾಚ್ಯತೆ ಸರ್ವತ್ರ ಅಸುಂದರವಲ್ಲ.[೧]

---

೧. ವ್ಯಂಗ್ಯಕ್ಕಿಂತ ವಾಚ್ಯವೆ ಸುಂದರವಾಗಿದ್ದಾಗ ಅದನ್ನು 'ಗುಣೀಭೂತವ್ಯಂಗ್ಯ'ವೆಂದು ಹಿಂದಿನವರ ಮನ್ನಿಸಿರುವುದನ್ನು ಸ್ಮರಿಸಬಹುದು.

೨. ಕಾವ್ಯದ ಮಿತಿ[೧]

ಸಾಹಿತ್ಯಪ್ರಕಾರಗಳಲ್ಲೆಲ್ಲ ಕಾವ್ಯ ಶ್ರೇಷ್ಠವಾದುದೆಂದು ಅನೇಕರ ಅಭಿಪ್ರಾಯ. ಅದು ಒಂದರ್ಥದಲ್ಲಿ ದಿಟವೂ ಹೌದು. ಕಾವ್ಯಕ್ಕೆ ಸ್ವಯಮಸ್ತಿತ್ವವುಂಟು; ಅಲ್ಲದೆ, ಎಲ್ಲ ಪ್ರಕಾರಗಳಲ್ಲೂ ಅದರ ಸಾರ ಅಂತರ್ಗತವಾಗಿರುತ್ತದೆ.

ಆದರೂ ವಸ್ತುತಃ ಕಾವ್ಯ ವ್ಯಕ್ತಿನಿಷ್ಠವಾದುದು, ಉಳಿದ ಮುಖ್ಯ ಪ್ರಕಾರಗಳು ವಸ್ತುನಿಷ್ಠವಾದವು ಎಂಬ ಮೂಲಭೂತ ಭೇದವನ್ನು ಮರೆಯಬಾರದು. (ಆದರೆ ಮಹಾಕಾವ್ಯ ವಸ್ತುನಿಷ್ಠ.)

ಕಾವ್ಯದಲ್ಲಿ ಕವಿ ತನ್ನ ವೈಯಕ್ತಿಕ ಭಾವಾನುಭವಗಳನ್ನು, ದೃಷ್ಟಾದೃಷ್ಟಗಳನ್ನು, ನೋವು ನಲಿವುಗಳನ್ನು ಅಭಿವ್ಯಕ್ತಿಸುತ್ತಾನೆ. ಆ ಪರಿಧಿಯಿಂದಾಚೆಗೆ ಹೋಗುವುದಿಲ್ಲ; ಸಮಾಜವನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳುವುದಿಲ್ಲ. ಆದ್ದರಿಂದ, ಕಾವ್ಯಪ್ರಪಂಚದಲ್ಲಿನ ಸಾಧನೆ ಒಂದು ರೀತಿಯಲ್ಲಿ ಸುಲಭವಾದದ್ದೂ ಹೌದು. ಅಲ್ಲಿ ಜವಾಬ್ದಾರಿ ಕಡಮೆ.

ನಾಟಕ, ಕತೆ, ಕಾದಂಬರಿಗಳಂತಹ ವಸ್ತುನಿಷ್ಠ ಪ್ರಕಾರಗಳಲ್ಲಾದರೋ ಲೇಖಕ ಪರಕಾಯ ಅಥವಾ ಪರಹೃದಯ ಪ್ರವೇಶ ಮಾಡಬೇಕಾಗುತ್ತದೆ; ಸಮುದಾಯದ ಸುಖದುಃಖಗಳಿಗೆ ಅಭಿವ್ಯಕ್ತಿ ನೀಡಬೇಕಾಗುತ್ತದೆ. ಅಲ್ಲಿ ಅವನ ಕೆಲಸ ಕವಿಯ ಕೆಲಸದಂತೆ ಸರಳವಾಗದೆ, ಸಾಧನೆ ಸಂಕೀರ್ಣವಾಗುತ್ತದೆ.

ಭಾವಗೀತ ಕಾವ್ಯದಲ್ಲಿ ಕವಿ ಆತ್ಮನಿಷ್ಠನಾಗಿ, ವ್ಯಷ್ಟಿಸೀಮಿತನಾಗಿ ಒಂದೇ ಕಡೆ ನೆಲೆಗೊಂಡಿದ್ದರೆ, ಇತರ ಸಾಹಿತ್ಯ ಪ್ರಕಾರಗಳಲ್ಲಿ ಸಮಷ್ಟಿನಿಷ್ಠನಾಗಿ ಎಲ್ಲ ಕಡೆ ಇರಬೇಕಾಗುತ್ತದೆ. ಒಂದರಲ್ಲಿ ಅವನ ದೃಷ್ಟಿ ಪರಿಮಿತವಾಗಿದ್ದರೆ, ಇನ್ನೊಂದರಲ್ಲಿ ಪರಗತವಾಗಿ, ವಿಶಾಲವಾಗಿರುತ್ತದೆ.

ಹೀಗಾಗಿ, ಕಾವ್ಯಕೃತಿ ಎಷ್ಟೇ ಉತ್ತಮವಾಗಿದ್ದರೂ ಅನ್ಯಪ್ರಕಾರಗಳ ಉತ್ತಮ ಕೃತಿಗಳಿಗಿಂತ ಮೇಲಾಗಲಾರದು, ಎನ್ನಬಹುದು. ಆದ್ದರಿಂದ, ಕವಿತೆ ರಚಿಸಿದರೆ ಸಾಲದು, ಇತರ ಪ್ರಕಾರಗಳಿಗೂ ಮನಸ್ಸು ಕೊಡಬೇಕು, ಕವಿ.

೩. ಧ್ವನಿ ಮತ್ತು ಔಚಿತ್ಯ

ರಸ, ಧ್ವನಿ, ಔಚಿತ್ಯ – ಇವು ಭಾರತೀಯ ಕಾವ್ಯಮೀಮಾಂಸೆ ಸಾಕ್ಷಾತ್ಕರಿಸಿಕೊಂಡ 'ಕಾವ್ಯಗಾಯತ್ರಿ'. ಧ್ವನಿ ಮತ್ತು ಔಚಿತ್ಯದ ಬಗ್ಗೆ ಇಲ್ಲಿ ಒಂದು ಮುಖ್ಯವಾದ ಅಂಶವನ್ನು ಪ್ರಸ್ತಾಪಿಸಬೇಕು.

ಧ್ವನಿ ಹಾಗೂ ಔಚಿತ್ಯ ಬಹುಮಟ್ಟಿಗೆ ಪ್ರತ್ಯೇಕವಾದ ತತ್ತ್ವಗಳು. ಆದರೆ ಕೆಲವೊಮ್ಮೆ ಧ್ವನಿ ಔಚಿತ್ಯವನ್ನು ಒಳಗೊಳ್ಳುವುದು ಸಾಧ್ಯ. ಹಾಗಾದಾಗ, ಅವೆರಡೂ ಒಂದೇ ತತ್ತ್ವದ ಎರಡು ಮುಖಗಳಾಗಿ ಪರಿಣಮಿಸುತ್ತವೆ.

ವಾಚ್ಯವಾಗಿ ಹೇಳಿದರೆ ಯಾವುದು ಗ್ರಾಮ್ಯವೂ ತನ್ಮೂಲಕ ಅನುಚಿತವೂ ಆಗಬಹುದೋ, ಆಗುತ್ತದೆಯೋ ಅದನ್ನು ಪ್ರತಿಭಾಶಾಲಿಯಾದ ಕವಿ ಧ್ವನಿಸಿ, ಗ್ರಾಮ್ಯತೆಯನ್ನು ನೀಗುತ್ತಾನೆ; ಎಂದರೆ, ಔಚಿತ್ಯಪಾಲನೆಗಾಗಿ, ಅನೌಚಿತ್ಯನಿವಾರಣೆಗಾಗಿ, ಧ್ವನಿವಿಧಾನವನ್ನು ಆಶ್ರಯಿಸುತ್ತಾನೆ. ಆಗ ಧ್ವನಿ ಮತ್ತು ಔಚಿತ್ಯ ಅಭಿನ್ನವಾಗುತ್ತವೆ.

---

೧. ಇದು ಪು.ತಿ.ನ. ಅವರೊಮ್ಮೆ ಆಡಿದ ಮಾತಿನ ಆಶಯದ ವಿಸ್ತರಣ.

ಆನಂದವರ್ಧನನ 'ಧ್ವನ್ಯಾಲೋಕ'ದ ಮುಖ್ಯೋದ್ದೇಶ ಧ್ವನಿಪ್ರತಿಪಾದನೆಯಾದರೂ ಅದು ಔಚಿತ್ಯವನ್ನೂ ಕುರಿತು ವಿಚಾರ ಮಾಡಿರುವುದು ಈ ಕಾರಣದಿಂದ ಎನಿಸುತ್ತದೆ. ಇನ್ನು, ರಸದ ಬಗೆಗೂ ಹೇಳುತ್ತಾನೆ, ಆನಂದವರ್ಧನ; ಏಕೆಂದರೆ, ಧ್ವನಿ ಪ್ರಕಾರಗಳಲ್ಲಿ ರಸಧ್ವನಿಯೆ ಪರಮ ರಮಣೀಯ. ಮತ್ತೊಂದು ಕಡೆ, ಅಲಂಕಾರಗಳ ಪ್ರಾಮುಖ್ಯವನ್ನೂ ಅವನು ಸ್ಥಾಪಿಸುತ್ತಾನೆ.

ಹೀಗಾಗಿ, 'ಧ್ವನ್ಯಾಲೋಕ'ದ ಕಾವ್ಯಜಿಜ್ಞಾಸೆಯಲ್ಲಿ ಸಮಗ್ರತೆಯನ್ನು ಕಾಣುತ್ತೇವೆ. ಎಂತಲೇ, ಅದರ ಸ್ಥಾನ ಭಾರತೀಯ ಅಲಂಕಾರದ ಚರಿತ್ರೆಯಲ್ಲಿ ಅನನ್ಯವಾದದ್ದು.

೪. ಹೇಳಿಕೆ-ಹೋಲಿಕೆ

ಹೇಳಿಕೆ (statement) ಗದ್ಯದ ವಿಧಾನ; ಶಾಸ್ತ್ರದ ಜಾಡು; ವ್ಯವಹಾರ ಪ್ರಪಂಚದ ಸಂವಹನ ಮಾರ್ಗ. ಆದರೆ 'ಹೋಲಿಕೆ' ಕಾವ್ಯದ ದಾರಿ. ಇಲ್ಲಿ ಹೋಲಿಕೆ ಎಂದರೆ ಉಪಮೆ ಮಾತ್ರವಲ್ಲ; ಅಥವಾ ಔಪಮ್ಯಮೂಲವಾದ ಅಲಂಕಾರಗಳು ಮಾತ್ರವಲ್ಲ. ಉಪಮೆ, ರೂಪಕ, ಸಂಕೇತ, ಪ್ರತೀಕ, ಪ್ರತಿಮೆ ಇತ್ಯಾದಿಗಳನ್ನೆಲ್ಲ– ಒಟ್ಟಾರೆ 'ವಸ್ತುಪ್ರತಿರೂಪ' ಸಾಮಗ್ರಿಯನ್ನೆಲ್ಲ– ಅದು ಒಳಗೊಳ್ಳುವಂಥದು.

ವ್ಯವಹಾರಭಾಷೆ ನೇರವಾದದ್ದು; ವಾಚ್ಯವಾದದ್ದು; ಅದು ಹೇಳಿಕೆಗಳ ಪ್ರಾಂತ. (ಈ ಮಾತಿಗೆ ಸಣ್ಣಪುಟ್ಟ ಅಪವಾದಗಳಿಲ್ಲವೆಂದಲ್ಲ.) ಕವಿತಾಭಾಷೆಯಾದರೊ ವಕ್ರ ಮತ್ತು ವ್ಯಂಗ್ಯ (ಟಿಲ್‌ಯಾರ್ಡ್‌ನ ಪ್ರಕಾರ 'oblique'); ಅದರಲ್ಲಿ ಹೋಲಿಕೆಗಳ ಪಾಲು ಮಿಗಿಲು. ಅದರ ಗುರಿ ಬರಿಯ ಪ್ರಯೋಜನವಲ್ಲ, ಪ್ರತೀಯಮಾನ.

ನಿದರ್ಶನಕ್ಕೆ, "ಮಾತು ಉಪಯುಕ್ತ" ಎನ್ನುವುದು ಹೇಳಿಕೆಯಷ್ಟೆ; "ಭಾಷೆ ಬೆಳಕು" ಎನ್ನುವುದು ಅದನ್ನು ಮೀರಿದ್ದು. ಆದರೆ "ಮಾತೆಂಬುದು ಜ್ಯೋತಿರ್ಲಿಂಗ!" ಎನ್ನುವುದು ಲೋಕೋತ್ತರವಾದ, ಪ್ರಯೋಜನ ಸ್ತರವನ್ನು ದಾಟಿದ ಹೋಲಿಕೆ.

"ಅವರು ಸತ್ತರು" ಎಂದರೆ, ಅದು ನಿರ್ವಿಶಿಷ್ಟವಾದ ವಾಚ್ಯೋಕ್ತಿ. ಆದರೆ ಕುಮಾರವ್ಯಾಸನಂತೆ "ಪಥಿಕರಾದರು ಗಗನಮಾರ್ಗದಲಿ!" ಎಂದೊ "ಅಪ್ಪಿದರು ಖಚರೀಜನರ ಕುಚಯುಗವ!" ಎಂದೊ ಅಭಿವ್ಯಕ್ತಿಸಿದರೆ, ಅದು ಧ್ವನಿಪ್ರಚುರ ವಕ್ರೋಕ್ತಿ.

ಋಜುತ್ವ ಅಥವಾ ನೇರಗುಣ ವ್ಯಾವಹಾರಿಕ ಜಗತ್ತಿನ ಸ್ವಭಾವವಾದರೆ, 'ಕುಟಿಲತೆ' ಅಥವಾ ವಕ್ರತೆ ಕಾವ್ಯಭೂಮಿಕೆಯ ವೈಶಿಷ್ಟ್ಯ: ಇದು ಸ್ವಾರಸ್ಯದ ಸಂಗತಿ ಸಹ !

೫. 'ಮತಾಬ್ಧಿ' ಮತ್ತು 'ದೇವಗಂಗೆ'

"ಮೀನಾಗಿ ಇರಬೇಕು ಮಧ್ವ ಮತಾಬ್ಧಿಯೊಳು" ಎಂಬುದು ಪುರಂದರದಾಸರ ಒಂದು ಕರೆ. ಮಧ್ವಮತವಿರಲಿ, ಯಾವ ಮತವೂ ಇಂದು ಮನುಷ್ಯನಿಗೆ ಅಗತ್ಯವಲ್ಲ, ತಾರಕವೂ ಅಲ್ಲ. ಮತಿಯಷ್ಟೆ ಇಂದಿನ ಆವಶ್ಯಕತೆ. ಮಾನವ "ನೂರು ಮತದ ಹೊಟ್ಟು ತೂರಿ" ವಿಶ್ವಪ್ರಜ್ಞೆಯಿಂದ ಮುನ್ನಡೆಯಬೇಕಾದ ಕಾಲವಿದು. "ಮನುಜಮತ, ವಿಶ್ವಪಥ" ಈ ಹೊತ್ತಿನ ಆದರ್ಶವಾಗಬೇಕು. ಆದರೆ ಧರ್ಮ, ಅಧ್ಯಾತ್ಮಗಳು ಅಪೇಕ್ಷಣೀಯ. (ಧರ್ಮ ಬೇರೆ, ಮತ ಬೇರೆ. ಧರ್ಮ ಕಾಳು, ಮತ ಹೊಟ್ಟು.)

ಕವಿಗಂತೂ ಮತದ ನಿರ್ಬಂಧ, ಉಪಾಧಿ ಬೇಕಿಲ್ಲ; ಅದು ಅವನ ಕಾವ್ಯದ ಉಸಿರು ಕಟ್ಟಿಸಬಹುದು. (ನಮ್ಮ ಬಹುಪಾಲು ಪ್ರಾಚೀನ ಕಾವ್ಯಗಳು ಮತಧರ್ಮಗಳ ಪರಿಧಿಯೊಳಗೇ ವಿಹರಿಸುವುದನ್ನು ನೆನೆಯಬಹುದು.) ವಾಸ್ತವವಾಗಿ, "ರಸವೊಂದೆ ಕವಿಗೆ ನೀತಿ !" ಕವಿಯಾಗಲಿ ಸಹೃದಯನಾಗಲಿ ಕುವೆಂಪು ಅವರ ಉಕ್ತಿಯನ್ನು ಧ್ಯೇಯವಾಕ್ಯವಾಗಿಟ್ಟುಕೊಳ್ಳಬೇಕು : "ರಸದೇವಗಂಗೆಯಲಿ ಮೀನಾಗುವಾ !" (ಅಂತೂ ಮಾನವ ಮೀನಾಗಿರಬೇಕು ಎಂಬುದರ ಬಗೆಗೆ ಭಿನ್ನಮತವಿಲ್ಲ !)

ಮತದ ಸಮುದ್ರ, ಅದರ ಉಪ್ಪು ನೀರು ಆಸ್ವಾದ್ಯವಲ್ಲ; ಗಂಗಾಜಲ ಆಸ್ವಾದ್ಯವೂ ಹೌದು, ಪವಿತ್ರವೂ ಹೌದು. ಮತ ವಿರಸಮೂಲವೂ ವಿರಸಕಾರಣವೂ ಆಗತಕ್ಕದ್ದು; ಕಾವ್ಯ, ಕಲೆಗಳಾದರೋ ರಸಾತ್ಮಕ, ಅಮೃತಾಹಾರ.

ಉಪ್ಪಿನ ಉಪಯೋಗವನ್ನು ಪೂರ್ತಿ ಅಲ್ಲಗಳೆಯದೆ, ಒಟ್ಟಿನ ಮೇಲೆ ಹೀಗೆ ಹೇಳಬಹುದು: "ಸಂಪಾದ್ಯವಾದುದು ಮತಾಬ್ಧಿಯ ಲವಣರಾಶಿಯಲ್ಲ, ಅಧ್ಯಾತ್ಮರತ್ನಾಕರದ ಮುತ್ತು ರತ್ನಗಳ ಸಮುಚ್ಚಯ; ಉಪ್ಪಿನ ಹೆಂಟೆಯಲ್ಲ, ರಸಘಟ್ಟಿ: "ರಸೋ ವೈ ಸಃ !"

೬. ರನ್ನನ ಋಣ

"ವಾಗ್ದೇವಿಯ ಭಂಡಾರದ ಮುದ್ರೆಯನೊಡೆದಂ ಸಾರಸ್ವತಮೆನಿಪ ಕವಿತೆಯಿಂ ಕವಿ ರನ್ನಂ" ಎಂಬುದು 'ಗದಾಯುದ್ಧ'ದಲ್ಲಿ ರನ್ನನ ಮಾತು. ಇದು ಬಡಾಯಿ ! (ಆದರೆ ಅವನಲ್ಲಿ ಅಲ್ಪ ಸ್ವಲ್ಪ ಬಂಡವಾಳ ಉಂಟು.) ವಾಸ್ತವವಾಗಿ, ರನ್ನ ಒಡೆದಿರುವುದು ಪಂಪ ಭಾರತದ ೧೩ ನೆಯ ಆಶ್ವಾಸದ ಮುದ್ರೆಯನ್ನು ! ಪಂಪನಿಗೆ ಅವನು ಪದೇ ಪದೇ ಋಣಿ ಎಂಬುದು ಸೂಕ್ಷ್ಮವಾದ ನೋಟಕ್ಕೆ ಮಾತ್ರ ವಿದಿತವಾಗುವ ವಿದ್ಯಮಾನ. ಇದಕ್ಕೊಂದು ಸಣ್ಣ ನಿದರ್ಶನವನ್ನಿಲ್ಲಿ ಲಕ್ಷಿಸಬಹುದು.

ದುರ್ಯೋಧನ ತನ್ನ ಬದುಕಿನ ಅಂತಿಮ ಹಂತದಲ್ಲಿ ರಣರಂಗದಲ್ಲಿ ನಡೆದು ಬರುತ್ತಿರುವಾಗ, ಅವನಿಗೆ ಅಭಿಮನ್ಯುವಿನ ಶವ ಗೋಚರಿಸುತ್ತದೆ. ಅವನನ್ನು ಕೊಂಡಾಡುತ್ತಾನೆ, ಕುರುಪತಿ :

> ಅಸಮಬಲ ಭವದ್ವಿಕ್ರಮ-
> ಮಸಂಭವಂ ಪೆಱರ್ಗೆ ನಿನ್ನನಾನಿತಂ ಪ್ರಾ-
> ರ್ಥಿಸುವೆನಭಿಮನ್ಯು ನಿಜಸಾ-
> ಹಸೈಕದೇಶಾನುಮರಣಮೆಮಗಕ್ಕೆ ಗಡಾ (೪.೫೬)

ರಂ. ಶ್ರೀ. ಮುಗಳಿಯವರು ಈ ಬಗೆಗೆ ಹೀಗೆ ಬರೆಯುತ್ತಾರೆ : "ಗುಣಕ್ಕೆ ಮತ್ಸರವಿಲ್ಲದ ಈ ಧೀರೋದಾತ್ತತನ ದುರ್ಯೋಧನ ಪಾತ್ರಕ್ಕೆ ಇಲ್ಲಿ ಕಳೆಗಟ್ಟಿದೆ. ಬಾಲ ಅಭಿಮನ್ಯುವನ್ನು ಬಾಯ್ತುಂಬ ಹೊಗಳಿ ಅವನ ಮೃತಶರೀರಕ್ಕೆ ಕೈಮುಗಿದ ಹಿರಿಯ ಚಕ್ರವರ್ತಿಯ ದೃಶ್ಯ ರನ್ನನ ಸ್ವಂತ ಸೃಷ್ಟಿಯಾಗಿ ಭಾರತೀಯ ಸಾಹಿತ್ಯದಲ್ಲಿ ಚಿರಸ್ಮರಣೀಯವಾಗಲು ಅರ್ಹವಾಗಿದೆ."[೩]

---

೩. 'ರನ್ನನ ಕೃತಿರತ್ನ', ಪು. ೧೩.

ಆದರೆ ನಿಜಾಂಶವೇನು ? ಪಂಪನ ಈ ಪದ್ಯವನ್ನು ನೋಡೋಣ :

ಅಱಿಮುದು ಮತ್ತಸಾಮಜಶತಮಾಜಿಯೊಳಿತ್ತಭಿಮನ್ಯುಪೊರ್ವನ-
ತ್ತಱಿದನಿವಾವ ಗೆಲ್ದಮನಗಂ ಕಲಿಯಾದನೊ ಪೊಣ್ಣ ಗಂಡವಾ-
ತಱಿಯದೆ ಗಂಡನೆಂತಪೆವುದೀಯಱಿವಿನ್ನೆನಗಾಜಿರಂಗದೊಳ್
ಗಱಿಯಿಸುಗೆಂಬಿದಂ ನುಡಿಯುತ್ತುಂ ಘಟಸಂಭವನೊಳ್ ಸುಯೋಧನಂ (೧೧.೯೯)

"ಈ ಅಱಿವಿನ್ನೆನಗಾಜಿರಂಗದೊಳ್ ಗಱಿಯಿಸುಗೆ" (=ಇಂಥ ಸಾವು ನನಗೆ ಯುದ್ಧರಂಗದಲ್ಲಿ ಉಂಟಾಗಲಿ) ಎಂಬುದಕ್ಕೂ "ನಿಜ ಸಾಹಸೈಕದೇಶಾನುಮರಣಮೆಮಗಕ್ಕೆ" (=ನಿನ್ನ ಸಾಹಸದ ಒಂದು ಭಾಗದಿಂದ ಬರುವಂಥ ಮರಣ ನಮಗೆ ಬರಲಿ) ಎಂಬುದಕ್ಕೂ ಅಭಿವ್ಯಕ್ತಿಯಲ್ಲಿ ಅಂತರವಿದೆಯೆ ಹೊರತು ಆಶಯದಲ್ಲಲ್ಲ. ರನ್ನನ ಅಭಿವ್ಯಕ್ತಿಶಕ್ತಿ ಪರಿಣಾಮಕಾರಿಯಾದುದೆಂಬುದನ್ನು ಒಪ್ಪಬೇಕು. ಆದರೆ ಅಭಿವ್ಯಕ್ತಿಗಿಂತ ಅನುಭವ ಮುಖ್ಯವಲ್ಲವೆ ?

ಪಂಪ-ರನ್ನರ ಸಂಬಂಧ ಇರುವುದು ಬಹಳಷ್ಟು ಕಡೆ ಹೀಗೆಯೆ !

೭. ಪಂಪನ ಕುಲನಿರಾಕರಣ

ನಮ್ಮ ಪ್ರಾಚೀನ ಪ್ರೌಢ ಕಾವ್ಯಗಳಲ್ಲಿ ಸಾಮಾಜಿಕ ಪ್ರಜ್ಞೆ ವಿರಳವೆಂಬುದು ಸರ್ವವಿದಿತ ಸಂಗತಿ. ಆದರೆ ಪಂಪಭಾರತದಂಥ ಕಾವ್ಯದಲ್ಲಿ ಅದನ್ನು ಅಷ್ಟಿಷ್ಟು ಕಾಣಬಹುದು. ಉದಾಹರಣೆಗೆ, ಭೀಷ್ಮ ಪಟ್ಟಾಭಿಷೇಕ ಸಂದರ್ಭದಲ್ಲಿ ಪಂಪನ ಸಾಮಾಜಿಕ ಪ್ರಜ್ಞೆ ಮಿಂಚಿದೆ.

ಪಂಪಭಾರತದ ಆಕರಗಳಲ್ಲೊಂದು, ಭಟ್ಟನಾರಾಯಣನ ಸಂಸ್ಕೃತ ನಾಟಕ : 'ವೇಣೀಸಂಹಾರ'. ಅದರಲ್ಲಿ ಒಂದೆಡೆ ಕರ್ಣ ತನ್ನ ಕುಲವನ್ನು ಜರಿದ ಅಶ್ವತ್ಥಾಮನಿಗೆ ಹೀಗೆ ಉತ್ತರಿಸುತ್ತಾನೆ :

ದೈವಾಯತ್ತಂ ಕುಲೇ ಜನ್ಮ
ಮದಾಯತ್ತಂ ತು ಪೌರುಷಂ (೩.೩೬)

"ಸತ್ಕುಲದಲ್ಲಿ ಹುಟ್ಟುವುದು ದೈವವನ್ನು ಅವಲಂಬಿಸಿದೆ; ಪೌರುಷವಾದರೊ ನನ್ನನ್ನು ಅವಲಂಬಿಸಿದೆ."

ಇಲ್ಲಿ ಕುಲನಿರಾಕರಣವಿಲ್ಲವೆಂಬುದು ಗಮನಾರ್ಹ; ಬ್ರಾಹ್ಮಣ ಕವಿಯಾದ ಭಟ್ಟನಾರಾಯಣನಲ್ಲಿ ಅದನ್ನು ನಿರೀಕ್ಷಿಸುವಂತಿಲ್ಲ.

'ವೇಣೀಸಂಹಾರ'ದ ಈ ಪದ್ಯದಿಂದಲೆ ಪ್ರೇರಿತವಾದದ್ದು ಪಂಪನ ಈ ಪದ್ಯ :

ಕುಲಮನೆ ಮುನ್ನ ಮುಗ್ಗಡಿಪಿರೇಂ ಗಳ ನಿಮ್ಮ ಕುಲಂಗಳಾಂತು ಮಾ-
ರ್ಮಲೆವರನಟ್ಟಿ ತಿಂಬುವ ಕುಲಂ ಕುಲಮಲ್ತು ಚಲಂ ಕುಲಂ ಗುಣಂ
ಕುಲಮಭಿಮಾನಮೊಂದೆ ಕುಲ [ಮಣ್ಮೆ ಕುಲಂ] ಬಗೆವಾಗಳೀ [ಗಳೀ]
ಕಲಹಮೊಳಣ್ಣ ನಿಮ್ಮ ಕುಲಮಾಕುಲಮಂ ನಿಮಗುಂಟು ಮಾಡುಗುಂ (೧೦.೨೧)

ದ್ರೋಣನಿಗೆ ಕರ್ಣ ಕೊಡುವ ಈ ಉತ್ತರದಲ್ಲಿ ಕುಲನಿರಾಕರಣ ಸ್ಪಷ್ಟವಾಗಿದೆ. ಅದು ಜೈನಕವಿಯಾದ ಪಂಪನ ವೈಯಕ್ತಿಕ ನಿಲುವು ಕೂಡ. ಕುಲದ ಸ್ಥಾನದಲ್ಲಿ ಅವನು ಚಲ, ಗುಣ, ಅಭಿಮಾನ, ಪರಾಕ್ರಮಗಳನ್ನು ಎತ್ತಿಹಿಡಿದಿದ್ದಾನೆ. 'ವೇಣೀಸಂಹಾರ'ದಲ್ಲಿ ಕುಲ ಮತ್ತು ಪೌರುಷ ಬೇರೆ ಬೇರೆಯಾಗಿದ್ದರೆ, ಪಂಪನಲ್ಲಿ ಅವುಗಳ ಅಭೇದವಿರುವುದನ್ನು ಲಕ್ಷಿಸಬೇಕು.

ಕುಲ ಅಥವಾ ಜಾತಿಯ ಬಗೆಗಿನ ಪಂಪನ ನಿಲುವು ಇಂದಿಗೆ ಸಂಗತವಾಗಿದೆ. ಅದಕ್ಕೆ ಪೂರಕವಾಗಿ 'ಆದಿಪುರಾಣ'ದಲ್ಲಿ ಬರುವ "ಮನುಷ್ಯ ಜಾತಿ ತಾನೊಂದೆ ವಲಂ" ಎಂಬ ಉಕ್ತಿಯನ್ನೂ ಪರಿಗಣಿಸಬಹುದು. ಸಂದರ್ಭದಿಂದ ಪ್ರತ್ಯೇಕಿಸಿದಾಗ, ಅದು ಕುವೆಂಪು ಅವರು ಗ್ರಹಿಸಿದಂತೆ ವಿಶ್ವಮಾನವ ಸಂದೇಶವನ್ನು ಸಾರುವ 'ವಾಕ್ಯಮಾಣಿಕ್ಯ'ವಾಗಿದೆ.

೮. 'ಸಮಸ್ತ ಭಾರತ'

ಇದೊಂದು ವಿಚಾರ : ಪಂಪನ ಲೌಕಿಕ ಕಾವ್ಯವಾದ 'ವಿಕ್ರಮಾರ್ಜುನ ವಿಜಯ'ಕ್ಕೆ ಅಥವಾ ನಾವು ಸಾಮಾನ್ಯವಾಗಿ ಕರೆಯುವಂತೆ 'ಪಂಪಭಾರತ'ಕ್ಕೆ ಬೇರೊಂದು ಹೆಸರುಂಟೇ ಎಂಬುದನ್ನು ಕುರಿತದ್ದು.

ಮೊದಲು ಪಂಪನ ಈ ಹೇಳಿಕೆಯನ್ನು ನೋಡೋಣ : ".....ಮುಂ ಸಮಸ್ತ ಭಾರತಮನಪೂರ್ವಮಾಗೆ ಸಲೆ ಪೇಟ್ದ ಕವೀಶ್ವರರಿಲ್ಲ." ತನ್ನ ಉದ್ದೇಶವೇನೆಂಬುದನ್ನು ಕವಿ ಇಲ್ಲಿ ಹೇಳಿಕೊಂಡಿದ್ದಾನೆ : ಭಾರತವನ್ನು ಸಮಗ್ರವಾಗಿ (ಅಥವಾ ಸಂಗ್ರಹವಾಗಿ) ಕನ್ನಡದಲ್ಲಿ ನಿರೂಪಿಸುವುದು. ಇಲ್ಲಿ 'ಸಮಸ್ತ'ದ ಅರ್ಥದ ಚರ್ಚೆ ಅಪ್ರಕೃತ; ನಮಗೆ ಮುಖ್ಯವಾದದ್ದು ಹೆಸರು.

'ಸಮಸ್ತ' ಎಂಬ ಮಾತನ್ನು ಪಂಪ ಇನ್ನೂ ಒಂದು ಕಡೆ ಬಳಸಿದ್ದಾನಷ್ಟೆ : "ಮುನ್ನಿನ ಕಬ್ಬಮನೆಲ್ಲಮಿಕ್ಕಿ ಮೆಟ್ಟಿದುವು ಸಮಸ್ತ ಭಾರತಮುಮಾದಿಪುರಾಣ ಮಹಾಪ್ರಬಂಧಮುಂ." ಇಲ್ಲಿ ಎಚ್ಚರಿಕೆಯಿಂದ ಗಮನಿಸಬೇಕು, 'ಸಮಸ್ತಭಾರತ' ಎಂಬುದು 'ಆದಿಪುರಾಣ'ದಂತೆ ಪಂಪನ ಇನ್ನೊಂದು ಕೃತಿಯ ಹೆಸರು ಎಂಬುದನ್ನು ! (ಅದು ಇಲ್ಲಿ ಕೃತಿನಾಮವಲ್ಲದೆ ಮತ್ತೇನೂ ಆಗುವುದು ಸಾಧ್ಯವಿಲ್ಲ.)

ನಿಜ, ಪಂಪ ತನ್ನ ಭಾರತಕ್ಕೆ ಕೊಟ್ಟ (ಅಧಿಕೃತವಾದ) ಹೆಸರು 'ವಿಕ್ರಮಾರ್ಜುನವಿಜಯ'; ಅದರ ಸಂಕ್ಷಿಪ್ತ ರೂಪವೆ 'ಸಮಸ್ತ ಭಾರತ'. 'ವಿಕ್ರಮಾರ್ಜುನವಿಜಯ' ಉದ್ದವಾದುದರಿಂದ, ನಾವೀಗ ಸಂಕ್ಷೇಪಿಸಿ ಪಂಪಭಾರತ ಎಂದು ಕರೆಯುತ್ತಿದ್ದೇವೆ; ಅದರ ಅಗತ್ಯವಿಲ್ಲ : ಪಂಪನೆ 'ಸಮಸ್ತ ಭಾರತ' ಎಂಬ ಹ್ರಸ್ವ ನಾಮವನ್ನು ಕೊಟ್ಟು ನಮಗೆ ಸೌಲಭ್ಯ ಕಲ್ಪಿಸಿದ್ದಾನೆ! ರನ್ನ ತನ್ನ 'ಸಾಹಸಭೀಮವಿಜಯ'ವನ್ನು 'ಗದಾಯುದ್ಧ' ಎಂದೂ ಕರೆದಿರುವುದನ್ನು ಅಗತ್ಯವಾಗಿ ಲಕ್ಷಿಸಬೇಕು.

ಆದ್ದರಿಂದ, ನಾವಿನ್ನು ಪಂಪನ ಲೌಕಿಕ ಕಾವ್ಯವನ್ನು 'ವಿಕ್ರಮಾರ್ಜುನವಿಜಯ'ವೆಂದೋ 'ಸಮಸ್ತ ಭಾರತ'ವೆಂದೋ ಕರೆಯಬೇಕು; ಪಂಪಭಾರತ ಎಂದಲ್ಲ. (ಹಾಗೆ ಕರೆದರೆ ತಪ್ಪೇನಲ್ಲ. ಆದರೆ ಅದರಲ್ಲೇನಿದೆ ವಿಶೇಷ ?)

೯. ಕುಮಾರವ್ಯಾಸನ ಒಂದು ರೂಪಕ

ಮಹಾಕವಿ ಕುಮಾರವ್ಯಾಸನ ಕಾವ್ಯದ ನೆತ್ತರು, ರೂಪಕ. ಅವನ ರೂಪಕ ಸಮುದಾಯದಲ್ಲಿ ಸರಳ ರೂಪಕಗಳಿರುವಂತೆ ಸಂಕೀರ್ಣ ರೂಪಕಗಳೂ ಉಂಟು. ಇದೊಂದು ಸಂಕೀರ್ಣತಮ ರೂಪಕ (ದುರ್ಯೋಧನನ ಉಕ್ತಿಯಲ್ಲಿರತಕ್ಕದ್ದು) : "ಭೀಷ್ಮಾದಿ ಜವ್ವನ ದರ್ಪದಲಿ ಜಾರಿದ ಜಯಾಂಗನೆ ಮುಪ್ಪಿನಲಿ ನಮಗೊಲಿವುದರಿದು !"

ಭೀಷ್ಮ, ದ್ರೋಣರು ತರುಣರಾದದ್ದು ಯಾವಾಗ ? ಪ್ರಶ್ನೆ ಮೂಡುತ್ತದೆ; ಆದರೆ ಇಲ್ಲಿ ಅವರ ಯೌವನದ ಪ್ರಸಕ್ತಿಯಾಗಲಿ ದುರ್ಯೋಧನನ ವೃದ್ಧಾಪ್ಯದ ಪ್ರಸಕ್ತಿಯಾಗಲಿ ಇಲ್ಲ. ಮಹಾಭಾರತಯುದ್ಧದ ಕಾಲಕ್ಕೆ ಭೀಷ್ಮ, ದ್ರೋಣರು ಮುದುಕರಾಗಿದ್ದರು; ದುರ್ಯೋಧನ ಯುವಕನಲ್ಲದಿದ್ದರೂ ವೃದ್ಧನೇನೂ ಆಗಿರಲಿಲ್ಲ. ಎಂದಮೇಲೆ ಇಲ್ಲಿ ಬಂದಿರುವ ಜವ್ವನ, ಮುಪ್ಪುಗಳ ಅರ್ಥವಾದರೂ ಏನು ? ಅವು ವ್ಯಕ್ತ್ಯತೀತ. ಭೀಷ್ಮ, ದ್ರೋಣರು ಬದುಕಿದ್ದಾಗ, ಅದು ದುರ್ಯೋಧನನ ಪಾಲಿಗೆ ಯೌವನವಾಗಿತ್ತು; ಏಳ್ಗೆಯ ಕಾಲವಾಗಿತ್ತು; ಆ ಅವಸ್ಥೆಯಲ್ಲೆ ಜಯಲಕ್ಷ್ಮಿ ಅವನಿಗೆ ಒಲಿಯಲಿಲ್ಲ. ಅವರು ಬಿದ್ದುಹೋದ ಮೇಲೆ, ಅದು ದುರ್ಯೋಧನನ ಪಾಲಿಗೆ ವೃದ್ಧಾಪ್ಯ. ಈ ಅವನತಿಯ ಅವಸ್ಥೆಯಲ್ಲಿ ಜಯಲಕ್ಷ್ಮಿ ಒಲಿಯುವುದು ಖಂಡಿತ ಅಸಂಭವ.

ದುರ್ಯೋಧನನ ಮಾತನ್ನು ಅಕ್ಷರಶಃ ತೆಗೆದುಕೊಳ್ಳುವಂತೆಯೆ ಇಲ್ಲ. ಹಾಗೆ ತೆಗೆದುಕೊಂಡರೆ, ಭೀಷ್ಮ ದ್ರೋಣರು ತಮ್ಮ ಯೌವನಕಾಲದಲ್ಲಿ ಎಂದೂ ಪರಾಜಿತರಾದವರಲ್ಲ; ಮುಪ್ಪಿನಲ್ಲಿ ಅವರ ಸೋಲು ಸಹಜ ! ಆದರೆ ಕವಿಯ ವಿವಕ್ಷೆ ಅದಲ್ಲ.

ಯೌವನ, ವಾರ್ಧಕ್ಯಗಳನ್ನು ಒಂದರ್ಥದಲ್ಲಿ ವಿನಿಮಯಗೊಳಿಸುವ ಈ ವಿಶಿಷ್ಟ ರೂಪಕ ಬೆರಗುಗೊಳಿಸುವಂಥದು.

೧೦. ಕನ್ನಡ ಸಾಹಿತ್ಯದ ಒಂದು ವೈಶಿಷ್ಟ್ಯ

ಪ್ರಾಚೀನ ಕನ್ನಡ ಸಾಹಿತ್ಯ ಸಂಸ್ಕೃತ ಸಾಹಿತ್ಯವನ್ನು ಎಷ್ಟೇ ಅನುಸರಿಸಿರಲಿ, ಅದರ ಪಡಿನೆರಳಾಗಿ ಪರಿಣಮಿಸಲಿಲ್ಲ ಎನ್ನುವುದು ಗಮನಾರ್ಹ; ಸಮಾಧಾನಕರ. ಸಂಸ್ಕೃತವನ್ನು ಕನ್ನಡ ಪ್ರತ್ಯಂಶದಲ್ಲೂ ಆದರ್ಶವಾಗಿ, ಮಾದರಿಯಾಗಿ ಸ್ವೀಕರಿಸಲಿಲ್ಲ; ಸ್ವಂತಿಕೆಗೆ ಭಂಗ ತಂದುಕೊಳ್ಳಲಿಲ್ಲ. ಅಂಥ ಒಂದು ಮುಖವನ್ನು ಇಲ್ಲಿ ಪರಿಗಣಿಸಬಹುದು.

ಸಂಸ್ಕೃತದಲ್ಲಿ ಭಾಷ್ಯ, ವ್ಯಾಖ್ಯಾನಗಳ ಪರಂಪರೆಯೊಂದು ಸಮೃದ್ಧವಾಗಿದೆ. ಕಾವ್ಯಗಳಿಗೆ ಅಲ್ಲಿ ವ್ಯಾಖ್ಯಾನಗಳುಂಟು; ಕಾಳಿದಾಸನ ಕಾವ್ಯಗಳಿಗೆ ಮಲ್ಲಿನಾಥ ಬರೆದಿರುವ ವ್ಯಾಖ್ಯಾನಗಳು ಪ್ರಸಿದ್ಧವಾಗಿವೆ. ಆದರೆ ಕನ್ನಡದಲ್ಲಿ ತಾತ್ತ್ವಿಕ ಕೃತಿಗಳಿಗೆ ವ್ಯಾಖ್ಯಾನಗಳು ವಿರಳವಾಗಿ ಉಂಟಾದರೂ, ಕಾವ್ಯಗಳಿಗೆ– ಅದರಲ್ಲೂ ಖ್ಯಾತ ಕಾವ್ಯಗಳಿಗೆ– ಇಲ್ಲವೇ ಇಲ್ಲವೆಂಬುದು ಸೋಜಿಗದ ಸಂಗತಿ.[೪]

ಕಾವ್ಯವೆನ್ನುವುದು ಆಸ್ವಾದ್ಯ ಮತ್ತು ಅನುಭವವೇದ್ಯವೆ ಹೊರತು ವ್ಯಾಖ್ಯಾನಸಾಧ್ಯವಲ್ಲ ಎಂಬುದು ನಮ್ಮವರ ನಂಬಿಕೆಯಾಗಿದ್ದಂತೆ ತೋರುತ್ತದೆ. ಮೊದಲನೆಯದಾಗಿ, ಕಾವ್ಯಾರ್ಥ ಅಪರಿಮಿತವಾದುದು; ವ್ಯಾಖ್ಯಾನದ ಮುಷ್ಟಿಯಾಚೆಗೂ ಅದು ಇರುತ್ತದೆ; ಅದನ್ನು ಬರಿದು ಮಾಡುವುದು ಶಕ್ಯವಿಲ್ಲ. ಎಂದಮೇಲೆ, ವ್ಯಾಖ್ಯಾನಪ್ರಯತ್ನ ವ್ಯರ್ಥ. ಎರಡನೆಯದಾಗಿ. ಕಾವ್ಯಕ್ಕೂ ವಾಚಕರಿಗೂ ನಡುವೆ ವ್ಯಾಖ್ಯಾನ ಅಡ್ಡ ನಿಲ್ಲುತ್ತದೆ. ವಾಚ್ಯಾರ್ಥ, ತಾತ್ಪರ್ಯ ಮುಂತಾದುವನ್ನು ಅದು ತಿಳಿಸಿಕೊಡಬಲ್ಲುದಾದರೂ ಒಟ್ಟಿನಲ್ಲಿ ವಾಚಕನ ಭಾವಯಿತ್ರೀ

---

೪. ರುದ್ರಭಟ್ಟನ 'ಜಗನ್ನಾಥವಿಜಯ'ದ ಮೊದಲ ಐದು 'ಪಂಚಪಾಷಾಣ' ಪದ್ಯಗಳಿಗೆ ವ್ಯಾಖ್ಯಾನವಿದೆ, ಸಂಸ್ಕೃತದಲ್ಲಿ !

ಪ್ರತಿಭೆಯ ಕಾರ್ಯಕ್ಕೆ ಅನಿರ್ಬಂಧಿತ ಅವಕಾಶವೀಯುವೆ. ಅವನ ಅನುಭವ ವಲಯವನ್ನು ಸೀಮಿತಗೊಳಿಸಿಬಿಡುತ್ತದೆ. ಅವನಿಗದು ಸ್ವಲ್ಪಮಟ್ಟಿಗೆ ನೆರವಾದರೂ ಬಹುಮಟ್ಟಿಗೆ ಉಪಾಧಿಯೆ ಆಗಿ ಪರಿಣಮಿಸಬಹುದು. ಕಾವ್ಯಾರ್ಥ ವಾಚಕಹೃದಯದಲ್ಲಿ ಬೆಳೆಯಲು ಬಿಡಬೇಕು. ಸಂಸ್ಕೃತದಲ್ಲಿಯಾದರೂ ಮಲ್ಲಿನಾಥನಂತಹವರ ವ್ಯಾಖ್ಯಾನಗಳು ಎಷ್ಟರ ಮಟ್ಟಿಗೆ ಒಳನೋಟಗಳನ್ನು ಒಳಗೊಂಡಿವೆ. ಓದುಗರ ಕಾವ್ಯಾನುಭವವನ್ನು ಅವು ಎಷ್ಟರಮಟ್ಟಿಗೆ ಹಿಗ್ಗಿಸಬಲ್ಲವು ಎಂಬುದು ವಿಚಾರಯೋಗ್ಯ.

ಈ ಕಾರಣದಿಂದ ಹಿಂದಿನ ಕನ್ನಡ ವಿದ್ವಾಂಸರು ಕಾವ್ಯಗಳಿಗೆ ವ್ಯಾಖ್ಯಾನ ಬರೆಯುವ, ತನ್ಮೂಲಕ ಮಧ್ಯಸ್ಥಿಕೆ ವಹಿಸುವ ಗೋಜಿಗೇ ಹೋಗದೆ, ಕವಿ-ಸಹೃದಯರ ನೇರ ಸಂಪರ್ಕ, ಸಂವಹನಗಳಿಗೆ ಮುಕ್ತವಾಗಿ ಅನುವು ಮಾಡಿಕೊಟ್ಟರೆಂದು ಕಾಣುತ್ತದೆ. ಅದರಿಂದ ನಷ್ಟಕ್ಕಿಂತ ಮಿಗಿಲಾಗಿ ಲಾಭವೇ ಆಯಿತೆನ್ನಬಹುದು !

ಇತರ ಅನೇಕ ಅನನ್ಯತೆಗಳಂತೆ ವ್ಯಾಖ್ಯಾನಾಭಾವವೂ ಕನ್ನಡ ವಾಙ್ಮಯದ ಒಂದು ಅನನ್ಯತೆ ಎನ್ನಬೇಕು.

■ ಸಿ. ಪಿ. ಕೆ. : ೨೨೬೫/೧೯, 'ಭಾರತಿ', ೬ನೇ ಕ್ರಾಸ್, ೪ನೇ ಮೇನ್,
ವಿನಾಯಕನಗರ, ಮೈಸೂರು-೫೭೦ ೦೧೨ ■

ಪತ್ರ

ಜಯಶ್ರೀ ಕೆ. ಸಿ.

ಇಂದು ಎಂದಿನಂತಿಲ್ಲ
ಹಗಲ ಬೆಳಕು, ಹಕ್ಕಿ ಹಾಡು
ತಿಳಿಗಾಳಿ ಹೂ ಹಸಿರು ಎಲ್ಲಾ.
ಇಂದು ಪತ್ರ ಬರುವ ದಿನ.
ಹಾತೊರೆದು ಕಾಯುತ್ತಿರುವೆ
ಅಕ್ಕರೆಯ ಸಂದೇಶಕ್ಕಾಗಿ.
ಕಾತರಿಸಿ ಕಾಯುತ್ತಿದ್ದಂತೆ
ದೀರ್ಘವಾಗುತ್ತಿದೆ ಸಮಯ.

ಕೈಗೆ ಪತ್ರ ಸೇರಿದ ದಿನ
ತಾರೆ ಸಿಕ್ಕ ಸಂಭ್ರಮ.
ಪುಟಗಳ ಮೇಲೆ ಮೂಡಿದ
ಮುತ್ತುಗಳ ಮಾಲೆಯಲ್ಲಡಗಿದೆ
ಪ್ರೀತಿ, ಹಾರೈಕೆ, ಸಿಟ್ಟು,
ಬಿಂಕು ಬಿನ್ನಾಣಗಳ ಕಂಪು.

ಲಕೋಟೆಯಲ್ಲಿ ಬಚ್ಚಿಟ್ಟ ಭಾವಗಳು
ಮೆಲ್ಲಗೆ ನವಿರೆದ್ದು ಹೊರಬಂದು,
ತೆರೆದು ಕುಣಿಯುತ್ತವೆ ಪದಗಳು
ಗರಿಗೆದರಿ ಅಂತರಂಗದಲ್ಲಿ.
ನಿನ್ನ ಪತ್ರಗಳು ಭದ್ರವಾಗಿರುತ್ತವೆ
ಪೆಟ್ಟಿಗೆಯಲ್ಲಿ, ಹೃದಯದಲ್ಲಿ.

■ ಜಯಶ್ರೀ ಕೆ. ಸಿ. : 'ಸಿರಿಸಂಪಿಗೆ', ೫೫, ೧ನೇ ಮೇನ್, ೩ನೇ ಸ್ಟೇಜ್
೪ನೇ ಬ್ಲಾಕ್, ಬನಶಂಕರಿ, ಬೆಂಗಳೂರು-೫೬೦ ೦೮೫ ■

ನನ್ನ ಶಾಲಾ ಗುರುಗಳು

– ಮಂದಾಕಿನಿ ಪುರೋಹಿತ

ನನ್ನ ಬಾಲ್ಯದ ದಿನಗಳನ್ನು ಮೆಲುಕು ಹಾಕುತ್ತ ನಾನು ಶಾಲೆಗೆ ಎಂದು ಸೇರಿದೆ? ಮೊದಲ ದಿನ ಶಾಲೆಗೆ ಹೇಗೆ ಹೋದೆ? ಎಂಬಂತಹ ನೆನಪುಗಳು ಸ್ವಲ್ಪ ಮಸುಳ ಆಗಿವೆ. ಆದರೂ ಅವುಗಳನ್ನು ಹೆಕ್ಕಿಕೊಳ್ಳಲು ಯತ್ನಿಸುತ್ತಿದ್ದೇನೆ. ಶಾಲಾ ದಿನಗಳ ಈ ನೆನಪುಗಳು ನನ್ನ ಪಾಲಿಗೆ ಕಾರ್ಮೋಡದಲ್ಲಿ ಮಿಂಚುವ ಬೆಳ್ಳಿ ರೇಖೆಗಳಂತಿವೆ. ಏಕೆಂದರೆ ನಾನು ೯ ವರುಷದವಳಿದ್ದಾಗ ನನ್ನ ತಂದೆ 'ಅಂತಣ್ಣ ಮಾಮಾ' ಥಟ್ಟನೆ ಹೋಗಿಬಿಟ್ಟರು. ನಂತರ ನಾನು, ನನ್ನ ಅಣ್ಣಂದಿರು ವಿದ್ಯಾರ್ಥಿ ದಿಶೆಯಲ್ಲಿ ಪಡಬಾರದ ಕಷ್ಟಗಳನ್ನು ಪಟ್ಟು ದಿನಗಳನ್ನು ನೂಕಿದ್ದೇವೆ. ನನ್ನ ತಾಯಿ ವನಜಾಕ್ಷಿ(ವನ್ನಕ್ಕ) ನಮಗಾಗಿ ಗಂಧದ ಕೊರಡಾಗಿ ಜೀವ ತೇಯ್ದಳು.

ನಾನು ಹುಟ್ಟಿದ್ದು ಧಾರವಾಡದ ಮುನಿಸಿಪಾಲ್ಟಿ ದವಾಖಾನೆಯಲ್ಲಿ, ೪-೨-೧೯೫೫ ರಂದು. ಆದರೆ ಶಾಲೆಗೆ ಬೇಗನೆ ಕಳಿಸಬೇಕೆಂಬ ತವಕದಿಂದಲೋ ಏನೋ ನನ್ನ ತಂದೆ ಜನ್ಮ ದಿನಾಂಕವನ್ನು ೨೦-೭-೧೯೫೪ ಎಂದು ಮಾಡಿ ಒಂದು ವರ್ಷ ಮುಂಚಿತವಾಗಿ ಶಾಲೆಗೆ ಹೆಸರು ಹಚ್ಚಿದ್ದರು. ನಾನು ಬೆಳೆದದ್ದು ಪ್ರೋತ್ನೀಸ್ ಓಣಿಯ ಸುಸಂಸ್ಕೃತ ಪರಿಸರದಲ್ಲಿ. ನನ್ನ ತವರೂರು ಕೋಳಿವಾಡವಾದರೂ ಮಕ್ಕಳ ಶಿಕ್ಷಣಕ್ಕಾಗಿ ನನ್ನ ತಂದೆ ಧಾರವಾಡದಲ್ಲಿ ಮನೆ ಮಾಡಿದ್ದರು.

ಈಗಿನಂತೆ ಆಗ ಎಲ್.ಕೆ.ಜಿ., ಯು.ಕೆ.ಜಿ. ಇರಲಿಲ್ಲ. ಮನೆಯೇ ಮೊದಲ ಪಾಠಶಾಲೆ. ತಾಯಿ, ತಂದೆ ಮೊದಲ ಗುರುಗಳು. ಪ್ರೋತ್ನೀಸ್ ಓಣಿಯಲ್ಲಿದ್ದ ಶಿರಹಟ್ಟಿ ಹನುಮಂತಾಚಾರ್ಯರು (ಶಿರಟ್ಟಿ ಮಾಸ್ತರು) ತಮ್ಮ ಮನೆಯಲ್ಲಿ ಓಣಿಯ ಎಲ್ಲ ಮಕ್ಕಳಿಗೆ ಉಚಿತವಾಗಿ ಸಂಸ್ಕೃತ ಶ್ಲೋಕಗಳನ್ನು, ಜೊತೆಗೆ ನೀತಿಕಥೆಗಳನ್ನು, ಹಾಡುಗಳನ್ನು ಪ್ರೀತಿಯಿಂದ ಹೇಳಿಕೊಡುತ್ತಿದ್ದರು. ಅವರು ನಮಗೆ ಕಲಿಸಿದ ಹಾಡು-ಶ್ಲೋಕಗಳನ್ನು ನಾನು ಮರೆತಿಲ್ಲ. ತಂದೆ-ತಾಯಿ ಕೊಟ್ಟ ಸಂಸ್ಕಾರದೊಂದಿಗೆ, 'ಆಚಾರ್ಯ ದೇವೋ ಭವ' ಎಂದು ನಾನು ಶಿರಟ್ಟಿ ಮಾಸ್ತರರಿಗೆ ನನ್ನ ಪ್ರಥಮ ನಮನಗಳನ್ನು ಸಲ್ಲಿಸಲೇಬೇಕು.

ನಮ್ಮ ಓಣಿಯ ಸಮೀಪವಿದ್ದ ತಾಲ್ಲೂಕ ಕಚೇರಿ ಓಣಿಯಲ್ಲಿ ಹತ್ತಿರವಿದ್ದ ೨ ನೆಯ ನಂಬರ ಶಾಲೆಗೆ ನನ್ನ ಹೆಸರು ಹಚ್ಚಿದ್ದರು. ಕೆಂಪು ಬಣ್ಣ ಬಳಿದ ಶಾಲೆ ಆಕರ್ಷಕವಾಗಿತ್ತು. ಆಟದ ಮೈದಾನ, ಪರಿಸರ ನಿರ್ಮಲವಾಗಿತ್ತು. ವರ್ಗದ ಗುರುಗಳ ಹೆಸರು ನನಗೆ ನೆನಪಿಲ್ಲ. ಆದರೆ ಶಾಲೆಯ ಅಂಗಳದಲ್ಲಿ ನಾವು ಖೋ ಖೋ ಆಡಿದ್ದು 'ಲಡ್ಡು ಲಡ್ಡು ತಿಮ್ಮಯ್ಯ ಏನ ಬೇಕು ಮಲ್ಲಯ್ಯ' ಆಡಿದ್ದು ನೆನಪಿದೆ.

ಮರುವರ್ಷ ನಾನು ಎರಡನೇತ್ತಾಕ್ಕೆ ಬರುವಷ್ಟರಲ್ಲಿ ನಮ್ಮನ್ನು ಪಂಚಕಚೇರಿ ಓಣಿಯ ಸೆಂಟ್ರಲ್ ಸ್ಕೂಲಿಗೆ ವರ್ಗಾಯಿಸಿದರು. ನನ್ನ ಅಣ್ಣ ಶೇಷಗಿರಿ ಅದೇ ಶಾಲೆಗೆ ಹೋಗತೊಡಗಿದನು. ಅವನ ಶಾಲೆಯ ವೇಳೆ ಹನ್ನೊಂದು ಗಂಟೆಗೆ. ನನ್ನ ಶಾಲೆ ಏಳೂವರೆಗೆ ಇರುತ್ತಿತ್ತು. ಒಮ್ಮೆ ಏಳೂವರೆಗೆ ಶಾಲೆಗೆ ಹೋದರೆ ಹಸಿವೆ ಆಗುವವರೊಳಗೆ ನಾನು ಮನೆಯಲ್ಲಿರುತ್ತಿದ್ದೆ.

ಮಂಗಳವಾರ ಒಂದು ದಿನ ಬಿಟ್ಟರೆ ಉಳಿದ ದಿನ ನನ್ನ ಶಾಲೆ ಮುಂಜಾನೆ. ಮಂಗಳವಾರ ೧೧ ಗಂಟೆಗೆ ಶಾಲೆಗೆ ಹೋದರೆ ಈ ೫ ಗಂಟೆಯ ವರಗೆ ಶಾಲೆ ನಡೆಯುತ್ತಿತ್ತು. ಅದು ನನ್ನ ಪಾಲಿಗೆ ಕಠಿಣ ಶಿಕ್ಷೆ ಅನುಭವಿಸುತ್ತಿದ್ದ ದಿನ. ಸಂಜೆಯ ವರೆಗೆ ಅಪ್ಪನನ್ನು ಬಿಟ್ಟಿರಬೇಕು. ಗೆಳತಿಯರೊಡನೆ ಆಟವಿಲ್ಲ. ಪಾಠವಿಲ್ಲ. ನನಗೆ ಅಳು ಉಕ್ಕಿ ಬರುತ್ತಿತ್ತು. ಹೀಗಾಗಿ ಶಾಲೆ ತಪ್ಪಿಸಲು ನಾನು ಒಂದು ಉಪಾಯ ಹುಡುಕುತ್ತಿದ್ದೆನು. ನಮ್ಮ ಆಪ್ತರಾದ ಲೋಣಬಿದಿ ಅಣ್ಣಪ್ಪ ಅವರ ಹಿತ್ತಿಲಲ್ಲಿ ಯಾರಿಗೂ ಕಾಣದಂತೆ ಮುಖ ಮುಚ್ಚಿಕೊಂಡು ಕುಳಿತುಕೊಳ್ಳುತ್ತಿದ್ದೆ. ಅಪ್ಪ ಒಂದೆರಡು ಸಲ ಹುಡುಕಿ ಬೇಸತ್ತಿದ್ದಳು. ಅಂತೂ ಒಂದು ಮಂಗಳವಾರ ಅಪ್ಪನ ಕೈಗೆ ಸಿಕ್ಕುಬಿದ್ದೆ. ನನ್ನನ್ನು ಬಗಲಲ್ಲಿ ಹೇರಿಕೊಂಡು, ಉರಿ-ಬಿಸಿಲಿನಲ್ಲಿ ಬರಿಗಾಲಿನಲ್ಲಿ; ಅಳುತ್ತಿದ್ದ ನನ್ನನ್ನು 'ಭೋಲೋ ಚಾಳಿ ಕಲತಿ ಸಾಲಿ ತಪ್ಸೋದು' ಎಂದು ಬೈಯುತ್ತ ಶಾಲೆಗೆ ಕರೆದುಕೊಂಡು ಹೋದಳು. ನಮ್ಮ ಅಕ್ಕೋರು(ಶಿಕ್ಷಕಿ) ನನ್ನ ರಂಭಾಟ ನೋಡಿ ಅಪ್ಪನಿಗೆ 'ಇರ್ಲಿ ಬಿಡ್ರಿ ಇವತ್ತೊಂದು ದಿನ ಒಲ್ಲೆ ಅಂತಾಳ, ದಿನಾ ತಪ್ಪದ ಮನಿಗೆಲಸ(ಹೋಂವರ್ಕ್) ಮಾಡಿಕೊಂಡು ಬರ್ತಾಳ, ಕರ್ಕೊಂಡು ಹೋಗಿ ಬಿಡ್ರಿ' ಎಂದು ತಿರುಗಿ ಕಳಿಸಿಬಿಟ್ಟರು. ಆಗ ಸೋಲು ಅಪ್ಪನದಾಗಿತ್ತು. ಗೆಲುವು ನನ್ನದಾಗಿತ್ತು. ಈ ಸಂಗತಿ ನಡೆದ ನಂತರ ಮಂಗಳವಾರ-ಶಾಲೆಯ ಬಗ್ಗೆ ಅಂತಹ ತಕರಾರು ಬರಲಿಲ್ಲ. ಆ ಶಾಲೆ ನನಗೆ ಪ್ರಿಯವಾಗತೊಡಗಿತು.

ನನ್ನ ಶಾಲೆ ಎಲ್ಲರ ಶಾಲೆಯಂತಿರಲಿಲ್ಲ. ತಿಂಗಳಿಗೆ ಒಮ್ಮೆ ಆರೋಗ್ಯ ಕೇಂದ್ರದವರು ಬಂದು 'ಭರ್' ಎನ್ನುವ ಸ್ಟೋವ್ ಹಚ್ಚಿ ದೊಡ್ಡ ಪಾತ್ರೆಯಲ್ಲಿ ನೀರು ಕಾಸಿ ನಮಗೆಲ್ಲ ಆಗಾಗ ವ್ಯಾಲಿ ತೆಗೆಯುತ್ತಿದ್ದರು. ವ್ಯಾಲಿ ಚುಚ್ಚಿಸಿಕೊಳ್ಳುವಾಗ 'ಚುರ್'ಎಂದರೂ ಅದೂ ಒಂದು ಹೆಮ್ಮೆಯ ಸಂಗತಿಯಾಗಿತ್ತು.

ನಮ್ಮ ಶಾಲೆಯ ಕೊಠಡಿಗಳು ಅಷ್ಟೇನೂ ದೊಡ್ಡವಿರಲಿಲ್ಲ. ಕುಳಿತುಕೊಳ್ಳಲು 'ಫಳಿ' ಹಾಕಿರುತ್ತಿದ್ದರು. ನಮ್ಮ ಅಕ್ಕೋರು ನಮಗೆ ಬಹಳ ಪ್ರೀತಿಯಿಂದ ಕಲಿಸುತ್ತಿದ್ದರು. ಆಗ ನದಾಫ್ ಗುರುಗಳು ನಮಗೆ ಗಣಿತ ಕಲಿಸುತ್ತಿದ್ದರು. ಸಾಮಾನ್ಯವಾಗಿ ಗಣಿತ ಮಾಸ್ತರರೆಂದರೆ ವಿದ್ಯಾರ್ಥಿಗಳಿಗೆ ಭಯವಿದ್ದೇ ಇರುತ್ತದೆ. ಆದರೆ ನದಾಫ್ ಗುರುಗಳು ಎಂದೂ ಛಡೀ ಏಟು ಕೊಡುತ್ತಿರಲಿಲ್ಲ. ಹೀಗಾಗಿ ಅವರು ನನಗೆ ಪ್ರಿಯರಾಗಿದ್ದರು.

ನನ್ನ ಮೂರನೆಯ ತರಗತಿ ಮುಗಿಯುತ್ತಿದ್ದಂತೆ ನನ್ನ ತಂದೆಯವರ ಮನಸ್ಸು ಕೋಳಿವಾಡದ ಕಡೆಗೆ ಎಳೆಯತೊಡಗಿತು. ಹೀಗಾಗಿ ನಾವು ಮೇ ತಿಂಗಳಲ್ಲಿ ಕೋಳಿವಾಡಕ್ಕೆ ಹೋದೆವು. ನನ್ನ ಹಾಗೂ ಅಣ್ಣನ ಶೇಷನ ಶಿಕ್ಷಣ ಜೂನ್‌ದಿಂದ ಅಲ್ಲಿಯೇ ಮುಂದುವರಿಯಿತು. ಕೋಳಿವಾಡ ಸುಖ ಸಮೃದ್ಧಿಯಿಂದ ತುಂಬಿ ತುಳುಕುತ್ತಿತ್ತು. ನನ್ನಲ್ಲಿ ಚಿಗುರುತ್ತಿದ್ದ ಭಾವುಕತೆಗೆ ಆ ಕಾವ್ಯಮಯ ಮುಗ್ಧ ಪರಿಸರ ಇಂಬು ಕೊಟ್ಟಿತು. ಆ ಊರಲ್ಲಿ ಎರಡು ಶಾಲೆಗಳಿದ್ದವು. ಒಂದು ಹೆಣ್ಣುಮಕ್ಕಳ ಶಾಲೆ, ಇನ್ನೊಂದು ಗಂಡುಮಕ್ಕಳ ಶಾಲೆ. ನಾನು ಹೆಣ್ಣುಮಕ್ಕಳ ಶಾಲೆ ಸೇರಿದೆ. ನಾನು, ನನ್ನ ಸೋದರಮಾವನ ಮಕ್ಕಳು, ಅಜಿಜಿಯ ಮಕ್ಕಳು ಎಲ್ಲರೂ ಕೂಡಿ ನಲಿದಾಡುತ್ತ ಶಾಲೆಗೆ ಹೋಗುತ್ತಿದ್ದೆವು.

ವೀರಪ್ಪ ಮಾಸ್ತರು(ಈರಪ್ಪ ಮಾಸ್ತರು) ಮುಖ್ಯ ಗುರುಗಳಾಗಿದ್ದರು. ಅವರು ನನ್ನ ಅಪ್ಪನಿಗೂ ಕಲಿಸಿದ್ದರು. ನಮ್ಮ ಶಾಲೆ ಹನುಮಂತ ದೇವರ ಗುಡಿಯಲ್ಲಿ ನಡೆಯುತ್ತಿತ್ತು. ನಾಲ್ಕು ಅಂಕಣಗಳಲ್ಲಿ ನಾಲ್ಕು ವರ್ಗಗಳು. ನಾಲ್ವರು ಗುರುಗಳು ಕಲಿಸುತ್ತಿದ್ದರು. ಅಂಬಾ ಅಕ್ಕೋರು, ಪ್ರೋತಗೋಳಿ ಅಕ್ಕೋರು, ಗುದ್ದೀನ ಮಾಸ್ತರು, ಮಾಗಳ ಮಾಸ್ತರು ನಮಗೆ ಕಲಿಸುತ್ತಿದ್ದರು. ಈರಪ್ಪ ಮಾಸ್ತರು ಗಣಿತ ಕಲಿಸುತ್ತಿದ್ದರು.

ಎರಡೂ ಹೊತ್ತು ಶಾಲೆ ನಡೆಯುತ್ತಿತ್ತು. ಮುಂಜಾನೆ ಸಾಲಿ, ಮಧ್ಯಾಹ್ನ ಸಾಲಿ ಎನ್ನುತ್ತಿದ್ದೆವು. ಪ್ರತಿಯೊಂದು ವರ್ಗದಲ್ಲಿ ಒಬ್ಬ 'ಹಿರೇಮಣಿ'ಯನ್ನು ಗುರುಗಳು ಆರಿಸುತ್ತಿದ್ದರು. ಹಿರೇಮಣಿ (ವರ್ಗದ ಶಿಸ್ತು ಕಾಯ್ದುಕೊಳ್ಳುವ ವಿದ್ಯಾರ್ಥಿನಿ) ಆದವಳು ತನಗೆ ಬೇಕಾದ ನಾಲ್ಕು ಮಂದಿ ಗೆಳತಿಯರನ್ನು ಕರೆದುಕೊಂಡು ಶಾಲೆಗೆ ಹೋಗಿ ಕಸ ಗುಡಿಸುವದು ಕಡ್ಡಾಯವಾಗಿತ್ತು. ಪ್ರತಿಯೊಂದು ವರ್ಗದಲ್ಲಿ ಹೆಚ್ಚೆಂದರೆ ೧೦-೧೨ ಜನ ವಿದ್ಯಾರ್ಥಿನಿಯರು ಇರುತ್ತಿದ್ದೆವು. ಮುಂಜಾನೆ ಶಾಲೆಗೆ ಹೋಗಿ ಹನುಮಂತದೇವರ ಅಂಗಾರ ಹಚ್ಚಿಕೊಂಡು ನಮಸ್ಕಾರ ಮಾಡಿ ನಮಗೆ ಗೊತ್ತುಪಡಿಸಿದ ಅಂಕಣದಲ್ಲಿ ಕೂಡುತ್ತಿದ್ದೆವು. ಆಗ ನಮಗೆ ಕೂಡಲು ಫಳಿಗಳಾಗಲಿ ಬೆಂಚುಗಳಾಗಲಿ ಇರಲಿಲ್ಲ. ಹೀಗಾಗಿ ನಾವು ಚೌಕಾಗಿ ಕತ್ತರಿಸಿ ದಂಡಿ ಮಡಿಚಿ ಹೊಲಿದ ಕಾಳು ತುಂಬುವ ಝಾಡಿಗಳನ್ನು ಮನೆಯಿಂದ ಒಯ್ದು ಹಾಸಿಕೊಂಡು ಕೂಡುತ್ತಿದ್ದೆವು. ಗುರುಗಳು ಜಮಖಾನೆಯ ಮೇಲೆ ಕೂಡುತ್ತಿದ್ದರು. 'ಬರಿ ನೆಲದ ಮೇಲೆ ಕುಳಿತು ಅಭ್ಯಾಸ ಮಾಡಬಾರದು. ವಿದ್ಯೆ ಕಲಿಯುವದೆಂದರೆ ಸರಸ್ವತಿ ಪೂಜೆ ಮಾಡಿದಂತೆ' ಎಂದು ಹಿರಿಯರು ನಮಗೆ ಹೇಳಿದ್ದರು.

ನನ್ನ ಸಹಪಾಠಿಗಳನೇಕರು ಒಕ್ಕಲಿಗರ(ರೈತರ) ಮಕ್ಕಳಾಗಿದ್ದರು. ಅನೇಕರು ಹೊಲದಲ್ಲಿ ಕೆಲಸವಿದ್ದಾಗ ಶಾಲೆ ತಪ್ಪಿಸುತ್ತಿದ್ದರು. ಹತ್ತಿ ಬಿಡಿಸಲು ಹೋಗುತ್ತಿದ್ದರು, ಸೇಂಗಾ ಒಡೆಯಲು ಹೋಗುತ್ತಿದ್ದರು. ಆಗ ನಾವು ಗೆಳತಿಯರು ಮನೆಮನೆಗೆ ಹೋಗಿ 'ಸಾಲಿಗೆ ಬರಬೇಕಂತ ಗುರುಗೋಳು ಹೇಳ್ಯಾರ' ಎಂದು ಒದರಿ ಬರುತ್ತಿದ್ದೆವು.

ನಮಗೆ ಎಲ್ಲ ಗುರುಗಳ ಬಗ್ಗೆಯೂ ಭಯ-ಭಕ್ತಿಗಳಿದ್ದವು. ಕಲಿಯುವದರಲ್ಲಿ ಹೆಚ್ಚು-ಕಡಿಮೆಯಾದರೆ ಹೊಡೆತ ತಪ್ಪುತ್ತಿರಲಿಲ್ಲ. ನನ್ನ ಗೆಳತಿಯರಿಗೆ ಸ್ವಚ್ಛತೆ ಮತ್ತು ಶಿಸ್ತಿನ ಮಹತ್ವವಿರುತ್ತಿರಲಿಲ್ಲ. ಒಕ್ಕಲಿಗರ ಮಕ್ಕಳು ವಾರಕ್ಕೆರಡು ಸಲ ಜಳಕ ಮಾಡಿ ತಲೆ ಬಾಚಿಕೊಂಡು ಬರುತ್ತಿದ್ದರು. ದಿನ ನಿತ್ಯ ಮುಖ ತೊಳೆದು ಈಬತ್ತಿ ಹಚ್ಚಿಕೊಂಡು. ಕುಂಕುಮವಿಟ್ಟುಕೊಂಡು ಬರುತ್ತಿದ್ದರು. ನಾನು ಪ್ರತಿನಿತ್ಯ ಸ್ನಾನ ಮಾಡಿ ಅಪ್ಪ-ಅಕ್ಕ ಒಗೆದ ಶುಭ್ರವಾದ ಫ್ರಾಕ್, ಸ್ಕರ್ಟ್, ಪೋಲಕಾ ತೊಟ್ಟುಕೊಂಡು; ಎರಡೂ ಹೊತ್ತು ಹೆರಳು ಹಾಕಿಸಿಕೊಂಡು ಹೋಗುತ್ತಿದ್ದೆ. ನಾನು ಶಾರ(ಶಹರ)ದಿಂದ ಬಂದವಳು ಎಂದು ನನ್ನ ಗೆಳತಿಯರಿಗೆ ಕೌತುಕವೂ ಒಮ್ಮೊಮ್ಮೆ ಅಸೂಯೆಯೂ ಆಗುತ್ತಿತ್ತು. ಏಕೆಂದರೆ ನಾನು ಮನೆಗೆಲಸ(ಹೋಂವರ್ಕ್) ತಪ್ಪದೇ ಮಾಡಿಕೊಂಡು ಹೋಗುತ್ತಿದ್ದೆ. ಗುರುಗಳು ನನ್ನನ್ನು ಬಯ್ಯುತ್ತಿರಲಿಲ್ಲ.

ಮುಂಜಾನೆ ವಳೂವರೆಗೆ ಶಾಲೆಗೆ ಹೋದರೆ ೯ ಗಂಟೆಗೆ ಬಿಂದಕ್ಕ(ನಡುವಿನ ಸೂಟಿ) ಬಿಡುತ್ತಿದ್ದರು. ಆಗ ನಾವು ಮನೆಗೆ ಹೋಗಿ ಅವಲಕ್ಕಿ ತಿಂದು, 'ಛಾ' ಕುಡಿದು ಹೋಗುತ್ತಿದ್ದೆವು. ಕೆಲವೊಮ್ಮೆ ಶಾಲೆಗೆ ಹೋಗಲು ಐದು-ಹತ್ತು ನಿಮಿಷ ತಡವಾದರೆ ಗುರುಗಳು ಬಯ್ಯುತ್ತಿದ್ದರು.

'ಮನೆಯಲ್ಲಿ ಅಪ್ಪನಿಗೆ ಕೆಲಸ ಭಾಳ ಇತ್ತು' ಇಲ್ಲವೆ 'ಚಹಾಪುಡಿ ತರಲಿಕ್ಕೆ ಅಂಗಡಿಗೆ ಹೋಗಿದ್ದೆ' ಎಂದು ಹೇಳುತ್ತಿದ್ದೆವು. ಗುರುಗಳು ಸುಮ್ಮನಿರುತ್ತಿದ್ದರು.

ಗಣಿತ ವಿಷಯವನ್ನು ಹೆಡ್-ಮಾಸ್ತರು ವೀರಪ್ಪ ಮಾಸ್ತರು ಕಲಿಸುತ್ತಿದ್ದರು. ಅವರು ಗಿಡ್ಡ ಇದ್ದರು. ಖಾದೀ ಧೋತರ, ಖಾದೀ ಅಂಗಿ, ಗಾಂಧೀ ಟೊಪ್ಪಿಗೆ ಧರಿಸುತ್ತಿದ್ದರು. ಮಧ್ಯಾಹ್ನ ೨ ಗಂಟೆಗೆ ಗಣಿತ ಕಲಿಸುತ್ತಿದ್ದರು. ಅಧಿಕ, ಉಣೆ, ಜೇರೀಜು, ಪಜಾ ಎಂದು ಕೂಡಿಸುವ ಕಳೆಯುವ ಲೆಕ್ಕಗಳನ್ನು ತಿಳಿಸುತ್ತಿದ್ದರು. ನಮ್ಮ ಶಾಲೆಯ ಹತ್ತಿರವೇ ಅವರ ಮನೆ ಇತ್ತು. ಎಷ್ಟೋ ಸಲ ಅವರು ದಫ್ತರ ಮನೆಯಲ್ಲಿಟ್ಟು ಬಂದಿರುತ್ತಿದ್ದರು. ಅವರ ಮನೆಗೆ ದಫ್ತರ ತರಲು ನಾ ಮುಂದೆ ತಾ ಮುಂದೆ ಎಂದು ಭಕ್ತಿಯಿಂದ ಹೋಗುತ್ತಿದ್ದೆವು, ಮತ್ತು ಅವರಿಗೆ ಕುಡಿಯಲು ಒಂದು ತಂಬಿಗೆ ನೀರನ್ನು ತೆಗೆದುಕೊಂಡು ಬರುತ್ತಿದ್ದೆವು. ಪಾಟಿ ಮೇಲೆ ಲೆಕ್ಕ ಹಾಕಿ ಕೊಡುತ್ತಿದ್ದರು. ತಪ್ಪಿದವರಿಗೆ ಕೂತಲ್ಲೇ ಬಗ್ಗಿಸಿ ಬೆನ್ನಿಗೆ 'ಝಂ' ಎಂದು ಹೊಡೆಯುತ್ತಿದ್ದರು.

ಕೆಲವು ಸಲ ಗುದ್ದೀನ ಗುರುಗಳು ಗಣಿತ ಕಲಿಸುತ್ತಿದ್ದರು. ನಾನು ಒಮ್ಮೆ ಪಾಟಿಯನ್ನು ಅಡ್ಡವಾಗಿ ಹಿಡಿದು ಲೆಕ್ಕ ಮಾಡುತ್ತಿದ್ದೆ. ಎಲ್ಲರ ಲೆಕ್ಕ ನೋಡುತ್ತ ನನ್ನ ಹತ್ತಿರ ಬಂದರು. ಅಡ್ಡ ಪಾಟಿ ಹಿಡಿದದ್ದು ಅವರಿಗೆ ವಿಪರೀತ ಸಿಟ್ಟು ಬಂದಿತು. 'ಅಡ್ಡ ಪಾಟೀ ಹಿಡಿಯಾಕ, ಯಾರು ಕಲಿಸ್ಯಾರ' ಎಂದು ಸಿಟ್ಟಿನಿಂದ ನನ್ನ ತೊಡೆಗೆ 'ಛಪ್ಪ' ಎಂದು ಹೊಡೆದರು. ಅವರ ಮೂರು ಬೆರಳು ರಾಮ ಲಕ್ಷ್ಮಣ ಸೀತೆಯಂತೆ ತೊಡೆಯ ಮೇಲೆ ಕೆಂಪಾಗಿ ಮೂಡಿದ್ದವು. ಮನೆಗೆ ಹೋಗುವದೇ ತಡ ದುಃಖಿಸಿ ಅಳತೊಡಗಿದೆ. ನನ್ನ ಅಜ್ಜ 'ನಾಳೆ ಗುದ್ದಿ ಈಶ್ವರಪ್ಪಗ ಕೇಳತೇನೇಳು. ಇನ್ನೊಮ್ಮೆ ಹೊಡಿಬ್ಯಾಡಂತ ಹೇಳತೇನು' ಎಂದು ರಮಿಸಿದರು. ಅದೊಂದೇ ಸಲ ಹೊಡೆಸಿಕೊಂಡ ನೆನಪು. ಗುದ್ದೀನ ಗುರುಗಳು ಅಂತಃಕರಣದವರು. 'ಕಲಿಯುವವನ್ನ ಘಟ್ಟ್ಯಾಗಿ ಕಲಿಬೇಕು' ಎನ್ನುವದೇ ಅವರ ಕಳಕಳಿಯಾಗಿತ್ತು. ಗುದ್ದೀನ ಗುರುಗಳು ಧೊಡ್ಡ ಆಳು, ಗಟ್ಟಿಮುಟ್ಟಾದ ಎತ್ತರದ ವ್ಯಕ್ತಿ. ಧೋತರ, ಶರ್ಟು, ಕರೀ ಟೊಪ್ಪಿಗೆ, ಕಾಲಲ್ಲಿ ಜಿರಕಿ ಚಪ್ಪಲಿಗಳನ್ನು ಹಾಕುತ್ತಿದ್ದರು. ಪ್ರತಿ ದಿನ ಮಗ್ಗಿ ಬಾಯಿಪಾಠ ಮಾಡಲು ಹೇಳುತ್ತಿದ್ದರು. ಶಾಲೆಯ ಎದುರಿಗೆ, ಅಂಗಳದಲ್ಲಿ ಅರ್ಧ ವರ್ತುಲಾಕಾರದಲ್ಲಿ ನಿಲ್ಲಿಸಿ ಮಗ್ಗಿ ಅನ್ನಿಸುತ್ತಿದ್ದರು. ತಪ್ಪಿದರೆ 'ಊಠ್-ಬೈಸ್' (ಊಟಾಬಸಿ) ತೆಗೆಸುತ್ತಿದ್ದರು. ಸರಿಯಾಗಿ ಮಗ್ಗಿ ಅಂದವರು ತಪ್ಪಿದವರ ಮೂಗು ಹಿಡಿದು ಕಪಾಳಕ್ಕೆ ಹೊಡೆಯಬೇಕಾಗುತ್ತಿತ್ತು. ಸಹಪಾಠಿಗಳಿಂದಾಗುವ ಅಪಮಾನ, ಶಿಕ್ಷೆಯನ್ನು ತಪ್ಪಿಸಿಕೊಳ್ಳಲು ನಾವೆಲ್ಲರೂ ತಪ್ಪದೇ ಮಗ್ಗಿ ಬಾಯಿಪಾಠ ಮಾಡಿಕೊಂಡು ಹೋಗುತ್ತಿದ್ದೆವು. ಅದೇ ರೀತಿ ಪಠ್ಯಪುಸ್ತಕದಲ್ಲಿದ್ದ ಕವಿತೆಗಳನ್ನು ಬಾಯಿಪಾಠ ಮಾಡಿಸುತ್ತಿದ್ದರು. 'ಕವಿತೆ ಹೇಳ್ರಿ' ಎಂದು ಗದರಿಸುತ್ತಿದ್ದರು. ತಾವು ಧಾಟಿ ಹಚ್ಚಿ ಕವಿತೆಗಳನ್ನು ಹಾಡಿಸುತ್ತಿದ್ದರು. 'ಸಕ್ಕರೆಯಾಗುವ ಬಗೆ ಹೇಗೆಂದು / ಮಕ್ಕಳೆ ಗೊತ್ತಿದೆಯೇ ನಿಮಗೆ /ಸಕ್ಕರೆಯಾಗುವ ಮಂಡ್ಯಕೆ ಹೋಗಿ /ಅಕ್ಕರೆಯಿಂದಲಿ ನೋಡುವ ಬನ್ನಿ.' ಎಂದು ಹಾಡಿಸುತ್ತಿದ್ದರು.

ಅಂಬಾ ಅಕ್ಕೋರು ಬಹಳ ಶಿಸ್ತಿನವರು. ಅವರು ವಿಧವೆಯಾಗಿದ್ದರು. ನೋಡಲು ಬಹಳ ಛಂದ ಇದ್ದರು. ಅವರು 'ಧೊಡ್ಡ' ವರ್ಗಕ್ಕೆ ಕಲಿಸುತ್ತಿದ್ದರು. ಬಹಳ ಬಿಗುವಿನವರು.

ವಿದ್ಯಾರ್ಥಿನಿಯರು ಅವರ ಮನೆಗೆ ಹೋಗಿ ನೀರು ತಂದು ಹಾಕುವದು, ಕಟ್ಟಿಗೆ ಒಯ್ದು ಕೊಡುವದು, ಸುಗ್ಗಿಯ ದಿನಗಳಲ್ಲಿ ಕಾಳು-ಕಡಿ, ಕಾಯಿಪಲ್ಯೆ ಕೊಟ್ಟು ಗುರುಮಾತೆಯ ಸೇವೆ ಮಾಡುವದು ಸಾಮಾನ್ಯವಾಗಿತ್ತು.

ಇನ್ನೊಬ್ಬರು ಮಾಗಳ ಮಾಸ್ತರು. ಮಾತಾಡುವಾಗ ಹೊರಗೆ ನಾವು 'ಮಾಸ್ತರು' ಎಂದರೂ ಶಾಲೆಯಲ್ಲಿ 'ಗುರುಗಳೇ' ಎಂದು ಕರೆಯುತ್ತಿದ್ದೆವು. ಇವರು ಬಹಳ ಶಿಸ್ತಿನವರೂ ಶೀಘ್ರಕೋಪಿಗಳೂ ಆಗಿದ್ದರು. ಇಂಗ್ಲೀಷ್ ವಿಷಯವನ್ನು ಕಲಿಸುತ್ತಿದ್ದರು. ಶಬ್ದಗಳನ್ನು ಸರಿಯಾಗಿ ಉಚ್ಚರಿಸದಿದ್ದರೆ ಕಪಾಳಕ್ಕೆ ಫಟ್ ಎಂದು ಹೊಡೆಯುತ್ತಿದ್ದರು. ಆದರೆ ನಮಗೆಲ್ಲರಿಗೂ ಅವರ ಬಗ್ಗೆ ಪ್ರೀತಿ ಹಾಗೂ ಭಕ್ತಿ ಇತ್ತು. 'ಛಡಿ ಛಮ್ ಛಮ್ ವಿದ್ಯಾ ಘಮ್ ಘಮ್' ಎಂಬುದು ಒಟ್ಟು ಆ ಕಾಲದ ಶಿಕ್ಷಕರ ತತ್ತ್ವವಾಗಿತ್ತೇನೋ.

ನಾನು ೫ ನೆಯ ತರಗತಿಯಲ್ಲಿದ್ದಾಗ ಇನ್ನೊಬ್ಬರು ಹೊಸಾ ಮಾಸ್ತರು ಬಂದರು. 'ಹೊಸಾ ಮಾಸ್ತರು ಯಾವಾಗ ಬರುವರೋ' ಎಂದು ನಾವು ನಿರೀಕ್ಷಿಸುತ್ತಿದ್ದೆವು. ಒಂದು ದಿನ ಅವರು ಬಂದರು. ಅವರೂ ಖಾದೀ ಧಾರಿಗಳು. ಇಪ್ಪತ್ತು ವರ್ಷದವರು. ನಗುಮುಖದವರು. ಆದರೆ ಅವರು ನಮ್ಮ ಶಾಲೆಗೆ ಬಂದದ್ದು ಊರಲ್ಲಿ ಮಹಾಕ್ರಾಂತಿಯನ್ನುಂಟು ಮಾಡಿತು. ಏಕೆಂದರೆ ಅವರು ಹರಿಜನರಾಗಿದ್ದರು. ಅವರು ಗುಡಿಯಲ್ಲಿ ಶಾಲೆ ಕಲಿಸಬೇಕಲ್ಲ? ಅವರ ಅಡ್ಡ ಹೆಸರು ಕಾಳೆ. ಎಲ್ಲರೂ 'ಕಾಳೆ ಮಾಸ್ತರ್' ಎನ್ನುತ್ತಿದ್ದರು. ಅವರ ಮನೆ ಊರ ಹೊರಗೆ ಇತ್ತು. ಮೊದಲ ದಿನ ಕೆಲವರು ಗೆಳತಿಯರು ತಾವು ಮನೆಗೆ ಹೋಗಿ ಸ್ನಾನ ಮಾಡಬೇಕೆಂದು ಹಿರಿಯರು ಹೇಳಿದ್ದಾರೆಂದು ಗುಸುಗುಸು ಮಾತಾಡಿಕೊಂಡರು. ನಾನು ಮನೆಗೆ ಹೋಗಿ ಅವ್ವನಿಗೆ ಹೇಳಿದಾಗ 'ವಿದ್ಯಾ ಕಲಿಸೋ ಗುರುಗಳು ಯಾರಾದರೇನು, ದೇವರಿದ್ದಂಗ. ಕೈ ಕಾಲು ತೊಳಕೊಂಡು ಊಟಕ್ಕೂಡು' ಎಂದಳು. ಕೆಲವು ದಿನಗಳ ನಂತರ ಕಾಳೆ ಗುರುಗಳು ಹರಿಜನರೆಂಬುದನ್ನು ನನ್ನ ಗೆಳತಿಯರೂ ಮರೆತರು.

ಇನ್ನು 'ಧೊಡ್ಡ ಸಾಲಿ' ಸುದ್ದಿ. ಏಳನೆಯ ತರಗತಿಗೆ ಬರುವಷ್ಟರಲ್ಲಿ ನಮಗೆ ಪ್ರಮೋಶನ್ ಆಯಿತು. ನಮ್ಮೂರಿನ ಗ್ರಾಮದೇವತೆ ಮಹಾಮ್ಮಾಯಾ ಗುಡಿಯ ಸಮೀಪ ಇರುವ ಬಸವಣ್ಣ ದೇವರ ಗುಡಿಗೆ ನಮ್ಮನ್ನು ವರ್ಗಾಯಿಸಿದರು. ಅಲ್ಲಿ ಒಂದು ಕೊಠಡಿ ಖಾಲಿ ಇತ್ತು. ಈ ಗುಡಿಗೆ ಬಾಲಲೀಲಾ ಮಹಾಂತ ಶಿವಯೋಗಿಗಳು ಬಂದು ಉಯ್ಯಾಲೆಯಲ್ಲಿ ಕುಳಿತು ಹೋಗಿದ್ದರಂತೆ. ಗುಡಿ ಚಿಕ್ಕದಾದರೂ ಆವರಣ ಆಹ್ಲಾದಕರವಾದುದು. ವಿಶಾಲವಾದ ಆವರಣದಲ್ಲಿ ಬೇವಿನ ಮರಗಳು ತಂಗಾಳಿಯನ್ನು ಬೀಸಿ ಮನಸ್ಸಿಗೆ ಉಲ್ಲಾಸವನ್ನು ನೀಡುತ್ತಿದ್ದವು. ಕೊಠಡಿಯಲ್ಲಿ ಏಳನೆಯ ತರಗತಿ, ಆವರಣದ ಪೌಳಿಯಲ್ಲಿ ಆರನೆಯ ತರಗತಿ ನಡೆಯುತ್ತಿತ್ತು. ಆರನೆಯ ತರಗತಿಯಲ್ಲಿ ನಮಗೆ ಪೋತಗೋಳಿ ಅಕ್ಕೋರು ವರ್ಗ ಶಿಕ್ಷಕಿಯಾಗಿದ್ದರು. ಅವರು ಕ್ರಿಶ್ಚಿಯನ್ನರು ಎಂದು ಊರವರು ಹೇಳುತ್ತಿದ್ದರು. ಅವರು ವಿಧವೆಯಾಗಿದ್ದರು. ನಮಗೆ ಗೃಹವಿಜ್ಞಾನ ವಿಷಯವನ್ನು ಕಲಿಸುತ್ತಿದ್ದರು. ಮನೆಯನ್ನು ಹೇಗೆ ನಿರ್ಮಲವಾಗಿಟ್ಟುಕೊಳ್ಳಬೇಕು. ಯಾವ ಯಾವ ಋತುಮಾನಗಳಲ್ಲಿ ಎಂತಹ ಬಟ್ಟೆಗಳನ್ನು ಧರಿಸಬೇಕು. ಸಮತೋಲದ ಆಹಾರ ಎಂದರೇನು. ಇತ್ಯಾದಿಗಳನ್ನು ನಮಗೆ ಮನವರಿಕೆ

ಯಾಗುವಂತೆ ಕಲಿಸುತ್ತಿದ್ದರು. ಅವರು ಬಹಳ ಅಂತಃಕರಣಿ, ವಾತ್ಸಲ್ಯಮಯಿ ಆಗಿದ್ದರು. ಯಾರಾದರೂ ಪಾಠ ಮಾಡುವಾಗ ಗದ್ದಲ ಮಾಡಿದರೆ 'ನಿನ ತಲ್ಯಾಗ ಕೊಬ್ಬರಿ ಎಣ್ಣೆ ಹಾಕಲಿ' ಎಂದೋ, 'ನಿನ್ನ ಬಾಯಾಗ ಕಡಬು ತುರಕಲಿ'ಎಂದೋ ಬಯ್ಯುತ್ತಿದ್ದರು. ಸ್ವಚ್ಛತೆ ಮತ್ತು ಅಭ್ಯಾಸದ ಉದಾಹರಣೆ ಕೊಡುವಾಗ ಅವರು ಉಳಿದವರಿಗೆ ನನ್ನ ಹೆಸರನ್ನು ಹೇಳುತ್ತಿದ್ದರು.

ಏಳನೆಯ ತರಗತಿಗೆ ಬರುವ ವೇಳೆಗೆ ನಾನು ಎಲ್ಲರಂತೆ ಪರಕಾರ ಪೋಲಕಾ ಧರಿಸ ತೊಡಗಿದೆ. ನನ್ನ ಉಳಿದ ಗೆಳತಿಯರು ಆರನೆಯ ತರಗತಿಯ ವರೆಗೆ ಬಂದದ್ದು ಮಹಾಸಾಧನೆ ಯಾಗಿತ್ತು. ಆಗಲೇ ಕೆಲವರನ್ನು 'ಕೊಟ್ಟು'ಬಿಟ್ಟಿದ್ದರು.

ಐದು, ಆರನೆಯ ತರಗತಿಗಳಲ್ಲಿ ನಮಗೆ ಚಾಪೆ ಹೆಣೆಯುವದು, ಅದಕ್ಕೆ ಬಣ್ಣ ಹಾಕುವದು, ಫೋಟೋ ಫ್ರೇಮ್ ಹಾಕುವದು, ಟಾವೆಲ್ ಅರಿವೆಗಳಲ್ಲಿ ಹೆಣೆಯುವದು, ಹಸಿಮಣ್ಣಿನಿಂದ ತರಕಾರಿಗಳನ್ನು ಮಾಡುವದನ್ನು ಕಲಿಸಿದ್ದರು. ಗುದ್ಲೀನ ಗುರುಗಳು, ಪೋತಗೋಳಿ ಅಕ್ಕೋರು ನೀತಿಕತೆಗಳನ್ನು ಹೇಳುತ್ತಿದ್ದರು. ಭಾವಗೀತೆ, ದೇಶಭಕ್ತಿ ಗೀತೆಗಳನ್ನು ಕಲಿಸುತ್ತಿದ್ದರು. ಪೋತಗೋಳಿ ಅಕ್ಕೋರು ಕಲಿಸಿದ ಸ್ವಾತಂತ್ರ್ಯ ಹೋರಾಟದ ಸಂದರ್ಭದ ಪ್ರಭಾತಫೇರಿ ಹಾಡು–

ರಾಟಿಯ ತಿರುವುವರು ನಾವು / ರಾಷ್ಟ್ರವ ಗೆದ್ದವರು
ತಪ್ಪದೆ ಸ್ವರಾಜ್ಯವ ಪಡೆವವರು / ನಾವು ಚಳುವಳಿ ಮಾಡಿದವರು

ಎಂಬುದು ಈಗಲೂ ಕಿವಿಯಲ್ಲಿ ಅನುರಣಿಸುತ್ತಿದೆ.

ವರ್ಷದ ಕೊನೆಗೆ ಪಂದ್ಯಾಟಗಳು ನಡೆಯುತ್ತಿದ್ದವು. ಉದ್ದ ಜಿಗಿತ, ಎತ್ತರ ಜಿಗಿತ, ಖೋ ಖೋ, ಓಟ, ಲಿಂಬಿಹಣ್ಣು ಚಮಚದಲ್ಲಿಟ್ಟು ಓಡುವದು, ಪೊಟೇಟೋ ರೇಸ್ ಮುಂತಾದವು ನಡೆಯುತ್ತಿದ್ದವು. ನಾನು ಆಟಗಳಲ್ಲಿ ಭಾಗವಹಿಸುತ್ತಿರಲಿಲ್ಲ. ಆದರೆ ನೋಡಲು ಹೋಗುತ್ತಿದ್ದೆ.

ವರ್ಷಕ್ಕೊಮ್ಮೆ ಶಾಲೆಯನ್ನು ವೀಕ್ಷಿಸಲು ಮೇಲಾಧಿಕಾರಿಗಳು ಬರುತ್ತಿದ್ದರು. ಅವರಿಗೆ 'ಸಾಹೇಬರು' ಎನ್ನುತ್ತಿದ್ದರು. ಅವರು ಬರುತ್ತಾರೆಂದು ಗೊತ್ತಾದ ಕೂಡಲೇ ಎಲ್ಲ ಗುರುಗಳು ದಫ್ತರಗಳನ್ನು ಅಚ್ಚುಕಟ್ಟಾಗಿ ಸಿದ್ಧಗೊಳಿಸಿ, ನಮಗೆ ಎಲ್ಲ ಪಾಠಗಳೂ ಸರಿಯಾಗಿ ಬರುತ್ತಿವೆಯೋ ಇಲ್ಲವೋ ಎಂಬುದರತ್ತ ಲಕ್ಷ್ಯವಹಿಸಿ ನಮ್ಮನ್ನು ಪರೀಕ್ಷೆಗೆ ಅಣಿಗೊಳಿಸುತ್ತಿದ್ದರು. ಮತ್ತು ಎಲ್ಲರೂ ಆ ದಿನ ಕಡ್ಡಾಯವಾಗಿ ತಲೆ ಬಾಚಿಕೊಂಡು, ಶುಭ್ರವಾದ ಬಟ್ಟೆಗಳನ್ನು ಧರಿಸಿ ಬರಬೇಕೆಂದು ಹೇಳುತ್ತಿದ್ದರು.

ಒಟ್ಟಿನಲ್ಲಿ ನನ್ನ ಶಾಲೆಯ ಒಂದು ಅಂಕ ಕೋಳಿವಾಡದಲ್ಲಿ ಮುಗಿಯಿತು. ಕುಮಾರವ್ಯಾಸರ ಉತ್ಸವ, ಮಹಾಭಾರತ ವಾಚನ, ಜಾತ್ರೆ, ಉತ್ಸವಗಳಲ್ಲಿ ನಕ್ಕು ನಲಿದು, ಹಳ್ಳದ ದಂಡೆಯಲ್ಲಿ ಬುತ್ತಿ ಉಂಡು, ವಾರಿಗೆಯ ಗೆಳತಿಯರ ಸಂಗದಲ್ಲಿ ಗುಸು ಗುಸು ಮಾತಾಡಿ, ಹುಸಿನಗೆ ನಕ್ಕು, ಎಲ್ಲರ ಅಕ್ಕರೆಯ ಹುಡುಗಿಯಾಗಿದ್ದ ನಾನು ಹೈಸ್ಕೂಲ್ ಶಿಕ್ಷಣಕ್ಕಾಗಿ ಧಾರವಾಡಕ್ಕೆ ಬಂದೆ.

ನನ್ನ ಅಣ್ಣ ಮಾಧು ಕೆ.ಇ. ಬೋರ್ಡ್ಸ್ ಶಿಕ್ಷಣ ಸಂಸ್ಥೆಯ ಪ್ರತಿಭಾವಂತ ವಿದ್ಯಾರ್ಥಿಯಾಗಿ ಹೆಸರು ಗಳಿಸಿದ್ದ. ನನ್ನ ಹಿರಿಯಣ್ಣ ರಾಮಣ್ಣ ಮಾಳಮಡ್ಡಿಯಲ್ಲಿ ಚಿಕ್ಕ ಮನೆ ಬಾಡಿಗೆ ಹಿಡಿದಿದ್ದ. ಆದ್ದರಿಂದ ಕೆ. ಇ. ಬೋರ್ಡ್ಸ್ ಶಿಕ್ಷಣ ಸಂಸ್ಥೆಯಲ್ಲಿಯೇ ನಾನು ನನ್ನ ಹೈಸ್ಕೂಲ್

ಶಿಕ್ಷಣ ಮುಂದುವರಿಸಬೇಕೆಂದು ಮುಖ್ಯೋಪಾಧ್ಯಾಯರಾಗಿದ್ದ ಎಸ್. ಜಿ. ನಾಡಗೀರ ಮಾಸ್ತರಿಗೆ ಹೇಳಿ ನನ್ನ ಹೆಸರು ಹಚ್ಚಿ ಬಂದ.

ಅಣ್ಣನು ಹೇಳಿದಂತೆ ನಾನು ಮೊದಲ ದಿನ ೧೧ ಗಂಟೆಗೆ ಪತ್ರಾವಳಿ ಚಾಳಿನ ಗೆಳತಿಯರೊಂದಿಗೆ ಶಾಲೆಯ ಆವರಣವನ್ನು ಪ್ರವೇಶಿಸಿದೆ. ಹೈಸ್ಕೂಲಿನ ನನ್ನ ಮೊದಲ ದಿನದ ಅನುಭವ ಬೇರೆ ರೀತಿಯೇ ಆಗಿದೆ. ಕೋಳಿವಾಡಕ್ಕೆ ಹೋದಾಗ ಶಹರದವಳೆಂಬ ಭಾವನೆ ಇದ್ದರೆ, ಧಾರವಾಡಕ್ಕೆ ಬಂದಾಗ ಹಳ್ಳಿಯಿಂದ ಬಂದವಳು ಎಂಬ ಹಿಂಜರಿಕೆ ನನ್ನಲ್ಲಿತ್ತು.

ವಿಶಾಲವಾದ ಆವರಣ, ಕೆಂಪು ಬಣ್ಣ ಹಚ್ಚಿದ ಶಾಲೆಯ ಕಟ್ಟಡ ನನ್ನ ಕಣ್ಸೆಳೆದವು. ಪವಿತ್ರ ಭಾವನೆಯೊಂದಿಗೆ ಭಕ್ತಿ ಮೂಡಿತು. ಅಪರಿಚಿತ ವಾತಾವರಣ. ಆದರೂ ಹೆಡ್‌ಮಾಸ್ತರ್ ಕೊಠಡಿ ಎಲ್ಲಿ ಎಂದು ಗೆಳತಿಯರನ್ನು ವಿಚಾರಿಸಿ ಹೋಗಿ, ಬಾಗಿಲಲ್ಲಿ ತುಸು ಸಂಕೋಚದಿಂದ ನಿಂತೆ. ಆಗ ನಾಡಗೀರ್ ಸರ್, 'ಯಾರು? ಒಳಗ ಬಾ' ಎಂದರು. ನನ್ನ ಪರಿಚಯ ಹೇಳಿಕೊಂಡೆ. ಅವರು ವಾತ್ಸಲ್ಯದಿಂದ ನನ್ನನ್ನು ಮಾತಾಡಿಸಿ ವರ್ಗದಲ್ಲಿ ಕೂಡಲು ಹೇಳಿದರು.

ನಾನು ವರ್ಗಕ್ಕೆ ಹೋಗುವಷ್ಟರಲ್ಲಿ ಆಗಲೇ ಒಬ್ಬ ಗುರುಗಳು ಪಾಠವನ್ನು ಪ್ರಾರಂಭಿಸತೊಡಗಿದ್ದರು. ನಾನು ತಲೆ ತಗ್ಗಿಸಿಕೊಂಡು ಸೀದಾ ಒಳಗೆ ಹೋದೆ. 'ಯಾರು ನೀನು? ಎಲ್ಲಿಂದ ಬಂದಿ? ಒಳಗ ಬರೋ ಮುಂದ ಹೇಳಿ ಕೇಳಿ ಬರೋ ಪದ್ಧತಿ ಇಲ್ಲೇನು? ಎಂದಾಗ ನಾನು ಏನು ತಪ್ಪು ಮಾಡಿದ್ದೇನೆಂದು ನನಗೆ ಗೊತ್ತಾಗಲಿಲ್ಲ. ಅಪರಾಧಿಯಂತೆ ತಲೆ ತಗ್ಗಿಸಿ ನಿಂತೆ. ಮುಂದೆ ಕುಳಿತಿದ್ದ ರಮಾ, ರೇಖಾ, ಲತಾ ಇವರು 'May I come in Sir ಎಂದು ಕೇಳಿ ಬರಬೇಕು' ಎಂದು ಮೆಲ್ಲಗೆ ಹೇಳಿದರು. ನಂತರ ಉಪಾಯವಿಲ್ಲದೆ ಹೋಗಿ ಹಿಂದಿನ ಬೆಂಚಿನಲ್ಲಿ ಕುಳಿತೆ. ನಂತರ ಮನೆಗೆ ಬಂದು ಅಣ್ಣ ಮಾಧೂನಿಗೆ ನಡೆದ ಸಂಗತಿ ಹೇಳಿದೆ. 'ಇರಲಿ ಬಿಡು, ಮೋಹನ ಸಿದ್ಧಾಂತಿ ನನ್ನ ಜೋಡಿ ಕಲಿತವರು. ಹೇಳತೇನಿ. ಇನ್ನೊಮ್ಮೆ ಕೇಳಿ ಹೋಗು' ಎಂದು ಸಮಾಧಾನ ಹೇಳಿದ. ಆ ದಿನ ಪಾಠ ಮಾಡಿದ 'Crocodile and Bangarhalli Tank' ಪಾಠದ ಪ್ರಶ್ನೆಗಳಿಗೆ ಕಷ್ಟಪಟ್ಟು ಅಭ್ಯಾಸ ಮಾಡಿ ಉತ್ತರಗಳನ್ನು ಬರೆದುಕೊಂಡು ಹೋದೆ. ಧಾರವಾಡದಲ್ಲಿ 'ಅಕ್ಕೋರು' ಶಬ್ದ ಬದಲಿಸಿ 'ಟೀಚರ್' ಎಂದು; 'ಗುರುಗಳು' ಬದಲಿ 'ಸರ್' ಎನ್ನುವದನ್ನು ರೂಢಿ ಮಾಡಿಕೊಂಡೆ.

ಶಿಕ್ಷಕಿಯರಾದ ಶ್ರೀಮತಿ ತಟ್ಟಿಯವರು ಇಂಗ್ಲೀಷ್ ಕಲಿಸುತ್ತಿದ್ದರು. ಅರಬಟ್ಟಿ ಟೀಚರ್ ಹೊಲಿಗೆ ಕಲಿಸುತ್ತಿದ್ದರು, ಮತ್ತು ಯಾರಾದರೂ ಶಿಕ್ಷಕರು ರಜೆ ತೆಗೆದುಕೊಂಡಾಗ ಬಂದು ಕಥೆಗಳನ್ನು ಹೇಳುತ್ತಿದ್ದರು. ಅವರು 'ಘಾಂಚ್ ಲಕ್ಷ್ಮಿ ಕುಂಕು ಲಾವತೇ' ಕತೆಯನ್ನು ಭಾವಪೂರ್ಣವಾಗಿ ಹೇಳಿದ್ದು ನನ್ನ ಮನಃಪಟಲದಲ್ಲಿ ಅಚ್ಚೊತ್ತಿದೆ. ಆರ್. ಎ. ಸಿದ್ಧಾಂತಿಯವರು ಜೀವಶಾಸ್ತ್ರ ಕಲಿಸುತ್ತಿದ್ದರು. ಅವರು ಹಸನ್ಮುಖಿಗಳು. ವಿದ್ಯಾರ್ಥಿಗಳಿಗೆ ಪ್ರಿಯರಾದವರು. ಇಂದಿಗೂ ಅವರು ಅದೇ ಪ್ರೀತಿ, ವಾತ್ಸಲ್ಯದಿಂದ ನಮ್ಮ ಕ್ಷೇಮಸಮಾಚಾರ ತೆಗೆದುಕೊಳ್ಳುತ್ತಾರೆ.

ನಮ್ಮ ಊರಿನವರೇ ಆದ ಎಸ್. ಡಿ. ಪಾಟೀಲರು ಕನ್ನಡ ವಿಷಯವನ್ನು ಚೆನ್ನಾಗಿ ಕಲಿಸುತ್ತಿದ್ದರು. ಕುಮಾರವ್ಯಾಸ ಭಾರತದ ಉದ್ಯೋಗ ಪರ್ವದ 'ರವಿಸುತನ ಕಿವಿಯಲ್ಲಿ ಬಿತ್ತಿದನು ಭಯವ' ಎಂಬ ಪದ್ಯಭಾಗವನ್ನು ಬಹಳ ಸೊಗಸಾಗಿ ಆ ದೃಶ್ಯ ಕಣ್ಣಿಗೆ ಕಟ್ಟುವಂತೆ ವಿವರಿಸುತ್ತಿದ್ದರು. ಬೇಂದ್ರೆಯವರ ಬಗ್ಗೆ ಅವರಿಗೆ ಬಹಳ ಭಕ್ತಿ. ಅವರ ಬಗ್ಗೆ ಭಾವುಕರಾಗಿ

ಅನೇಕ ಸಂಗತಿಗಳನ್ನು ವಿವರಿಸುತ್ತಿದ್ದರು. ಸಾಹಿತ್ಯದ ಸೆಳೆತ ನನ್ನಲ್ಲಿ ಸುಪ್ತವಾಗಿತ್ತೇನೋ! ಕನ್ನಡದಲ್ಲಿ ನಾನು ಚೆನ್ನಾಗಿ ಅಂಕಗಳನ್ನು ಪಡೆಯುತ್ತಿದ್ದೆ. ನಿಬಂಧ ಬರೆಯುವದು ನನಗೆ ಪ್ರಿಯ ವಿಷಯವಾಗಿತ್ತು.

ಈಗ ನನಗೆ ಜ್ಞಾನಾಮೃತ ನೀಡಿದ ಎಲ್ಲ ಗುರುಗಳೂ ಧಾರವಾಡದಲ್ಲಿ ನೆಲೆಸಿದ್ದಾರೆ. ವಿದ್ಯಾರ್ಥಿಗಳು ಎಲ್ಲಿ ಭೆಟ್ಟಿಯಾದರೂ ಈಗಲೂ ಅವರಿಗೆ ಅಷ್ಟೇ ಪ್ರೀತಿ, ವಾತ್ಸಲ್ಯ, ಕಳಕಳಿ.

■ **ಡಾ. ಮಂದಾಕಿನಿ ಪುರೋಹಿತ :**
ಕನಕೂರು, ಅಂಚೆ : ಕವಲಗೇರಿ, ತಾ., ಜಿ. ಧಾರವಾಡ-೫೮೦ ೦೦೭ ■

ಎರಡು ಕವಿತೆಗಳು

ರಜಿಯಾ ಡಿ. ಬಿ.

೧. ಅ-ಲೋಕ

ಈ ಪಯಣದ ದಿಕ್ಕು ಯಾವುದು
ನಿರ್ಣಯದ ಕ್ಷಣವಲ್ಲ
ಗೆಲವೂ ಮಹತ್ವದ್ದಲ್ಲ
ಹೆಜ್ಜೆ ಹಾಕಿರಲಿಲ್ಲ ಕಣ್ಣು ಕೂಡಿರಲಿಲ್ಲ
ಹೆಸರಿಲ್ಲದೆ ಬಂಧಿಯಾದ
ಭಾವಗಳು ಹೀಗೆಯೆ
ಶ್ವೇತ ವರ್ಣದ ಶುಭ್ರದಂತೆ–
ಪರಿಚಿತ ಅಪರಿಚಿತ ಯಾತ್ರೆ
ಯೊಳಗಿನ ಧ್ಯಾನದ ಹಕ್ಕಿಯಂತೆ
ಸದ್ದುಗದ್ದಲವಿರದೇ ಜಾಡುಹಿಡಿದೆ
ಪ್ರಾರಂಭವಾದ ಪಯಣದ ದಿಕ್ಕು
ಆ ದೇಗುಲದ–
ಜೀವಂತ ಶಾಂತ ನಿಶ್ಚಿತ ಸ್ವರೂಪದ
ಮಹತ್ವದ ಕುರುಹುಗಳೇ:
ನಿರಂತರ ಘನೀಭವಿಸೆ
ಅಂತರ್‌ದೃಷ್ಟಿಯ ದಿವ್ಯ ಆತ್ಮದ
ಅರುಹಾದ ಈ ಪಯಣ
ದ ಕರ್ತೃ ಯಾರೋ?

೨. ರಂಗಭೂಮಿ

ಸಮಾಜಾಭಿಮುಖವಾಗದ
ಆಂದೋಲನ ಹೋರಾಟ ಚಳವಳಿ
ವ್ಯಕ್ತಿಗತ ಮುಖವಾಡದೊಳಗೆ
ಚಾಲನೆ ಪಡೆಯುತ್ತಾ
ಇವುಗಳ ಗೊಡವೆ ಇರದಂಥ
ಸಾಮಾನ್ಯರ ಬಾಳು
ಅಕ್ಕಿ ಬೇಳೆ ಉಪ್ಪು ಖಾರ ಸೂರು
ನಿತ್ಯದ ಲೆಕ್ಕದೊಳಗೆ
ದಿನರಾತ್ರಿ ಕಳೆವಾಗ
ಕೇಳುಗರಿರದಂಥ ಇವರ ಕೂಗು
ಕೇಳಿದ್ದವರ ವೃತ್ತಗಳು
ನಿರ್ಮಾಣ ನಿರ್ವಾಣವಾದಗಳೇ...

ಒಳಗೊಳಗಿನ ಮುಸುಕಿನಾಟದ ಹೂರಣವಾಗೆ
ಸಿದ್ಧಾಂತ ಬದ್ಧತೆಗಳೆಂಬ ಘೋಷಣೆ
ಪ್ರಜ್ಞಾವಂತರ ಒಣ ಪ್ರತಿಷ್ಠೆಯ
ಈ ರಂಗುಭೂಮಿ
ಕೆಂಪು ರಂಗಾಗುವುದು
ಪ್ರತಿಷ್ಠೆಗೋ ಪ್ರತ್ಯೇಕಕೋ
ಮೆರವಣಿಗೆಯಾಗುವಂಥ
ಒಂದು ವಿಪರ್ಯಾಸ ಯೋಜಕ.

■ **ರಜಿಯಾ ಡಿ. ಬಿ. :** W/o. ಡಾ. ಡಿ. ಬಿ. ಫಕ್ರುದ್ದೀನ್, ಪ್ರಾಂಶುಪಾಲರು
ಹೆಚ್.ಕೆ.ಬಿ.ಕೆ. ಇಂಜಿನಿಯರಿಂಗ್ ಕಾಲೇಜು, ೨೨/೧, ನಾಗವಾರ, ಬೆಂಗಳೂರು-೫೬೦ ೦೪೫ ■

ನನ್ನ ಅಪ್ಪ ನನ್ನ ಅಮ್ಮ

— ನಾ. ಡಿಸೋಜ

ಶಿವಮೊಗ್ಗ ಜಿಲ್ಲೆಯ ಸಾಗರ, ಸೊರಬ, ಉಳವಿಗಳಲ್ಲಿ ಫಿಲಿಪ್ ಮಾಸ್ತರರೆಂದೇ ಪ್ರಖ್ಯಾತರಾಗಿದ್ದ ನನ್ನ ತಂದೆಯವರು ಮೂಲತಃ ಉತ್ತರ ಕನ್ನಡ ಜಿಲ್ಲೆಯ ಮುರುಡೇಶ್ವರದವರು. ನನ್ನ ಅಜ್ಜ ಪಾಸ್ಕೋಲ ನಾಯಕರು ಮೇಸ್ತ ಎಂದು ಹೆಸರು ಮಾಡಿದವರು. ಕಲ್ಲು ಕೆತ್ತುವ ಕಲ್ಲು ಕಟ್ಟುವ ಕೆಲಸದಲ್ಲಿ ಇವರು ಪ್ರಖ್ಯಾತರು. ಸಾಗರದ ಎಷ್ಟೋ ಕಟ್ಟಡಗಳನ್ನು ಕಟ್ಟಿ ಬಂಗಾರದ ಬಳೆ ಪಡೆದವರು. ಬೇಸಿಗೆಯಲ್ಲಿ ಸಾಗರಕ್ಕೆ ಬಂದು ಮಳೆಗಾಲ ಪ್ರಾರಂಭವಾದಾಗ ಇವರು ಮುರುಡೇಶ್ವರಕ್ಕೆ ಹಿಂತಿರುಗುತ್ತಿದ್ದರು.

ಅಕ್ಷರಸ್ಥರೇ ಇಲ್ಲದ ಈ ಕುಟುಂಬದ ಮೊದಲ ವಿದ್ಯಾವಂತರು ನನ್ನ ತಂದೆ. ಅಂದಿನ ಕಾಲದ ಮುಲ್ಕೀ ಪರೀಕ್ಷೆ (ಏಳನೆ ತರಗತಿ) ಮುಗಿಸಿದ ಇವರಿಗೆ ಹತ್ತಿರದ ಶಿರಾಲಿಯಲ್ಲಿ ಮಾಸ್ತರರ ಕೆಲಸ ದೊರೆಯಿತಂತೆ. ಆದರೆ ಕೆಲವೇ ದಿನಗಳಲ್ಲಿ ಶಿವಮೊಗ್ಗ ಜಿಲ್ಲೆಯ ಸಾಗರದಲ್ಲಿ ಸರಕಾರಿ ಕೆಲಸ ದೊರೆತದ್ದರಿಂದ ಇವರು ಸಾಗರಕ್ಕೆ ಬಂದರು.

ತಾಳಗುಪ್ಪೆಯ ಲುವಿಸ್ ನಾಯ್ಕ ತನ್ನ ಹಿರೇಮಗಳನ್ನು ಫಿಲಿಪ್ ಮಾಸ್ತರರಿಗೆ ನೀಡಿ ಮದುವೆ ಮಾಡಿದ. ಈ ಹಿರಿಯ ಅಳಿಯನ ಮೇಲೆ ಲುವಿಸ್ ನಾಯ್ಕನಿಗೆ ತುಂಬಾ ಅಭಿಮಾನ. ಈತ ವಿದ್ಯಾವಂತ ಎಂಬ ಕಾರಣಕ್ಕೆ. ಈತ ನೇರ ನಡೆನುಡಿಯ ಮನುಷ್ಯ ಎಂಬುದು ಮತ್ತೊಂದು ಕಾರಣ.

ಆದರೆ ಮದುವೆಯಾದ ೨-೩ ವರ್ಷಗಳಲ್ಲಿ ಫಿಲಿಪ್ ಮಾಸ್ತರರು ತಮ್ಮ ಮಡದಿಯನ್ನು ಕಳೆದುಕೊಂಡರು. ಒಂದು ಗಂಡು ಒಂದು ಹೆಣ್ಣು ಮಗುವನ್ನು ನೀಡಿ ಆಕೆ ಲೋಕವನ್ನು ತ್ಯಜಿಸಿದಳು. ಈ ನೋವು ಲುವಿಸ್ ನಾಯ್ಕ ಹಾಗು ಅವನ ಮಡದಿಯನ್ನು ತುಂಬಾ ಕಾಡಿತು. ಅವರು ಫಿಲಿಪ್ ಮಾಸ್ತರರಿಗೆ ಮತ್ತೊಂದು ಮದುವೆ ಮಾಡಲು ಮುಂದಾದರು.

ಶಿರಸಿಯ ಜಾಂಜಿಬಾರರ ಸಾಕುಮಗಳು ರೊಪೀನಾ ಫಿಲಿಪ್ ಮಾಸ್ತರರ ೨ನೇ ಹೆಂಡತಿಯಾಗಿ ಬಂದಳು. ಹಳಿ ತಪ್ಪಿದ ಫಿಲಿಪ್ ಮಾಸ್ತರರ ಬದುಕಿನ ಬಂಡಿ ಮತ್ತೆ ದಾರಿಗೆ ಬಂದಿತು.

ಜಾಂಜಿಬಾರಜ್ಜ ಆಫ್ರಿಕಾದ ಜಾಂಜಿಬಾರಿನಲ್ಲಿ ಕೆಲ ವರುಷ ಇದ್ದ. ಈತ ಕಾರವಾರದ ಬ್ರಿಟಿಷ್ ಅಧಿಕಾರಿಗಳ ಸೂಟನ್ನು ತುಂಬಾ ಚೆನ್ನಾಗಿ ಹೊಲಿಯುತ್ತಿದ್ದುದರಿಂದ ಬ್ರಿಟಿಷ್ ಅಧಿಕಾರಿಗಳು ಇವನನ್ನು ಜಾಂಜಿಬಾರಿಗೆ ಕರೆದೊಯ್ದರು. ಅಲ್ಲಿಯ ತನ್ನ ಬದುಕನ್ನು, ನರಭಕ್ಷಕರ ಕೈಯಿಂದ ತಾನು ತಪ್ಪಿಸಿಕೊಂಡು ಬಂದುದನ್ನು ಈತ ಸ್ವಾರಸ್ಯಕರವಾಗಿ ಹೇಳುತ್ತಿದ್ದ. ಅಂತು ಇವನಿಗೆ ಜಾಂಜಿಬಾರ ಎಂದೇ ಹೆಸರಾಯಿತು. ನಮಗೆ ಜಾಂಜಿಬಾರ ಮೊಮ್ಮಕ್ಕಳು ಎಂಬ ಹೆಸರು.

ನನ್ನ ತಾಯಿ ರೊಪೀನಾಬಾಯಿ ತುಂಬಾ ಒಳ್ಳೆಯವಳು. ನನ್ನ ಅಣ್ಣ ಅಕ್ಕ ಬೇರೆ ತಾಯಿಯ ಮಕ್ಕಳೆಂದು ನಮಗೆ ಅನಿಸಲೇ ಇಲ್ಲ. ಹಾಗೆ ಆಕೆ ಅವರನ್ನು ಸಾಕಿದಳು. ಜೊತೆಗೆ ಇವಳಿಗೂ ಏಳೆಂಟು ಮಕ್ಕಳು ಹುಟ್ಟಿದವು. ಬಡ ಉಪಾಧ್ಯಾಯನ ದೊಡ್ಡ ಕುಟುಂಬ. ಯುದ್ಧದ ಕಾಲ. ಪ್ರತಿಯೊಂದಕ್ಕೂ ಕಂಟ್ರೋಲು. ಅಕ್ಕಿ ಸಕ್ಕರೆ ಬೆಂಕಿಪೊಟ್ಟಣ ಕೂಡ ಸಿಗುತ್ತಿರಲಿಲ್ಲ.

ಇಂಥ ಕಾಲದಲ್ಲೂ ಅಪ್ಪ ಅಮ್ಮ ನಮ್ಮನ್ನು ಸಾಕಿದರು. ವಿದ್ಯಾವಂತರನ್ನಾಗಿ ಮಾಡಿದರು. ಈ ನಡುವೆ ನನ್ನ ಹಿರಿಯ ಅಕ್ಕ ತೀರಿಕೊಂಡಳು.

ಸೊರಬ, ಉಳವಿ, ನೆಲ್ಲೂರು, ಸಂತೇಬೆನ್ನೂರು ಎಂದು ತಂದೆಯವರಿಗೆ ವರ್ಗವಾಗುತ್ತಿತ್ತು.

ತಂದೆಯವರಿಗೆ ಸಂಗೀತ, ನಾಟಕ, ಸಾಹಿತ್ಯದ ಹುಚ್ಚು. 'ಟುಮಕ ಚಲತ ರಾಮಚಂದ್ರ ಬಾಜತ ಪೈಂಜಣಿಯಾ' ಎಂಬ ಹಾಡನ್ನು ನಾನು ಸದಾ ತಂದೆಯವರ ಬಾಯಿಂದ ಕೇಳುತ್ತಿದ್ದೆ. ಕೆ. ಎಲ್. ಸೆಹ್‌ಗಲ್ ತಂದೆಯವರ ಪ್ರೀತಿಯ ಗಾಯಕ.

ಊರಿಗೆ ಯಾವುದೇ ನಾಟಕ ಕಂಪನಿ ಬರಲಿ ನನ್ನನ್ನು ನಾಟಕ ನೋಡಲು ಅಪ್ಪ ಕರೆದೊಯ್ಯುತ್ತಿದ್ದರು. ಹಲಗೇರಿ ಜಟ್ಟೆಪ್ಪ, ಸುಬ್ಬಯ್ಯ ನಾಯ್ಡು, ಗುಬ್ಬಿ ವೀರಣ್ಣ, ಪೀರ್ ಸಾಹೇಬರೆಂದರೆ ತಂದೆಯವರಿಗೆ ಅಚ್ಚುಮೆಚ್ಚು. ಹಲಗೇರಿ ಕಂಪನಿಯ ನಾಟಕವನ್ನು ನೋಡಿದ ನೆನಪು ನನಗೆ ಈಗಲೂ ಇದೆ.

ತಂದೆಯವರು ಶಾಲಾ ಮಕ್ಕಳಿಗೆ ಕಲಿಸಲೆಂದು ಕೆಲ ಪದ್ಯಗಳನ್ನು ಒಂದು ಪುಸ್ತಕದಲ್ಲಿ ಬರೆದು ಇರಿಸಿಕೊಂಡಿದ್ದರು. ಇದು ನಾನು ಓದಿದ ಮೊದಲ ಕವನ ಸಂಕಲನ. ಇದರಲ್ಲಿ ಕುವೆಂಪು, ರಾಜರತ್ನಂ, ಹೊಯ್ಸಳ ಮೊದಲಾದವರು ಬರೆದ ಕವಿತೆಗಳಿದ್ದವು. 'ದೋಣಿ ಸಾಗಲಿ ಮುಂದೆ ಹೋಗಲಿ' ಎಂಬ ಹಾಡನ್ನು ನಾನು ಆರನೇ ವಯಸ್ಸಿಗೇನೆ ಹೇಳುತ್ತಿದ್ದೆ.

ಆ ಪುಸ್ತಕದಲ್ಲಿನ ಒಂದು ಕವಿತೆ ಇಂದಿಗೂ ನನ್ನ ನೆನಪಿನಲ್ಲಿದೆ. ಅದರ ಲೇಖಕ ಯಾರು ಎಂಬುದು ನನಗೆ ಗೊತ್ತಿಲ್ಲ. ಆದರೆ ಆ ಮಕ್ಕಳ ಪದ್ಯ ಹೀಗಿದೆ–

ತೆಂಗಿನ ಮರಗಳು ಕುಳ್ಳಾಗಿದ್ದು / ಕಾಯ್ಗಳು ಕೈಗೆ ಸಿಗುವಂತಿದ್ದು /
ಕೊಬ್ಬರಿ ಎಲ್ಲ ಮೇಲ್ಗಡೆ ಇರಲು / ಎಳನೀರಿನ ಮುಚ್ಚಳ ತೆಗೆದಿರಲು /
ಇನ್ನೂ ಚೆನ್ನಾಗಿರುತಿತ್ತು / ಎಷ್ಟೋ ಚೆನ್ನಾಗಿರುತಿತ್ತು.

ಆ ಪುಸ್ತಕದಲ್ಲಿಯ ಮತ್ತೂ ಒಂದು ಮಾತು– ...'ನಗುತಿರು ನಗುತಿರು ನೀ ನಗುತಿದ್ದರೆ ನಾವೇ ನಗುವುದು ನಿನ್ನೊಡನೆ.' ಈ ಅನುಪ್ರಾಸ, ಈ ವಾಕ್ಯ ಸಾರುವ ಸತ್ಯ ನನ್ನನ್ನು ಬಹುವಾಗಿ ಆಕರ್ಷಿಸಿತು.

ನನ್ನ ತಂದೆಯವರು ತುಂಬಾ ಸುಂದರವಾದ ಕೈ ಬರಹವನ್ನು ಹೊಂದಿದ್ದರು. ಅಂದು ಪೆನ್ನುಗಳೇ ಇರಲಿಲ್ಲ. ಇಂಕಿನ ಬಾಟಲಿಗೆ ಲೇಖನಿಯನ್ನು ಅದ್ದಿಕೊಂಡು ಬರೆಯಬೇಕಿತ್ತು. ಈ ಲೇಖನಿಯಿಂದ ಅತೀ ದುಂಡಗೆ ತಂದೆಯವರು ಬರೆಯುತ್ತಿದ್ದರು. ಅವರು ಐದು ಆರು ಬಗೆಗಳಲ್ಲಿ ಅಕ್ಷರಗಳನ್ನು ರೂಢಿಸಿಕೊಂಡಿದ್ದರು.

ಪುಸ್ತಕಗಳನ್ನು ಓದುವ ಹವ್ಯಾಸವನ್ನು ಅವರು ಇರಿಸಿಕೊಂಡಿದ್ದರು. ಈ ಹುಚ್ಚು ನನ್ನ ಅಣ್ಣಂದಿರಿಗೂ ಇತ್ತು. ನನ್ನ ಅಕ್ಕ ಕೂಡ ಓದುತ್ತಿದ್ದಳು. ಕಾರಂತ, ಗೋಕಾಕ, ಅನಕೃ ಕಾದಂಬರಿಗಳು ನಮ್ಮಲ್ಲಿ ಸಿಗುತ್ತಿದ್ದವು.

೧೯೩೬ ರಲ್ಲಿ ನನ್ನ ತಂದೆಯವರು ಮೈಸೂರಿನ ದೊರೆ ನಾಲ್ವಡಿ ಕೃಷ್ಣರಾಜೇಂದ್ರ ಒಡೆಯರ್ ಅವರ ರಜತ ಮಹೋತ್ಸವ ಸಂದರ್ಭದಲ್ಲಿ ಅವರಿಗೊಂದು ಅಭಿನಂದನ ಪತ್ರವನ್ನು ಸಮರ್ಪಿಸಿದರು. ಈ ಪತ್ರದಲ್ಲಿ ಕೃಷ್ಣರಾಜ ಒಡೆಯರ್ ಅವರ ರಾಜ ಪರಿಪಾಲನಾ ಕೌಶಲ್ಯವನ್ನು, ಪ್ರಜಾವಾತ್ಸಲ್ಯವನ್ನು, ಭಾಷಾವಿಜ್ಞಾನ ಶಿಲ್ಪ ಸಂಗೀತಾದಿ ಕಲೆಗಳ ಅಭಿವೃದ್ಧಿಯನ್ನು; ರಾಜರು ಶಿಕ್ಷಣ ಕ್ಷೇತ್ರದಲ್ಲಿ ಮಾಡಿರುವ ಅಭಿವೃದ್ಧಿಯನ್ನು, ವೈದ್ಯ,

ಪಶುಚಿಕಿತ್ಸಾಲಯ, ಪುಸ್ತಕ ಭಂಡಾರ, ವಾಚನಾಲಯ ಇತ್ಯಾದಿಗಳನ್ನು ತೆರೆದಿರುವುದನ್ನು ನನ್ನ ತಂದೆಯವರು ಕೊಂಡಾಡಿರುತ್ತಾರೆ. ಕೃಷ್ಣರಾಜಸಾಗರದ ನಿರ್ಮಾಣ, ವಿದ್ಯುತ್ ಉತ್ಪಾದನೆ. ಹೀಗೆ ರಾಜ್ಯದ ಅಭಿವೃದ್ಧಿಗಾಗಿ ದೊರೆಗಳು ಕೈಕೊಂಡ ಎಲ್ಲ ಕಾರ್ಯಗಳನ್ನು ಪ್ರಶಂಸಿಸಿರುತ್ತಾರೆ. ಮೈಸೂರನ್ನು ಆಳಿದ ದೊರೆಗಳಲ್ಲಿ ಕೃಷ್ಣರಾಜ ಒಡೆಯರು ತುಂಬಾ ಸಮರ್ಥರಾಗಿದ್ದರೆಂಬುದು ಈಗ ಎಲ್ಲರೂ ಒಪ್ಪಿಕೊಂಡಿರುವ ವಿಷಯ. ಅವರನ್ನು ಕುರಿತು ನನ್ನ ತಂದೆಯವರು ಈ ಪತ್ರದಲ್ಲಿ– "ಮಹಾಸ್ವಾಮಿಯವರ ದೈವಭಕ್ತಿ ಭೂತದಯೆ ಗಾಂಭೀರ್ಯ ಸದಾಚಾರ ವರ್ತನೆ ಪೂರ್ವಸಂಪ್ರದಾಯ ವಿಶ್ವಾಸ ಆತ್ಮಪರಿಶುದ್ಧತೆ ಗುರುಜನ ನಮ್ರತೆ ವಿದ್ವಜ್ಜನ ಮಮತೆ ಸರ್ವಜನ ಸುಲಭತೆ ರಾಜಧರ್ಮ ಪರಾಯಣತೆ ಮಂತ್ರಾಲೋಚನ ಚತುರತೆ ಲೋಕಾಭ್ಯುದಯ ತತ್ಪರತೆ ಈ ಸದ್ಗುಣಗಳು ಸಕಲ ದೇಶ ಸಂಪತ್ತುಗಳಾಗಿ ಮಹಾಸ್ವಾಮಿಯವರನ್ನು ಜನಕ ಯುಧಿಷ್ಠಿರಾದಿ ರಾಜರ್ಷಿಗಳ ಪಂಕ್ತಿಗೆ ಸೇರಿಸತಕ್ಕವಾಗಿವೆ..." ಎಂದು ಬರೆದಿರುತ್ತಾರೆ.

ಈ ಪತ್ರದ ಮತ್ತೊಂದು ವಿಶೇಷತೆ ಎಂದರೆ ಒಂದು ಪೋಸ್ಟ್ ಕಾರ್ಡಿನಷ್ಟೇ ಉದ್ದವಾದ ತುಸು ಅಗಲವಾದ ಕಾಗದದ ಮೇಲೆ ೩೨ ಸಾಲುಗಳಲ್ಲಿ ಅತೀ ಸೂಕ್ಷ್ಮವಾದ, ಬರಿಗಣ್ಣಿನಲ್ಲಿ ಓದಲಿಕ್ಕಾಗದ ರೀತಿಯಲ್ಲಿ ಬರೆದಿರುವುದು. ಈ ಪತ್ರದ ಭಾಷೆ ಶೈಲಿ ಎಷ್ಟು ಪ್ರೌಢವಾಗಿದೆಯೋ ಬರವಣಿಗೆ ಕೂಡ ಅಷ್ಟೇ ಆಕರ್ಷಕವಾಗಿದೆ.

ಈ ಪತ್ರವನ್ನು ದಸರೆಯ ವಸ್ತುಪ್ರದರ್ಶನದಲ್ಲಿ ಇರಿಸುವುದರ ಜೊತೆಗೆ ಅರಮನೆಯಿಂದ ಒಂದು ಪಂಚಲೋಹದ ಪದಕವನ್ನು ಕೂಡ ತಂದೆಯವರಿಗೆ ಕಳುಹಿಸಿಕೊಡಲಾಗಿದೆ. ಈ ಪತ್ರ ಹಾಗು ಪದಕವನ್ನು ನಾನು ಈಗಲೂ ಅತ್ಯಮೂಲ್ಯ ಆಸ್ತಿ ಎಂಬಂತೆ ಕಾದಿರಿಸಿಕೊಂಡಿದ್ದೇನೆ.

ತಂದೆಯವರು ಒಳ್ಳೆಯ ಕತೆಗಾರರಾಗಿದ್ದರು. ಅವರು ಹೇಳಿದ ಕತೆಗಳನ್ನು ಅವರ ಕಾಲಾನಂತರ ತಾಯಿಯವರು ನನಗೆ ಹೇಳಿದ್ದಿದೆ.

ಅಂತೆಯೇ ತಂದೆಯವರು ಕೆಲವೊಂದು ಆದರ್ಶಗಳನ್ನು ಇರಿಸಿಕೊಂಡಿದ್ದರು.

ಕ್ರೀಸ್ತುವರ ಕೇರಿಗಳಲ್ಲಿ ಅವರು ಮನೆ ಮಾಡುತ್ತಿರಲಿಲ್ಲ. ಹೊಡೆದಾಟ ಬಡಿದಾಟ ಕುಡುಕತನದಿಂದ ತಮ್ಮ ಮಕ್ಕಳು ದೂರವಿರಬೇಕೆಂದು ಅವರು ಬಯಸುತ್ತಿದ್ದರು.

ಊರ ಪಾದರಿಗಳ ಉಪಟಳವನ್ನು ಅವರು ಸಹಿಸುತ್ತಿರಲಿಲ್ಲ. ಊರ ಪಾದರಿಗಳು ಪಾಳೇಗಾರರ ಹಾಗೆ ವರ್ತಿಸಿ ಜನರಿಗೆ ಕಿರುಕುಳ ಕೊಡುವುದನ್ನು ಅವರು ಬಿಷಪ್ ಗುರುಗಳಿಗೆ ಬರೆದು ತಿಳಿಸುತ್ತಿದ್ದರು. ಊರ ಪಾದರಿಗಳು ಇವರಿಗೆ ಹೆದರುತ್ತಿದ್ದರು. ಇವರ ಮೇಲಿನ ಸಿಟ್ಟನ್ನು ಅಮ್ಮನ ಮೇಲೆ ತೀರಿಸಿಕೊಳ್ಳುತ್ತಿದ್ದರು.

ತಂದೆಯವರಿಗೆ ಕನ್ನಡದ ಮೇಲೆ ಅಭಿಮಾನ. ಇಂಗ್ಲಿಷ್ ಅಂಧಾಭಿಮಾನಿಗಳನ್ನು ಕಂಡರೆ ಆಗುತ್ತಿರಲಿಲ್ಲ. ಕಟ್ಲೀಸ್ ಎಂಬ ಓರ್ವನಿಗೆ ಇಂಗ್ಲಿಷ್ ಹುಚ್ಚು. ಅವನು ಎಲ್ಲ ಕಡೆಯೂ ಇಂಗ್ಲಿಷ್ ಆಡಿಕೊಂಡು ತಿರುಗಾಡುವವ. ಅವನ ಉಡಿಗೆ ಕೂಡ ಹಾಗೆಯೇ. ಸೂಟು, ಹ್ಯಾಟು, ಬೂಟು ಹಾಕಿಕೊಂಡು ಬರುತ್ತಿದ್ದ ಆತ. ಒಂದು ಮದುವೆ. ಚಪ್ಪರದ ತುಂಬ ಜನ ಸೇರಿದ್ದಾರೆ. ಕಟ್ಲೀಸ್ ಚಪ್ಪರದ ಬಾಗಿಲಿಗೆ ಬಂದು ನಿಂತ. ಎತ್ತರದ ದನಿಯಲ್ಲಿ ಬಾಗಿಲಲ್ಲಿ ನಿಂತು

ಇಂಗ್ಲಿಷ್ ಮಾತನಾಡತೊಡಗಿದ. ಇಂಗ್ಲಿಷ್ ಬಾರದ ಜನ ಕಕ್ಕಾಬಿಕ್ಕಿಯಾದರು. ಕಟ್ಲೀಸ್ ಬೂಟ್ಸು ಕಳಚುವಾಗ ತಂದೆಯವರು ಬಾಗಿಲಿಗೆ ಹೋದರು.

ಅವರು ದನಿ ಏರಿಸಿ ಹೇಳಿದರು– "...ನೋಡು ಕಟ್ಲೀಸ... ನಿನ್ನ ಇಂಗ್ಲೀಷು ಪಂಗ್ಲೀಷು ಎಲ್ಲ ಚಪ್ಪರದ ಹೊರಗೆ... ಬೂಟ್ಸ ಕಳಚಿಟ್ಟ ಹಾಗೆ ನಿನ್ನ ಭಾಷೇನೂ ಕಳಚಿಟ್ಟು ಒಳಗೆ ಬಾ... ತಿಳೀತಲ್ಲ..."

ಜನ ಹೋ ಎಂದು ನಕ್ಕರು.

ಅಂದಿನಿಂದ ಕಟ್ಲೀಸ್ ಇಂಗ್ಲಿಷ್ ಮಾತನಾಡುವಾಗ ಹತ್ತಿರ ಫಿಲಿಪ್ ಮಾಸ್ತರರು ಇದ್ದಾರೆಯೋ ಹೇಗೆ ಎಂಬುದನ್ನು ನೋಡುತ್ತಿದ್ದ. ಈ ವಿಷಯವನ್ನು ಸಾಗರದ ಜನ ನನ್ನ ತಂದೆಯವರು ತೀರಿಕೊಂಡ ನಂತರವೂ ಹೇಳಿ ನಗುತ್ತಿದ್ದರು.

೪೦ ರ ದಶಕದಲ್ಲಿ ತಂದೆಯವರಿಗೆ ಬಯಲು ಸೀಮೆಗೆ ವರ್ಗ ಮಾಡಿದರು. ಇದೊಂದು ಶಿಕ್ಷೆ. ಮಾಡದ ತಪ್ಪಿಗೆ ಅವರು ಎದುರಿಸಬೇಕಾದ ಶಿಕ್ಷೆ. ದೂರದ ಚನ್ನಗಿರಿ ತಾಲೂಕಿಗೆ ಅವರನ್ನು ಹಾಕಿದರು. ಅಲ್ಲಿ ಜೋಳ ರಾಗಿ ತಿನ್ನಬೇಕು. ನಲ್ಲೂರು ಸಂತೇಬೆನ್ನೂರುಗಳಲ್ಲಿ ನೀರಿನ ಅಭಾವ. ಯುದ್ಧದ ಬಿಸಿ. ತಂದೆಯವರು ನಲುಗಿ ಹೋದರು. ಅವರಿಗೆ ಬೀಡಿ ಸೇದುವ ಅಭ್ಯಾಸ. ಮನೆಯಲ್ಲಿಯೇ ಅಮ್ಮ ಬೀಡಿ ಕಟ್ಟುತ್ತಿದ್ದರು. ಅಪ್ಪ ಸೇದುತ್ತಿದ್ದರು. ಮನೆಯಲ್ಲಿದ್ದ ಹಂಡೆ ಪಾತ್ರೆಗಳನ್ನೆಲ್ಲ ಮಾರಬೇಕಾಯಿತು. ತಂದೆಯವರಿಗೆ ಅಸ್ತಮಾ. ಆದರೂ ತಮಗಾದ ಪನಿಷ್‌ಮೆಂಟ್ ಟ್ರಾನ್ಸಫರನ್ನು ರದ್ದುಪಡಿಸಿಕೊಂಡು ಅವರು ಶಿವಮೊಗ್ಗ, ನಂತರ ಸಾಗರಕ್ಕೆ ಬಂದರು.

ನನ್ನ ಹಿರಿಯಣ್ಣ ಕಷ್ಟಪಟ್ಟು ಓದಿ ಜೋಗದಲ್ಲಿ ಒಂದು ಕೆಲಸ ಪಡೆದಿದ್ದ. ಈ ಸಂತಸದಲ್ಲಿ ಭಾಗಿಯಾಗಲು ತಂದೆಯವರು ಉಳಿಯಲಿಲ್ಲ. ನನಗೆ ಹತ್ತು ವರ್ಷವಾಗಿದ್ದಾಗ ಅವರು ಕಾಯಿಲೆ ಮಲಗಿದವರು ಮತ್ತೆ ಏಳಲಿಲ್ಲ.

ತಂದೆಯವರದ್ದು ಎತ್ತರದ ವ್ಯಕ್ತಿತ್ವ. ಕಚ್ಚೆ ಪಂಚೆ ಶರಟು, ಕೋಟು, ಪೇಟ ಧರಿಸುತ್ತಿದ್ದರು. ಗಂಭೀರವಾದ ನಡಿಗೆ. ಪಂಚೆಯ ಒಂದು ಚುಂಗನ್ನು ಹಿಡಿದುಕೊಂಡು ನಡೆಯುತ್ತಿದ್ದರು. ಅಪ್ಪ ಅಮ್ಮ ಇಬ್ಬರೂ ಕಾಡಿಗೆ ಹೋಗಿ ಸೌದೆ ತರುತ್ತಿದ್ದರು. ಕಷ್ಟ ಎಷ್ಟೇ ಬರಲಿ ಯಾರಲ್ಲೂ ಹೇಳಿಕೊಂಡವರಲ್ಲ.

ಶಾಲಾ ಉಪಾಧ್ಯಾಯ ವೃತ್ತಿಯ ಜೊತೆಗೆ ಅಂಚೆ ಮಾಸ್ತರರಾಗಿಯೂ ಕೆಲಸ ಮಾಡುತ್ತಿದ್ದರು. ಉಳವಿಯಲ್ಲಿ ಸೋಮಪ್ಪ ಎಂಬೊಬ್ಬ ಸಹಾಯಕ ಶಿಕ್ಷಕರು. ಅವರಿಗೆ ತಂದೆಯವರನ್ನು ಕಂಡರೆ ಆಗದು. ಇವರ ತಲೆಯ ಮೇಲೆ ಏನಾದರೊಂದು ಗೂಬೆ ಕೂರಿಸುವ ಸನ್ನಾಹ. ಅವರು ಅಂಚೆ ಇಲಾಖೆಗೆ ತಂದೆಯವರ ಮೇಲೆ ಇಲ್ಲದ್ದನ್ನೆಲ್ಲ ಬರೆಯುವುದು. ಆತ ಅಂಚೆಗೆ ಹಾಕಿದ ಲಕೋಟೆಯನ್ನು ತಂದೆಯವರು ನಿಧಾನವಾಗಿ ಬಿಡಿಸಿ ಪತ್ರ ತೆಗೆದು ಓದಿ ಮತ್ತೆ ಅಂಚೆಗೆ ಹಾಕುವುದು. ಅಂಚೆ ಇಲಾಖೆ ಏನಾದರೂ ವಿಚಾರಣೆ ಮಾಡುತ್ತದೇನೋ ಎಂದು ಆತ ಕಾಯುವುದು. ತಂದೆಯವರು ಅವನ ನಿರಾಶೆ ಕಂಡು ನಗುವುದು ನಡೆಯುತ್ತಿತ್ತು.

ಸಾಗರದಲ್ಲಿ ಜಾಫರ್ ಎಂದೊಬ್ಬ ಶಾಲಾ ಜವಾನ. ತಂದೆಯವರ ಆತ್ಮೀಯ. ತಂದೆಯವರ ಪ್ರಭಾವದಿಂದ ಈತ ಓದಿದ. ಖಾಸಗಿಯಾಗಿ ಎಸ್.ಎಸ್.ಎಲ್.ಸಿ. ಮಾಡಿಕೊಂಡ. ಉರ್ದೂ ಶಾಲೆಯ ಶಿಕ್ಷಕನಾಗಿ ನಿವೃತ್ತನಾದ.

ತಂದೆಯವರ ಹೆಚ್ಚಿನ ಒಡನಾಟ, ಸಾಮೀಪ್ಯ ನನಗೆ ಲಭ್ಯವಾಗಲಿಲ್ಲ. ಆದರೆ ಫಿಲಿಪ್ ಮಾಸ್ತರರ ಮಗ ಎಂದು ಜನ ನನ್ನನ್ನು ಸದಾ ಗೌರವಿಸುತ್ತಿದ್ದರು. ಅವರ ಬಗ್ಗೆ ಹೇಳುತ್ತಿದ್ದರು. ಅವರ ಕೈ ಕೆಳಗೆ ಕೆಲಸ ಮಾಡಿದ ಆನಂದ ಮಾಸ್ತರರು, ಟೋಪಿ ಮಾಸ್ತರರು, ಜವಾನರಾದ ಬಂಗಾರಿ ಮತ್ತಿತರರ ಮೂಲಕ ತಂದೆಯರವನ್ನು ನಾನು ಅರ್ಥಮಾಡಿಕೊಂಡೆ.

ತಂದೆಯವರು ತೀರಿಕೊಂಡಾಗ ಅಮ್ಮನಿಗೆ ನಡುವಯಸ್ಸು. ಹೊರಗಿನ ಯಾವ ಜವಾಬ್ದಾರಿಯನ್ನೂ ಅವಳು ಅರಿತವಳಲ್ಲ. ಮನೆಯಲ್ಲಿ ನಾವು ಐವರು ಮಕ್ಕಳು.

"ಮಕ್ಕಳನ್ನು ನಾನು ವಿದ್ಯಾವಂತರನ್ನಾಗಿ ಮಾಡುತ್ತೇನೆ. ಅವರಿಗಾಗಿ ಆಸ್ತಿ ಮಾಡುವುದಿಲ್ಲ...." ಎಂದು ಹೇಳುತ್ತಿದ್ದರು ತಂದೆಯವರು. ಹೀಗಾಗಿ ಅವರು ಆಸ್ತಿ ಮಾಡಲಿಲ್ಲ. ಆದರೆ ತಂದೆಯವರ ಇನ್ಶೂರೆನ್ಸ್ ಹಣ ೬೫/- ರೂ. ಬಂದಾಗ ಅಮ್ಮ ೬೦/- ಕೊಟ್ಟು ಒಂದು ಪುರಸಭೆ ನಿವೇಶನ ಕೊಂಡಳು. ಈ ನಿವೇಶನದ ಮೇಲೆ ನಾನು ಇವತ್ತು ಮನೆ ಕಟ್ಟಿದ್ದೇನೆ. ಆ ಮನೆಯಲ್ಲಿ ವಾಸಿಸುತ್ತಿದ್ದೇನೆ.

ನಾನು ಕೂಡ ತಂದೆಯವರ ಫಿಲಾಸಫಿಯಲ್ಲಿ ನಂಬಿಕೆಯುಳ್ಳವನು. ನನ್ನ ತಾಯಿ ತಾನೇ ಮುಂದಾಗಿ ನಿವೇಶನ ಕೊಳ್ಳದೇ ಇದ್ದಿದ್ದರೆ ನಾನಂತೂ ಕೊಳ್ಳುತ್ತಿರಲಿಲ್ಲ. ಈಗ ನಾನಿರುವ ಮನೆ ನನ್ನದಾಗುತ್ತಿರಲಿಲ್ಲ.

ಅಮ್ಮ ಅನಕ್ಷರಸ್ಥೆ. ಆದರೆ ಮನೆಯಲ್ಲಿ ಪಾಠ ಓದುತ್ತಿದ್ದ ಮಕ್ಕಳು ತಪ್ಪು ಮಾಡಿದರೆ ಆಕೆ ಅದನ್ನು ಕೂಡಲೇ ತಿದ್ದುತ್ತಿದ್ದಳು. ಪದ್ಯಗಳನ್ನು ಹೇಳಿಕೊಡುತ್ತಿದ್ದಳು. ಲೆಕ್ಕವನ್ನೂ ಕಲಿಸುತ್ತಿದ್ದಳು.

ತಂದೆಯವರು ಬದುಕಿರುವ ವರೆಗೂ ಕಷ್ಟ ತಾಪತ್ರಯವನ್ನೇ ಉಂಡು ಉಟ್ಟು ಬದುಕಿದವಳು ಅಮ್ಮ. ಎಷ್ಟೋ ದಿನ ಒಪ್ಪತ್ತು ಊಟ ಕೂಡ ಇರುತ್ತಿರಲಿಲ್ಲ. ಕೆಲ ಬಾರಿ ಜೋಳದ ಒಡಕಲ ಉಪ್ಪಿಟ್ಟನ್ನು, ಮಂಡಕ್ಕಿಯನ್ನು ತಿಂದು ನಾವೆಲ್ಲ ಕಾಲ ಕಳೆದದ್ದು ಉಂಟು. ಈ ಸಂದರ್ಭಗಳಲ್ಲಿ ಮನೆಯಲ್ಲಿಯ ಕೊಡಪಾನ, ಹಂಡೆ ಮಾರಾಟವಾದದ್ದು.

ಇಷ್ಟಾದರೂ ಅಮ್ಮ ನಮಗೆಲ್ಲ ಹೇಳಿಕೊಟ್ಟಿದ್ದಳು— "ಯಾರಾದರೂ ಊಟ ಆಯಿತಾ ಎಂದು ಕೇಳಿದರೆ ಆಯಿತು ಎಂದು ಹೇಳಿ. ಊಟ ಮಾಡಲಿಲ್ಲ ಎಂದು ಯಾರಿಗೂ ಹೇಳಬೇಡಿ..."

ನಾವೂ ಹಾಗೇ ಹೇಳುತ್ತಿದ್ದೆವು.

ನಾವು ಶಿವಮೊಗ್ಗದಲ್ಲಿದ್ದಾಗ ಈ ಘಟನೆ ನಡೆಯಿತು. ಪೋಲೀಸ್ ಲೈನಿನಲ್ಲಿ ನಮ್ಮ ಮನೆ. ನನ್ನ ಅಣ್ಣನ ಸ್ನೇಹಿತರೊಬ್ಬರು ಪೋಲೀಸರಾಗಿದ್ದು ಅವರು ತಮ್ಮ ಮನೆಯನ್ನು ನಮಗೆ ಬಿಟ್ಟುಕೊಟ್ಟಿದ್ದರು.

ಅಂದು ಶಿವಮೊಗ್ಗದ ಚರ್ಚ್ ಹಬ್ಬ. ಮನೆಯಲ್ಲಿ ಏನೂ ಇಲ್ಲ. ತಂದೆಯವರು ಎದ್ದು ಎಲ್ಲಿಗೋ ಹೋದರು. ನಾವೆಲ್ಲ ಚರ್ಚಿಗೆ ಹೋಗಿ ತಿರುಗಿ ಬಂದೆವು. ಅಮ್ಮ ಬೆಂಕಿ ಇಲ್ಲದ ಒಲೆಯ ಮುಂದೆ ಮುಖ ಒಣಗಿಸಿಕೊಂಡು ಕುಳಿತಿದ್ದಳು.

ನಾನು ಹೊರಗೆ ಆಟವಾಡುತ್ತಿದ್ದೆ. ಒಂದು ಮನೆಯಿಂದ ಮತ್ತೊಂದು ಮನೆಗೆ ದಾಟಿ ಹೋಗಲು ಚರಂಡಿಯ ಮೇಲೊಂದು ಕಲ್ಲು ಚಪ್ಪಡಿ ಹಾಸಿದ್ದರು. ಈ ಕಲ್ಲು ಚಪ್ಪಡಿ ದಾಟುವಾಗ ನನಗೊಂದು ಎರಡು ರೂಪಾಯಿಯ ನೋಟು ಕಂಡಿತು. ತಟ್ಟನೆ ಅದನ್ನೆತ್ತಿಕೊಂಡು ನಾನು ಮನೆಗೆ ಓಡಿ ಬಂದೆ. ಅದನ್ನು ಅಮ್ಮನ ಕೈಗಿತ್ತೆ.

ಅಮ್ಮ ನೋಟನ್ನು ತಿರುತಿರುಗಿಸಿ ನೋಡಿದಳು. 'ಪಾಪ ಯಾರದ್ದೋ...' ಎಂದು ಉದ್ಗರಿಸಿದಳು. ಎಮ್ಮು ಅದನ್ನು ದೇವರ ಗೂಡಿನಲ್ಲಿ ಇಟ್ಟಳು.

ನಂತರ ನಮ್ಮ ಮನೆಯಲ್ಲಿ ಹಬ್ಬದ ಸಂಭ್ರಮ. ಅಣ್ಣ ಸಾಮಾನು ತರಲು, ಅಕ್ಕ ಖಾರ ಅರೆದುಕೊಂಡು ಬರಲು ಹೋದರು. ಆ ನೋಟನ್ನು ಅಮ್ಮ ದೇವರ ಕೃಪೆ ಎಂದು ತಿಳಿದಳು.

ಕೈಯಲ್ಲಿ ಖರ್ಚು ಮಾಡಲು ಸಾಕಷ್ಟು ಹಣವಿರುತ್ತಿರಲಿಲ್ಲವಾದ್ದರಿಂದ ಅಮ್ಮ ಹಣದ ವಿಷಯದಲ್ಲಿ ತುಂಬಾ ಬಿಗಿಯಾಗಿರುತ್ತಿದ್ದಳು.

ತಂದೆಯವರು ತೀರಿಕೊಂಡಾಗ ನನ್ನ ಹಿರಿಯ ಅಣ್ಣನಿಗೆ ಜೋಗದಲ್ಲಿ ಕೆಲಸ ಸಿಕ್ಕಿತ್ತಲ್ಲ, ಅಮ್ಮ ನಮ್ಮನ್ನೆಲ್ಲ ನೋಡಿಕೊಂಡು ಸಾಗರದಲ್ಲಿ ಉಳಿದಳು. ಆಗಲೂ ಅಷ್ಟೆ. ಅನಾವಶ್ಯಕ ಖರ್ಚಿಲ್ಲ. ಬೇಡವಾದುದನ್ನ ಕೊಳ್ಳುವುದಿಲ್ಲ. ರಾತ್ರಿ ಅನ್ನಕ್ಕೆ ಅಕ್ಕಿ ಹಾಕುವ ಮುನ್ನ ಮಧ್ಯಾಹ್ನದ ಅನ್ನ ಎಷ್ಟು ಉಳಿದಿದೆ ಎಂಬುದನ್ನು ನೋಡಿಯೇ ಅಕ್ಕಿ ಹಾಕುವವಳು. ಮನೆಯಲ್ಲಿ ಒಂದು ಶಿಸ್ತು. ಒಂದು ನಿಯಮ. ಸೂಜಿಗೊಂದು ಜಾಗ, ಬಾಚಣಿಗೆಗೆ ಒಂದು ಜಾಗ. ಮುಖ ಒರೆಸಿಕೊಳ್ಳುವ ಕರವಸ್ತ್ರ ಒಂದು ಕಡೆ.

ಮಕ್ಕಳಿಗೂ ತಕ್ಕ ಶಿಕ್ಷಣ.

ನಾವು ರಸ್ತೆಗೆ ಹೋಗಿ ಗೋಲಿ ಬುಗುರಿ ಚಿನ್ನಿದಾಂಡು ಆಡುವಂತಿಲ್ಲ. ಕೆಟ್ಟ ಬೈಗಳು ನಮ್ಮ ಬಾಯಿಂದ ಬರುವಂತಿಲ್ಲ. ನಾನು ಹೊರಗೆಲ್ಲೋ ಕಲಿತು ಬಂದ ಒಂದು ಬೈಗುಳವನ್ನು ಅಣ್ಣನ ಮೇಲೆ ಪ್ರಯೋಗಿಸಿದೆನೆಂದು ಅಮ್ಮ ನನ್ನ ನಾಲಿಗೆಗೆ ಹಸಿ ಮೆಣಸಿನಕಾಯಿ ಮುರಿದು ಉಜ್ಜಿದ್ದಳು. ನಾನು ಎರಡು ಗಂಟೆ ಉರಿ ಎಂದು ಅತ್ತಿದ್ದೆ. ಅಂದಿನಿಂದ ಕೆಟ್ಟ ಮಾತುಗಳು ಮತ್ತೆ ನನ್ನ ಬಾಯಲ್ಲಿ ಬರಲಿಲ್ಲ.

ಅಮ್ಮ ಕೊಂಕಣಿ ಜಾನಪದ ಕತೆಗಳನ್ನು ಹೇಳುತ್ತಿದ್ದಳು. ಏಳು ಎಂಟು ದಿನಗಳ ವರೆಗೆ ಧಾರಾವಾಹಿಯಾಗಿ ಹರಿಯುವ ಕತೆಗಳು. ಖಾರ್ವಿ ಅಂತೋನಿ ಕತೆ, ಬಂಗಾರದ ಕೂದಲಿನ ಹುಡುಗಿಯ ಕತೆ, ತಿರುಮಲರಾಯನ ಕತೆ. ಹೀಗೆ ಅವಳು ಹಲವು ಕತೆಗಳನ್ನು ಹೇಳುತ್ತಿದ್ದಳು.

ಕತೆ ಹೇಳುವ ಶೈಲಿ, ಸಂಭಾಷಣೆ, ಘಟನೆಗಳ ಚಿತ್ರಣ, ವ್ಯಕ್ತಿಚಿತ್ರಣ ಎಲ್ಲವೂ ಪರಿಪೂರ್ಣ. ಮನೆಗೆ ನೆಂಟರು ಬಂದರಂತೂ ಅಮ್ಮನಿಗೆ ಕತೆ ಹೇಳುವ ಸ್ಫೂರ್ತಿ ಬರುತ್ತಿತ್ತು. ಊಟ ಮುಗಿಸಿ, ಚಾಪೆ ಹಾಸಿ ಮಲಗಿಕೊಂಡರೆ ಅಮ್ಮನ ಕತೆಗಳ ಮಹಾಪೂರ ಹರಿಯುತ್ತಿತ್ತು.

ಸಣ್ಣಸಣ್ಣ ಕತೆಗಳು, ಗಾದೆ ಒಗಟುಗಳು ಅವಳ ಬಾಯಿಂದ ಕೇಳಬೇಕು. ನನ್ನ ವಾದ, ತರ್ಕಕ್ಕೆ ಎಂದೂ ತಲೆಬಾಗದ ಅವಳು– "ಬುದ್ಧಿವಂತನಿಗೆ ಮೂರು ಕಡೆ ಅಂತೆ. ಗೊತ್ತಾ ನಿನಗೆ?" ಎಂದು ಕೇಳುತ್ತಿದ್ದಳು.

ಒಬ್ಬ ಬುದ್ಧಿವಂತ ಒಂದು ಬಾರಿ ರಸ್ತೆಯಲ್ಲಿ ಏನನ್ನೋ ತುಳಿದ. ಬುದ್ಧಿವಂತನಲ್ಲವೆ? ಏನು ಎಂದು ಕಾಲೆತ್ತಿ ನೋಡಿದ. ತಿಳಿಯಲಿಲ್ಲ. ಬೆರಳಿಗೆ ಹಚ್ಚಿಕೊಂಡು ಮೂಸಿದ. ಅದು ಮೂಗಿಗೆ ತಾಗಿದಾಗ ಏನು ಅಂತ ತಿಳಿಯಿತು. ಅಷ್ಟು ಹೊತ್ತಿಗೆ ಹೊಲಸನ್ನು ಕಾಲಿಗೆ, ಕೈಬೆರಳಿಗೆ, ಮೂಗಿಗೆ ಬಳಿದುಕೊಂಡಾಗಿತ್ತು. ದಡ್ಡ ಏನೋ ಎಂದು ನೆಲಕ್ಕೆ ಒರೆಸಿ ಹೋಗುತ್ತಾನಾದರೆ, ಬುದ್ಧಿವಂತ ಪರೀಕ್ಷೆ ಮಾಡಲು ಹೋಗಿ ಮೈತುಂಬ ಮಾಡಿಕೊಳ್ಳುತ್ತಾನೆ.

"ಹೀಗೆ ಆಗಬೇಡ..." ಎಂದು ಹೇಳುತ್ತಿದ್ದಳು ಅಮ್ಮ.

ಅಮ್ಮ ಮದುವೆ ಹಾಡುಗಳನ್ನು ಕೂಡ ಹೇಳುತ್ತಿದ್ದಳು. ಕೊಂಕಣಿ ಮದುವೆ ಹಾಡುಗಳ ದೊಡ್ಡ ಭಾಂಡಾರವೇ ಅವಳಲ್ಲಿತ್ತು. ಹಿಂದೆಲ್ಲ ಮದುವೆ ಸಂದರ್ಭದಲ್ಲಿ ಅವಳೂ ಹಾಡುತ್ತಿದ್ದಳಂತೆ. ಆದರೆ ತಂದೆಯವರ ನಿಧನಾನಂತರ ಅವಳು ಹಾಡುವುದನ್ನು ನಿಲ್ಲಿಸಿದಳು. ಮಂಗಳ ಕಾರ್ಯದಲ್ಲಿ ಇಂಥವರು ಭಾಗವಹಿಸುವಂತಿಲ್ಲ ಎಂಬ ನಿಯಮ ಅವಳ ಪ್ರತಿಭೆಗೆ ಅಡ್ಡಿಯಾಗಿತ್ತು.

ಹೀಗೆಂದು ನನ್ನ ಮಕ್ಕಳನ್ನು ತೊಟ್ಟಿಲಲ್ಲಿ ಮಲಗಿಸಿ ತೂಗುವಾಗ ಅವಳು ಕೊಂಕಣಿ ಲಾಲಿ ಪದಗಳನ್ನು ಹೇಳುವುದಿತ್ತು. ನನ್ನ ಮಕ್ಕಳೆಲ್ಲ ನನ್ನಮ್ಮನ ಆರೈಕೆಯಲ್ಲಿಯೇ ಬೆಳೆದವರು. ನನ್ನ ಎರಡನೇ ಮಗನ ಮೇಲೆ ಅವಳಿಗೆ ಅತಿ ಮಮತೆ. ಈತನನ್ನು ಹೆಚ್ಚಿನ ಮುತುವರ್ಜಿಯಿಂದ ನೋಡಿಕೊಳ್ಳುತ್ತಿದ್ದಳು.

ನನ್ನ ಮಕ್ಕಳು ಶಾಲೆಗೆ ಹೊರಟಾಗ ಬಾಗಿಲಲ್ಲಿ ನಿಂತು– "ಮಾಯಿ, ಹೋಗಿಬರತೀನಿ" ಎಂದು ಕೂಗಿ ಹೇಳುವುದು ಒಂದು ಅಭ್ಯಾಸ. ಈಕೆ ಬಾಗಿಲ ವರೆಗೆ ಬಂದು ಅವರನ್ನು ಬೀಳ್ಕೊಡಬೇಕು.

ಅಮ್ಮ ತೀರಿಕೊಂಡಳು. ಮಕ್ಕಳ ಈ ಅಭ್ಯಾಸ ನಿಂತುಹೋಯಿತು.

ಆದರೆ ನನ್ನ ಎರಡನೇ ಮಗ ಒಂದು ಬಾರಿ ಹೇಳಿದ, "ನಾನು ಈಗಲೂ 'ಮಾಯಿ, ಹೋಗಿ ಬರತೀನಿ' ಅಂತ ಹೇಳತೀನಿ".

"ಹೌದಾ...?"

"ಹೌದು... ಮನಸ್ಸಿನಲ್ಲೇ ಹೇಳತೀನಿ... ಮಾಯಿಗೆ ಕೇಳಿಸುತ್ತೆ. ಅಲ್ವಾ?"

"ಹೌದು..." ಎಂದೆ ನಾನು. ಮತ್ತೆ ಏನು ಹೇಳಲಿ?

ನಮ್ಮ ಮನೆಯಲ್ಲಿ ಎಲ್ಲರಿಗೂ ಕತೆ ಕಾದಂಬರಿಗಳನ್ನು ಓದುವ ಹುಚ್ಚು. ನನ್ನ ಅಕ್ಕ ಅಣ್ಣ ಶಾಲಾ ಪುಸ್ತಕ ಭಂಡಾರದಿಂದ ಕಾದಂಬರಿಗಳನ್ನು ತರುತ್ತಿದ್ದರು. ಈ ಪುಸ್ತಕಗಳನ್ನು ಅಮ್ಮನಿಗೆ ಓದಿ ಹೇಳುವ ಕೆಲಸ ನನ್ನ ಪಾಲಿನದು. ನನಗೆ ಬಿಡುವು ಸಿಕ್ಕಾಗ, ಅವಳು ಕೆಲಸ ಮಾಡುವಾಗ ನಾನು ಓದಿ ಹೇಳುತ್ತಿದ್ದೆ. 'ಬೆಟ್ಟದ ಜೀವ', 'ನಿಸರ್ಗ', 'ಮರಳಿ ಮಣ್ಣಿಗೆ', 'ಸಂಧ್ಯಾರಾಗ', 'ಸರ್ವಮಂಗಳ', 'ಪಯಣದ ಹಾದಿಯಲ್ಲಿ' ಹೀಗೆ ಹಲವು ಕಾದಂಬರಿಗಳನ್ನು ನಾನು ಅಮ್ಮನಿಗೆ ಓದಿ ಹೇಳಿದ್ದೆ. ಈ ಓದು ಅಮ್ಮನ ಬೇಸರವನ್ನು ಹೋಗಲಾಡಿಸುತ್ತಿತ್ತು. ಅಮ್ಮ ಕಾದಂಬರಿಗಳನ್ನು ಸವಿಯುತ್ತಿದ್ದಳು. ಎಲ್ಲೋ ಒಂದು ಕಡೆ ನನ್ನ ಮೇಲೂ ಈ ಓದು ಪ್ರಭಾವ ಬೀರಿತು. ಇಂದಿನ ಈ ನನ್ನ ಬೆಳವಣಿಗೆಗೆ ಇದು ನೆರವಾಯಿತು ಅಂದುಕೊಂಡಿದ್ದೇನೆ.

ಅಮ್ಮ ನನ್ನ ಹಿರಿಯ ಅಣ್ಣನನ್ನು ಹೊಟ್ಟೆಯಲ್ಲಿ ಹುಟ್ಟಿದ ಮಗನಂತೆಯೇ ನೋಡಿಕೊಂಡಳು. ಅವರು ಕೂಡ ನಮ್ಮನ್ನೆಲ್ಲ ಚೆನ್ನಾಗಿಯೇ ಕಂಡರು. ನನ್ನ ಮತ್ತೊಬ್ಬ ಅಣ್ಣ ಮೈಸೂರು, ಬೆಂಗಳೂರಿನಲ್ಲಿ ಮನೆ ಮಾಡಿದರು. ಅಮ್ಮ ಕೊನೆಯ ವರೆಗೂ ನನ್ನ ಜೊತೆಗೇನೆ ಉಳಿದರು.

ನನ್ನ ಮದುವೆಯಾಗುವ ಮುನ್ನ ಮನೆಯನ್ನು ಸಂಭಾಳಿಸಿಕೊಂಡು ಹೋಗುತ್ತಿದ್ದಾಕೆ ಅಮ್ಮನೆ. ತಿಂಗಳ ಮೊದಲ ದಿನ ತಿಂಗಳಿಗಾಗುವಷ್ಟು ಸಾಮಾನು ತಂದು ಹಾಕಿ ಅವಳ ಕೈಗಿಷ್ಟು ಹಣ ಹಾಕಿದರೆ ಅವಳು ಎಲ್ಲವನ್ನೂ ನೋಡಿಕೊಂಡು ಹೋಗುತ್ತಿದ್ದಳು. ಒಂದು ಗೊಣಗಾಟವಿಲ್ಲ. ಒಂದು ತಕರಾರಿಲ್ಲ.

ನನ್ನನ್ನು ಚೆನ್ನಾಗಿ ಅರ್ಥ ಮಾಡಿಕೊಂಡವಳು ಅಮ್ಮ.

ನಾನು ಶರಾವತಿ ಯೋಜನೆಯಲ್ಲಿ ಕೆಲಸ ಮಾಡುತ್ತಿದ್ದೆ. ಲಂಚಕ್ಕೆ ಕೈ ಒಡ್ಡಲಿಲ್ಲ. ಸರಕಾರಿ ಸೌಲಭ್ಯಗಳನ್ನು ಬಳಸಿಕೊಳ್ಳಲಿಲ್ಲ. ಸರಕಾರಿ ಲಾರಿಗಳು ಮನೆಮನೆಗೆ ಕಟ್ಟಿಗೆ ತಂದು ಹಾಕುತ್ತಿದ್ದವು. ನಾನು ಮಾತ್ರ ಕಟ್ಟಿಗೆ ಕೊಳ್ಳುತ್ತಿದ್ದೆ. ಇದನ್ನು ಗಮನಿಸಿದ ನನ್ನ ಸ್ನೇಹಿತರೊಬ್ಬರು ಒಂದು ದಿನ ನಮ್ಮ ಮನೆ ಮುಂದೆ ಲಾರಿ ತಂದು ನಿಲ್ಲಿಸಿ ಕಟ್ಟಿಗೆ ಇಳಿಸತೊಡಗಿದರು.

ಅಮ್ಮ ಓಡಿ ಬಂದಳು.

ಯಾರ ಮನೆ? ಯಾರು ಹೇಳಿದ್ದು? ನಮ್ಮ ಹುಡುಗ ಹೀಗೆಲ್ಲ ಕಟ್ಟಿಗೆ ಹಾಕಿಸುವುದಿಲ್ಲ– ಎಂದು ಅಮ್ಮ ಲಾರಿಯವರ ಹತ್ತಿರ ಮಾತನಾಡಿದರೂ ಅವರು ಕಟ್ಟಿಗೆ ಹಾಕಿ ಹೋದರು.

ನಾನು ಮನೆಗೆ ಬಂದ ತಕ್ಷಣ, ಅಮ್ಮ ದೂರು ಹೇಳಿದಳು– "ಬೇಡ ಅಂದರೂ ಹಾಕಿ ಹೋದರು."

ನಾನೂ ಪೇಚಾಡಿಕೊಂಡೆ.

ಮಾರನೇ ದಿನ ನನ್ನ ಸ್ನೇಹಿತರು ಸಿಕ್ಕವರು ಹೇಳಿದರು– "ತಾಯಿ ಮಗ ಸರಿ ಇದ್ದೀರಾ..." ಎಂದವರು ತಲೆದೂಗಿದರು.

ಶರಾವತಿ ಯೋಜನಾ ಪ್ರದೇಶದಲ್ಲಿ ನಾನು ಸ್ನೇಹಿತರ ಜೊತೆ ಸೇರಿ ನಾಟಕವಾಡಿದ್ದೆ. ನಾಟಕ ಮುಗಿಸಿ ಮನೆಗೆ ಬಂದರೆ ಅಮ್ಮ ಬಾಗಿಲಲ್ಲಿ ನನ್ನನ್ನು ನಿಲ್ಲಿಸಿ ದೃಷ್ಟಿ ತೆಗೆಯುತ್ತಿದ್ದಳು.

"ಅಮ್ಮ, ಇದೆಲ್ಲ ಏನು?" ಎಂದು ನಾನು ಸಿಡುಕುತ್ತಿದ್ದೆ.

ಈ ಮಾತು ಅವಳ ಕಿವಿಗೇನೆ ಬೀಳುತ್ತಿರಲಿಲ್ಲ.

ನಾನು ಲೇಖಕನೂ ಆದೆ. ಪುಸ್ತಕಗಳು ಹೊರಬಂದವು. ಅಮ್ಮ ಈ ನನ್ನ ಪುಸ್ತಕಗಳನ್ನು ಪ್ರೀತಿ ಅಭಿಮಾನದಿಂದ ಸವರಿ ನೋಡುತ್ತಿದ್ದಳು.

ನಾನು ಚರ್ಚಿಗೆ ಹೋಗುತ್ತಿರಲಿಲ್ಲ. ಕತೆ ಕಾದಂಬರಿಗಳಲ್ಲಿ ಪಾದರಿಗಳನ್ನು ಟೀಕಿಸುತ್ತಿದ್ದೆ. ಪಾದರಿಗಳು ಅಮ್ಮನನ್ನು ಆಗಾಗ್ಗೆ ತರಾಟೆಗೆ ತೆಗೆದುಕೊಳ್ಳುತ್ತಿದ್ದರು. ಜನ –"ಏನು ನಿನ್ನ ಮಗ ಹೀಗೆ?" ಎಂದು ಅಮ್ಮನನ್ನು ಕೇಳುತ್ತಿದ್ದರು.

ಅಮ್ಮ ಎಂದೂ ನನ್ನನ್ನು ಏಕೆ ಹೀಗೆ?– ಎಂದು ಕೇಳಲಿಲ್ಲ.

ನನ್ನ ಆತ್ಮೀಯರೊಬ್ಬರ ಹತ್ತಿರ ಅಮ್ಮ ಹೇಳಿದ್ದಳಂತೆ– "ನನ್ನ ಮಗ ತಪ್ಪು ಮಾಡತಿದಾನೆ ಅಂತ ನನಗೆ ಅನಿಸೋದಿಲ್ಲ..."

ಅಮ್ಮ ಕೊಂಡ ನಿವೇಶನದ ಬಗ್ಗೆ ನಾನು ಹೇಳಿದ್ದೇನೆ.

ಈ ನಿವೇಶನದ ಮೇಲೆ ಮನೆ ಕಟ್ಟಿಸಲು ಹೊರಟೆ.

ಸಾಲ ಮಾಡದೆ ಮನೆ ಕಟ್ಟಬೇಕು ಅನ್ನುವ ನನ್ನ ಯತ್ನ ಯಶಸ್ವಿಯಾಗಲಿಲ್ಲ. ಮನೆ ಸರಳವಾಗಿರಬೇಕು ಎಂದು ಯತ್ನಿಸಿದರೂ ಬಜೆಟ್ಟು ಕೈಮೀರಿ ಹೋಯಿತು. ನನ್ನ ಹೆಂಡತಿಯ ಬಂಗಾರವನ್ನು ಅಡವಿರಿಸಿ ಸಾಲ ತಂದು ಮನೆ ಕೆಲಸ ಮುಂದುವರಿಸಿದೆ.

ಇದೇ ಸಂದರ್ಭದಲ್ಲಿ ಯಾರೋ ನನ್ನ ಸ್ನೇಹಿತರು ಅಮ್ಮನಿಗೆ ಕುಟುಂಬ ನಿವೃತ್ತಿವೇತನ ಬರುತ್ತದೆಯೆ ಎಂದು ಕೇಳಿದರು. ಆ ಬಗೆಯ ಯಾವುದೇ ವೇತನವೂ ಸರಕಾರದಿಂದ ಅಮ್ಮನಿಗೆ ಬರುತ್ತಿರಲಿಲ್ಲ. ಇಲ್ಲ ಎಂದಾಗ ಅವರು ಅರ್ಜಿ ಹಾಕಿಕೊಳ್ಳಲು ಹೇಳಿದರು.

ಎಲ್ಲ ದಾಖಲೆಗಳನ್ನು ಹೊಂದಿಸಿಕೊಂಡು ಅರ್ಜಿ ಹಾಕಿದೆ.

ನಮ್ಮ ತಂದೆಯವರು ತೀರಿಕೊಂಡ ತಿಂಗಳಿನಿಂದ ಈ ವರೆಗೆ ಲೆಕ್ಕ ಹಾಕಿ ಸರಕಾರ ಕೆಲ ಸಾವಿರ ರುಪಾಯಿಗಳನ್ನು ಅಮ್ಮನಿಗೆ ನೀಡಿತು.

ಬ್ಯಾಂಕಿನವರು ಕೊಟ್ಟ ಅಷ್ಟೂ ಹಣವನ್ನು ಅಮ್ಮ ನನ್ನ ಕೈಗಿತ್ತಳು.

"ಮೊದಲು ಬಂಗಾರ ಬಿಡಿಸಿಕೋ" ಎಂದಳು.

ತಂದೆಯವರ ಇನ್ಸೂರೆನ್ಸ್ ಹಣದಲ್ಲಿ ಅಮ್ಮ ಈ ನಿವೇಶನ ಕೊಂಡಿದ್ದಳು. ಅದನ್ನು ನನ್ನ ಹೆಸರಿಗೆ ಮಾಡಿದ್ದಳು. ಮನೆ ಕಟ್ಟಲು ತಂದೆಯವರ ಪೆನ್‌ಷನ್ ಹಣವೂ ನೆರವಾಯಿತು.

ತಂದೆಯವರು ಬಹಳ ಹಿಂದೆ ತೀರಿಕೊಂಡರು. ಅಮ್ಮ ಕೆಲ ವರುಷಗಳ ಹಿಂದೆ.

"ನಾನು" ಅನ್ನುವುದರಲ್ಲಿ ತಂದೆಯವರ ಪಾಲೆಷ್ಟು ಅಮ್ಮನ ಪಾಲೆಷ್ಟು ಎಂದು ವಿಚಾರ ಮಾಡಿದಾಗ ನಾನು ಮೂಕನಾಗುತ್ತೇನೆ.

ಈ ಇಬ್ಬರಿಗೂ ಕೃತಜ್ಞತೆ ಸಲ್ಲಿಸುವುದು ಹೇಗೆ?

■ ನಾ. ಡಿಸೋಜ : ೧೫/೧೪, ೨ನೇ ಕ್ರಾಸ್, ನೆಹರೂ ನಗರ, ಸಾಗರ-೫೭೭ ೪೦೧ ■

ಎರಡು ಕವಿತೆಗಳು

ಶಂಕರಗೌಡ ಸಾತ್ಮಾರ

೧. ವೇಳೆ ಎಲ್ಲಿದೆ ?

ನನಗೆ ಮಾಡುವುದಕ್ಕೆ ಬೇಕಾದಷ್ಟು
ಜವಾಬ್ದಾರಿ ಕೆಲಸಗಳುಂಟು
ದ್ವೇಷ-ಅಸೂಯೆ ಮಾಡುವುದಕ್ಕೆ
ಹಗೆತನ-ಸೇಡು ಸಾಧಿಸುವುದಕೆ
ವೇಳೆ ಎಲ್ಲಿದೆ?

ನನಗೆ ಮಾಡುವುದಕ್ಕೆ ಬೇಕಾದಷ್ಟು
ಸಂಪನ್ನ ಕೆಲಸಗಳುಂಟು
ಚಾಡಿ ಹೇಳುವುದಕ್ಕೆ
ಸುಳ್ಳು ಸುದ್ದಿ ಹರಡುವುದಕ್ಕೆ
ವೇಳೆ ಎಲ್ಲಿದೆ?

ನನಗೆ ಮಾಡುವುದಕ್ಕೆ ಬೇಕಾದಷ್ಟು
ಸುಂದರ ಕೆಲಸಗಳುಂಟು
ಮೋಸ-ವಂಚನೆ ಮಾಡುವುದಕ್ಕೆ
ದ್ರೋಹ ಬಗೆಯುವುದಕ್ಕೆ
ವೇಳೆ ಎಲ್ಲಿದೆ?

೨. ಕಾಣುತ್ತಾರೆ

ಈಗ ಇಲ್ಲಿ ಯಾರನ್ನು ಕಂಡರೂ
ಏನನ್ನೊ ಕಳಕೊಂಡವರಂತೆ
ಕಾಣುತ್ತಾರೆ
ಮೈ-ಕೈ ಪರಚಿಕೊಂಡು
ತಲೆ ಕೆದರಿಕೊಂಡು
ಕಾಲು ಎಳಕೊಂಡು
ದಿಕ್ಕು-ದಿಕ್ಕುಗಳಲ್ಲಿ ದಿಕ್ಕೆಟ್ಟು ಹುಡುಕುತ್ತ
ಹೊರಟವರಂತೆ ಕಾಣುತ್ತಾರೆ.

■ ಶಂಕರಗೌಡ ಸಾತ್ಮಾರ : ಅ.ಶ್ರೇ.ಇಂಗ್ಲಿಶ್‌ಉಪನ್ಯಾಸಕ, ಸ.ಪ್ರ.ದ.ಕಾಲೇಜು, ಮುಂಡಗೋಡ ■

ದ್ರಾವಿಡ ಸಂಬಂಧ-೬ — ಷ. ಶೆಟ್ಟರ್

ಕ್ರಿಸ್ತಪೂರ್ವದ ದಕ್ಷಿಣ ಭಾರತವನ್ನು ಬೆಸೆದ ಬ್ರಾಹ್ಮೀ ಲಿಪಿ

ಕ್ರಿ.ಪೂ. ಸು. ೩ನೆಯ ಶತಮಾನದಿಂದ ಕ್ರಿ.ಶ. ಸು. ೩ನೆಯ ಶತಮಾನದ ಕಾಲಾವಧಿಯಲ್ಲಿ, ಶ್ರೀಲಂಕಾವನ್ನು ಒಳಗೊಂಡು ದಕ್ಷಿಣ ಭಾರತವನ್ನು ಬೆಸೆದ ಏಕೈಕ ಮಾಧ್ಯಮವೆಂದರೆ ಬ್ರಾಹ್ಮೀ ಲಿಪಿ. ಇದಕ್ಕೆ ಪ್ರಧಾನ ಕಾರಣಪುರುಷ, ಮೌರ್ಯ ಸಮ್ರಾಟ ಅಶೋಕ.

ಮೌರ್ಯರ ಆಳ್ವಿಕೆಗಿಂತ ಮುಂಚೆ ಭರತಖಂಡವು ಲಿಪಿಶೂನ್ಯವಾಗಿತ್ತೆಂಬುದು ಈಗಿನ ಸ್ಥೂಲ ಅಭಿಪ್ರಾಯ.[1] ಅಂದಿನ ವಾಯುವ್ಯ ಭಾರತದಲ್ಲಿ ಮಾತ್ರ ಅರಾಮ್ಯಕ್ ಮತ್ತು ಗ್ರೀಕ್ ಲಿಪಿ ಮತ್ತು ಭಾಷೆಗಳು ಬಳಕೆಯಲ್ಲಿದ್ದವು: ಇವುಗಳಲ್ಲಿ ಮೊದಲನೆಯದನ್ನು ಅನುಕರಿಸಿ ಅಶೋಕನ ಕಾಲದಲ್ಲಿ ಖರೋಷ್ಠೀ ರೂಪಗೊಂಡಿತೆಂದು, ಇದರಿಂದ ಸ್ಫೂರ್ತಿ ಪಡೆದುಕೊಂಡು ಅಥವಾ ಮತ್ತಿನ್ನಾವುದೋ ಸ್ವತಂತ್ರ ಕಾರಣದಿಂದ ಬ್ರಾಹ್ಮೀ ಜನಿಸಿತೆಂದು ವಾದಿಸಲಾಗಿದೆ. ಬ್ರಾಹ್ಮೀಯನ್ನು ಸಮರ್ಥವಾಗಿ ಬಳಸಿದ ಪ್ರಪ್ರಥಮರಲ್ಲಿ ಆದಿನಾಥ ಮತ್ತು ಗೌತಮ ಬುದ್ಧನನ್ನು ಜೈನ ಮತ್ತು ಬೌದ್ಧ ಐತಿಹ್ಯಗಳು ಕಂಡುಕೊಂಡಿರುವುವು. ಇದುವರೆಗೂ ದೊರೆತ ಈ ಲಿಪಿಯ ಅತ್ಯಂತ ಪುರಾತನ ಕುರುಹು ಇರುವುದು ಶ್ರೀಲಂಕಾದಲ್ಲಿ. ಇದರ ಕಾಲ ಸುಮಾರು ಕ್ರಿ.ಪೂ. ೫-೪ನೆಯ ಶತಮಾನ.[2] 'ಬ್ರಾಹ್ಮೀ' ಪದದ ಬಳಕೆ ಮೊದಲು ಬರುವುದು ಕ್ರಿ.ಶ. ೩ನೆಯ ಶತಮಾನದ್ದೆನ್ನಲಾದ ಬೌದ್ಧ ಗ್ರಂಥ 'ಲಲಿತ ವಿಸ್ತರ'ದಲ್ಲಿ. ಬೋಧಿಸತ್ತ್ವ ಸಿದ್ಧಾರ್ಥ ಗೌತಮನು ಕಲಿತ ಲಿಪಿಗಳಲ್ಲಿ ಬ್ರಾಹ್ಮೀ ಮೊದಲಿನದಾಗಿತ್ತೆಂದು ಇಲ್ಲಿ ಹೇಳಲಾಗಿದೆ.[3]

ಬ್ರಾಹ್ಮೀ ಒಂದು ಲಿಪಿ ಮಾತ್ರ, ಭಾಷೆಯಲ್ಲ. ಇದು ಹುಟ್ಟಿದ್ದೇ ಪ್ರಾಕೃತ ಭಾಷೆಯ ವಾಹನವಾಗಲು. ಈ ಎರಡು ಮಾಧ್ಯಮಗಳು ಭಾರತದಲ್ಲಿ ತಮ್ಮ ಸಾರ್ವಭೌಮತ್ವವನ್ನು ಸುಮಾರು ೬೦೦ ವರ್ಷ(ಕ್ರಿ.ಪೂ. ೩ರಿಂದ ಕ್ರಿ.ಶ. ೩. ಶತಕಗಳ ವರೆಗೆ)ಕಾಲ ಮೆರೆದವು. ಅಶೋಕಪೂರ್ವ ಕಾಲದಲ್ಲಿ ಸೀಮಿತ ಕ್ಷೇತ್ರದಲ್ಲಿ, ಅಪರೂಪವಾಗಿ ಮಾತ್ರ, ಬಳಕೆಯಾಗಿರಬಹುದಾಗಿದ್ದ ಬ್ರಾಹ್ಮೀ ಲಿಪಿ ಅವನ ಆಳ್ವಿಕೆಯ ಎರಡು ದಶಕಗಳಲ್ಲಿ(ಕ್ರಿ.ಪೂ. ೨೬೯-೨೩೨) ಆಗ್ನೇಯ-ಏಸಿಯಾದ ಬಹುಭಾಗವನ್ನು ಬೆಸೆಯುವ ಮಾಧ್ಯಮವಾಯಿತು. ತನ್ನ ಧರ್ಮ ಪ್ರಸಾರ ಮತ್ತು ನೀತಿಬೋಧನೆಗೆ ಅಶೋಕನು ಇದನ್ನು ಶಾಸನಗಳಲ್ಲಿ ಬಳಸಿದ್ದು ಇದಕ್ಕೆ ಕಾರಣವಾಯಿತೆನ್ನಬಹುದು.

ಪೇಶಾವರ ಬಳಿಯ ಬುನೇರ್‌ನಿಂದ ದಖ್ಖಿಣ(ಕರ್ನಾಟಕ)ದ ಬ್ರಹ್ಮಗಿರಿಯ ವರೆಗಿನ ವಿಶಾಲ ಪ್ರದೇಶದಲ್ಲಿ ಕೊರೆಸಿದ ಶಾಸನಗಳಲ್ಲಿ ಪ್ರಾಕೃತ ಭಾಷೆಯನ್ನೂ ಬ್ರಾಹ್ಮೀ ಲಿಪಿಯನ್ನೂ ಅಶೋಕ ಬಳಸಿದನಲ್ಲದೆ, ಸರಿಸುಮಾರು ಇದೇ ಕಾಲಾವಧಿಯಲ್ಲಿ ಸಿಂಹಳದಲ್ಲಿ ಇವು ಪ್ರಸಾರಕ್ಕೆ ಬರಲು ಪರೋಕ್ಷವಾಗಿ ಕಾರಣನಾದನು. ಇವನ ಶಾಸನಗಳಿಂದ ವಂಚಿತವಾದ ಪ್ರದೇಶದಲ್ಲಿ ಸಿಂಧೂ ಕೊಳ್ಳ (ತಕ್ಷಶಿಲೆಯಿಂದ ಗಿರಿನಾರ್ ಪ್ರದೇಶ) ಮತ್ತು ನರ್ಮದಾ-ಕೃಷ್ಣಾ ವಲಯ(ಪುಂಗರಿಯದಿಂದ ಸಣ್ಣತಿ)ಗಳು ಎದ್ದುಕಾಣುತ್ತಿದ್ದರೂ ಇವು ಅಶೋಕನ ಆಳ್ವಿಕೆ

ಯಿಂದ ಮತ್ತು ಪ್ರಾಕೃತ ಭಾಷೆಯಿಂದ ಸಂಪೂರ್ಣ ಮುಕ್ತವಾಗಿದ್ದವೆಂದು ಭಾವಿಸಲಾಗದು. ಅವರೆ ಬ್ರಹ್ಮಗಿರಿಯಿಂದ ಕನ್ಯಾಕುಮಾರಿ ವರೆಗಿನ ದಕ್ಷಿಣ ಭೂಭಾಗವು ಅವನ ಆಳ್ವಿಕೆಯಿಂದಲೂ ವ್ಯಾವಹಾರಿಕ ವಲಯದಿಂದಲೂ ಸಂಪೂರ್ಣವಾಗಿ ಮುಕ್ತವಾಗಿತ್ತೆನ್ನಲು ಅನುಮಾನಪಡಬೇಕಿಲ್ಲ.

ಅಕ್ಷರಸ್ಥ ಸಮಾಜದ ನಿರ್ಮಾಣ : ಮೌರ್ಯ ಸಾಮ್ರಾಜ್ಯದ ಹೊರವಲಯದ ಜನಾಂಗಗಳಲ್ಲಿ ಅಶೋಕನ ಭಾಷಾನೀತಿಯಿಂದ ಅತಿ ಹೆಚ್ಚು ಲಾಭ ಪಡೆದುಕೊಂಡವರು ಇಂದಿನ ಉತ್ತರ ಮತ್ತು ಮಧ್ಯ ಕರ್ನಾಟಕ ಮತ್ತು ಇದಕ್ಕೆ ಹೊಂದಿಕೊಂಡಿರುವ ಆಂಧ್ರ ಪ್ರದೇಶದ ಜನಾಂಗಗಳು. ಯಾರನ್ನು ತಮಿಳಿನ ಶಂಕಂ ಸಾಹಿತ್ಯದಲ್ಲಿ 'ವಡುಗರು' ಎಂದು ಹೆಸರಿಸಲಾಗಿದೆಯೋ ಅವರೇ ಇವರು. ಅಶೋಕನ ಸುಮಾರು ಮೂರು ಡಜನ್ ಬ್ರಾಹ್ಮೀ ಶಾಸನಗಳನ್ನು ಅವನು ಬಳಸಿದ ಶಿಲೆಯ ಆಧಾರದ ಮೇಲೆ ವಿಂಗಡಿಸಿದರೆ, ಅವು ಕಬ್ಬಂಡೆ, ಹೆಬ್ಬಂಡೆ, ಗುಹಾ, ಫಲಕ ಮತ್ತು ಸ್ತಂಭ ಎಂಬ ಐದು ವರ್ಗಗಳಡಿ ಬರುವುವು. ಕಬ್ಬಂಡೆ ಶಾಸನಗಳನ್ನು ಇವನು ಮೊಟ್ಟಮೊದಲು ಕೊರೆಸಿದನೆಂಬುದಕ್ಕೆ ಸರ್ವಮಾನ್ಯತೆ ದೊರಕಿರುವುದರಿಂದ, ಈ ಶಾಸನಗಳ ಮೂಲಕವೇ ಬ್ರಾಹ್ಮೀ ಲಿಪಿಯನ್ನೂ ಪ್ರಾಕೃತ ಭಾಷೆಯನ್ನೂ ಅವನು ದೇಶದ ವಿವಿಧ ಕೇಂದ್ರಗಳಿಗೆ ಮೊದಲು ತಲುಪಿಸಿದನೆನ್ನಬಹುದು. ಇವನ ಒಟ್ಟು ೧೮ ಕಬ್ಬಂಡೆ ಶಾಸನಗಳು ಇಲ್ಲಿಯ ವರೆಗೂ ಲಭ್ಯವಾಗಿದ್ದು, ಅವುಗಳಲ್ಲಿ ೯ (ಅಂದರೆ ೫೦%) ಕರ್ನಾಟಕದಲ್ಲಿ ಮತ್ತು ಇನ್ನೆರಡು ಆಂಧ್ರಪ್ರದೇಶದ ಗಡಿಜಿಲ್ಲೆಗಳಲ್ಲಿ ದೊರಕಿವೆ. ಇಂದಿನ ಭಾಷಾ ಮತ್ತು ರಾಜಕೀಯ ಗಡಿರೇಖೆಗಳನ್ನು ಅಳಿಸಿ ನೋಡಿದರೆ, ಈ ಹನ್ನೊಂದು ಶಾಸನಗಳು ಒಂದು ನಿರ್ದಿಷ್ಟ ಪ್ರದೇಶವನ್ನು ಹಂಚಿಕೊಂಡು, ಕೈಕೈ ಜೋಡಿಸಿ ನಿಂತಂತೆ ಕಾಣುವುವು. ಅಂದರೆ, ಚಾರಿತ್ರಿಕ ಯುಗದ ಆರಂಭಕಾಲದಲ್ಲಿ ಲಿಪಿ-ಭಾಷಾ ಮಾಧ್ಯಮಗಳನ್ನು ಅತ್ಯಂತ ಹೆಚ್ಚಿನ ಪ್ರಮಾಣದಲ್ಲಿ ಪಡೆದುಕೊಂಡ ಹಿರಿಮೆ ಇಂದಿನ ಕರ್ನಾಟಕದ್ದಾಗಿತ್ತೆಂದು ಅರ್ಥ. ಇಂತಹ ಸೀಮಿತ ಪ್ರದೇಶದಲ್ಲಿ ಇಷ್ಟೊಂದು ದೊಡ್ಡ ಸಂಖ್ಯೆಯಲ್ಲಿ ಈ ಶಾಸನಗಳನ್ನು ಕೊರೆಸಲು ಅಶೋಕನಿಗೆ ಪ್ರಬಲವಾದ ಕಾರಣಗಳಿರಬೇಕೆನಿಸುವುದು, ಆದರೆ ಅದು ಧರ್ಮಪ್ರಸಾರವಂತೂ ಆಗಿರಲಿಲ್ಲ, ಏಕೆಂದರೆ ಕಬ್ಬಂಡೆ ಶಾಸನಗಳ ಮೂಲೋದ್ದೇಶ ಧರ್ಮಪ್ರಸಾರವಾಗಿರಲಿಲ್ಲ.

ಅನೇಕ ಲಿಪಿರಹಿತ ಭಾಷೆಗಳಿಗೆ ಅಪಾರ ಪುರಾತನತ್ವವಿರುವುದನ್ನು ನಾವು ಇತಿಹಾಸದಲ್ಲಿ ಕಾಣುವೆವು. ಲಿಪಿಯ ಸೌಲತ್ತಿಲ್ಲದೆ ಭಾಷೆಗಳನ್ನು ಅತ್ಯಂತ ಎತ್ತರಕ್ಕೆ ಏರಿಸಿದ ನಿದರ್ಶನಗಳಿಗೂ ಕೊರತೆ ಇಲ್ಲ. ಮೌಖಿಕ ಮಾಧ್ಯಮದಿಂದಲೇ ಇಂತಹ ಮಟ್ಟವನ್ನು ಮುಟ್ಟಿದ ಭಾಷೆಗಳಲ್ಲಿ ಎರಡು ನಿದರ್ಶನಗಳನ್ನು ಕೊಡಬಹುದಾದರೆ, ಅವು ಸಹಜವಾಗಿ ವೈದಿಕ ಸಂಸ್ಕೃತ ಮತ್ತು ಶಂಗಂ ತಮಿಳಿಗೆ ಸಲ್ಲುವುವು, ಆದರೆ ಈ ಎರಡು ಭಾಷೆಗಳೂ ಲಿಪಿ ಗಳಿಸಿಕೊಳ್ಳುವುದಕ್ಕೆ ಬಹುಕಾಲ ಮುಂಚೆಯೇ ಪ್ರಾಕೃತ ಭಾಷೆ ಬ್ರಾಹ್ಮೀ ಲಿಪಿಯನ್ನು ಗಳಿಸಿಕೊಂಡದ್ದು ಮತ್ತು ಅದು ಗೌತಮ ಬುದ್ಧ ಮತ್ತು ವರ್ಧಮಾನ ಮಹಾವೀರರಂತಹ ಚಿಂತಕರ ಲೇಖನ-ಬೋಧನ ಮಾಧ್ಯಮವೂ ಮೌರ್ಯ ಸಾಮ್ರಾಜ್ಯದ ವ್ಯವಹಾರ ಮಾಧ್ಯಮವೂ ಆದದ್ದು ಗಮನಾರ್ಹ. ಪೂರ್ವೋತ್ತರ ಭಾರತದಿಂದ ಚಲಿಸಿ ಬಂದ ಈ ಅಪರೂಪದ ಮಾಧ್ಯಮಗಳನ್ನು ಒಪ್ಪಿ ಒಗ್ಗೂಡಿಸಿಕೊಂಡ ದಖ್ಖಣದ ಜನಾಂಗಗಳು ಸಹಜವಾಗಿ ಅಂದಿನ ಅಕ್ಷರಸ್ಥ

ಸಮಾಜದಲ್ಲಿ ಸೇರಿಕೊಂಡವು; ಇವನ್ನು ನಿರ್ಲಕ್ಷಿಸಿದವರು ಇಲ್ಲವೇ ಪ್ರತಿರೋಧಿಸಿದವರು ಅಷ್ಟೇ ಸಹಜವಾಗಿ ಲಿಪಿರಹಿತ ಜನಾಂಗಗಳಾಗಿ ಉಳಿದುಕೊಂಡರು. ಆರಂಭಕಾಲದ ದಕ್ಷಿಣ ಭಾರತದ ಇತಿಹಾಸದಲ್ಲಿ ಈ ಮಾಧ್ಯಮಗಳಿಂದ ವಂಚಿತರಾದವರಲ್ಲಿ ಎದ್ದು ಕಾಣುವವರು ತಮಿಳರು. ಒಂದು ಅಖಂಡ ಭೂಭಾಗದ ಅಂಗವಾಗಿಯೂ ಈ ಕಾರಣದಿಂದಾಗಿ ತಮಿಳಹಂ ಆಗ್ನೇಯ ಏಸ್ಯಿಯಾದಲ್ಲಿ ಲಿಪಿಶೂನ್ಯ ದ್ವೀಪವಾಗಿ ಉಳಿಯಿತು; ಭೌಗೋಳಿಕವಾಗಿ ಒಂದು ಪ್ರತ್ಯೇಕ ದ್ವೀಪವಾಗಿದ್ದರೂ ಲಿಪಿಸಂಬಂಧ ಬೆಳೆಸಿಕೊಂಡ ಕಾರಣ ಅಂದಿನ ಸಿಂಹಳವು (ಶ್ರೀಲಂಕಾ) ಬೃಹತ್ ಭರತಖಂಡದ ಅಕ್ಷರಸ್ಥ ಸಮಾಜದೊಡನೆ ಬೆಸೆದುಕೊಂಡಿತು.

ಸಿಂಹಳ ಮತ್ತು ತಮಿಳಹಂಗಳನ್ನು ಬ್ರಾಹ್ಮೀ ಬರಹ ತಲುಪುವುದಕ್ಕಿಂತ ಮುಂಚೆಯೇ ಕರ್ನಾಟಕ ಮತ್ತು ಆಂಧ್ರ ಪ್ರದೇಶಗಳಲ್ಲಿ ಈ ಲಿಪಿಯ ವ್ಯವಹಾರವು ಭದ್ರ ನೆಲೆಯನ್ನು ಕಂಡುಕೊಂಡಿತ್ತು. ಆರಂಭಕಾಲದಲ್ಲಿ ಇಲ್ಲಿ ಬಳಸಿದ ಲಿಪಿಗೆ ಒಂದು ವಿಶಿಷ್ಟ ಪ್ರಾದೇಶಿಕ ಮುದ್ರೆ ಇದ್ದುದರಿಂದ ಶಾಸನತಜ್ಞರು ಅದನ್ನು 'ದಕ್ಷಿಣಬ್ರಾಹ್ಮೀ' ಎಂಬ ಹೆಸರಿನಿಂದ ಗುರುತಿಸಿದರು. ದಖ್ಖಿಣ(ಕರ್ನಾಟಕ-ಆಂಧ್ರ)ಕ್ಕೆ ಮಾತ್ರ ಸೀಮಿತವಾಗಿರುವ ಈ ಲಿಪಿ ಪ್ರಭೇದವನ್ನು, ಕರ್ನಾಟಕಾಂಧ್ರ ಬ್ರಾಹ್ಮೀ ಎಂದು ಕರೆದಿದ್ದರೆ 'ತಮಿಳುಬ್ರಾಹ್ಮೀ' ಎಂದು ಕರೆದಷ್ಟೇ ಸಮಂಜಸವಾಗಿರುತ್ತಿತ್ತೇನೋ! ಇದು ಏನೇ ಇರಲಿ, 'ಬ್ರಾಹ್ಮೀ', 'ತಮಿಳುಬ್ರಾಹ್ಮೀ', 'ಸಿಂಹಳ-ಬ್ರಾಹ್ಮೀ', 'ದಕ್ಷಿಣ ಬ್ರಾಹ್ಮೀ', ಈ ಮುಂತಾದ ಪದಗಳಿಗೆ ಯಾವ ಆಕರಗಳ (ಬೌದ್ಧ -ಜೈನಗ್ರಂಥಗಳ, ಘಟನಾವಳಿಗಳ ಮತ್ತು ಶಾಸನಗಳ) ಬಲವೂ ಇಲ್ಲ. ಬಹುಕಾಲ ಸವಾಲಾಗಿದ್ದ ಅಶೋಕನ ಶಾಸನಗಳನ್ನು ಜೇಮ್ಸ್ ಪ್ರಿನ್ಸೆಪ್ ಓದುವ ವಿಜ್ಞಾನವನ್ನು ಕಂಡುಹಿಡಿದಾಗ, ಗೌತಮ ಬುದ್ಧನು ಕಲಿತನೆನ್ನಲಾದ ಮೊದಲ ಲಿಪಿ 'ಬ್ರಾಹ್ಮೀ'ಯೇ ಇದಾಗಿರಬಹುದೆಂದು ಊಹಿಸಿ, ಇವನ್ನು ಬ್ರಾಹ್ಮೀ ಲಿಪಿಯ ಶಾಸನಗಳೆಂದು ಬಗೆದುದು ಒಂದು ಆಕಸ್ಮಿಕ.

ದಖ್ಖಿಣವನ್ನು ಪ್ರವೇಶಿಸಿದ ಪ್ರಾಕೃತ ಜನಾಂಗ : ಅಶೋಕನು ದಖ್ಖಿಣದಲ್ಲಿ ಶಾಸನಗಳನ್ನು ಕಂಡರಿಸುವುದಕ್ಕಿಂತ ಬಹುಕಾಲ ಮುಂಚೆಯೇ ಉತ್ತರದ ಪ್ರಾಕೃತ ಭಾಷಾಜನಾಂಗಗಳು ಇಂದಿನ ಆಂಧ್ರ ಮತ್ತು ಕರ್ನಾಟಕದ ಕೆಲವು ಕೇಂದ್ರಗಳನ್ನು ತಲುಪಿದ್ದವೆಂಬುದಕ್ಕೆ ಎರಡು ಪ್ರಬಲ ಐತಿಹ್ಯಗಳಿವೆ. ಇವುಗಳಲ್ಲಿ ಒಂದು ಬೌದ್ಧ ಧರ್ಮಕ್ಕೆ ಸಂಬಂಧಿಸಿದರೆ ಮತ್ತೊಂದು ಜೈನ ಧರ್ಮಕ್ಕೆ ಸಂಬಂಧಿಸಿದೆ. ಮೊದಲನೆಯದು ಬೌದ್ಧರು ಆಂಧ್ರ ಪ್ರದೇಶದಲ್ಲಿ ಕ್ರಿ.ಪೂ. ೬-೫ ನೆಯ ಶತಮಾನದಲ್ಲಿ ನೆಲೆ ಕಂಡುಕೊಂಡದ್ದನ್ನು, ಎರಡನೆಯದು ಜೈನರು ಕರ್ನಾಟಕದಲ್ಲಿ ಕ್ರಿ.ಪೂ. ೪-೩.ನೆಯ ಶತಮಾನದಲ್ಲಿ ಸ್ಥಾನ ಪಡೆದುಕೊಂಡದ್ದನ್ನು ತಿಳಿಸುವುವು. ಈ ಐತಿಹ್ಯಗಳನ್ನು ಲಘುವಾಗಿ ಪರಿಗಣಿಸುವಂತಿಲ್ಲ, ಏಕೆಂದರೆ ಇವನ್ನು ಪೋಷಿಸುವ ಪುರಾತನ ಕಾಲದ ಮಹತ್ವದ ದಾಖಲೆಗಳಿವೆ.

ಬೌದ್ಧ ಐತಿಹ್ಯದಂತೆ, ಸ್ವತಃ ಬುದ್ಧನು ಧಾನ್ಯಕಟಕವನ್ನು ಸಂದರ್ಶಿಸಿ ಇಲ್ಲಿ ತನ್ನ ತತ್ತ್ವವನ್ನು ಬೋಧಿಸಿದನು. ಅಮರಾವತಿ(ಅಂದಿನ ಧಾನ್ಯಕಟಕ)ಯ ಮಹಾಚೈತ್ಯದ ಪೂರ್ವ ದ್ವಾರದ ಭಗ್ನಾವಶೇಷಗಳಲ್ಲಿ ಪಾಲೀ ಭಾಷೆಯ ಒಂದು ಶಾಸನವೂ ಬುದ್ಧನು ಬೋಧಿಸುವ ಪ್ರಸಂಗವನ್ನು ಸೆರೆಹಿಡಿದ ಉಬ್ಬುಶಿಲ್ಪಗಳ ಒಂದು ಚತುರ್ಮುಖ ಸ್ತಂಭಫಲಕವೂ ದೊರಕಿರುವುವು. ರಾಜಗೃಹ, ಧಾನ್ಯಕಟಕ, ಶ್ರಾವಸ್ತೀ, ಕುಶೀನಗರಗಳಲ್ಲಿ ಸಂಭವಿಸಿದ ಬುದ್ಧನ ಜೀವನದ ಪ್ರಮುಖ ಘಟನೆಗಳನ್ನು ಈ ಸ್ತಂಭದ ನಾಲ್ಕು ಮುಖಗಳಲ್ಲಿ ಕೆತ್ತಲಾಗಿದೆ. ಅಲ್ಲದೆ 'ದಮ್ಮಾಕಡ

ವಂದನಾಮಗೋತಿ' ಎಂದು ಬ್ರಾಹ್ಮೀ ಲಿಪಿಯಲ್ಲಿ ಧಾನ್ಯಕಟಕ ಘಟನೆಯನ್ನು ಸ್ಪಷ್ಟವಾಗಿ ಗುರುತಿಸಲಾಗಿದೆ. ಈ ಶಿಲ್ಪದಲ್ಲಿ ಕೃಷ್ಣಾನದಿ ಪೂರ್ವೋತ್ತರದೆಡೆ ತಿರುಗುವುದನ್ನೂ, ಈ ನದಿಯಲ್ಲಿ ಪುಷ್ಪ-ಪಾದುಕೆಗಳನ್ನು (ಬುದ್ಧನು ಇಲ್ಲಿಗೆ ಬಂದ ಸಂಕೇತ) ಪ್ರದರ್ಶಿಸಿರುವುದನ್ನೂ ಕಾಣಬಹುದು.[೬] ಜರ್ಮನ್ ವಿದ್ವಾಂಸ ಹೆಲ್ಮುಟ್ ಹೊಫ್ಮನ್ನ್‌ನ ಅಭಿಪ್ರಾಯವನ್ನು ಅಂಗೀಕರಿಸುವುದಾದರೆ, ಬುದ್ಧನು ನಿಸ್ಸಂಶಯವಾಗಿಯೂ 'ಕಾಲಚಕ್ರ ಮೂಲತಂತ್ರ'ವನ್ನು (ಮಹಾಯಾನದ ಒಂದು ಸಿದ್ಧಾಂತ) ಇಲ್ಲಿಯ ಪ್ರಸಿದ್ಧ ಸ್ತೂಪದ ಬಳಿ ಬೋಧಿಸಿದನೆಂಬುದನ್ನು ಒಪ್ಪಬೇಕಾಗುವುದು.[೭] ಬುದ್ಧನು ಧಾನ್ಯಕಟಕದ ಸುಮೇಧ ಪರ್ವತದಲ್ಲಿ ಜನಿಸಿದನೆಂಬ, ಇಲ್ಲಿಯ ವಿಹಾರವೊಂದರ ಬಳಿ ಪವಾಡಗಳನ್ನು ಮೆರೆದು ಅಸಂಖ್ಯಾತ ಅನುಯಾಯಿಗಳನ್ನು ಆಕರ್ಷಿಸಿದನೆಂಬ, ಉಲ್ಲೇಖಗಳು ಜಾತಕಗಳಲ್ಲಿ ಬರುವುವು. ಈ ಘಟನೆಯ ಗೌರವಾರ್ಥ ಅಶೋಕ ಒಂದು ಸ್ತೂಪವನ್ನು ಇಲ್ಲಿ ನಿರ್ಮಿಸಿದನೆಂಬ ವಾದವೂ ಇದೆ. ವೈಶಾಲಿಯಂತೆ ಧಾನ್ಯಕಟಕವೂ ಮಹಾಸಾಂಘಿಕರ ಪ್ರಬಲ ನೆಲೆಯಾಗಿತ್ತು. ಇವರ ಪ್ರಭಾವವು ಮಗಧದ ವರೆಗೂ ಹಬ್ಬಿತ್ತೆಂಬುದಕ್ಕೆ ರಾಜಗೃಹದ ಬಳಿ ಸ್ಥಾಪಿಸಲಾದ 'ಅಂಧಕವಿಂದ' ಮತ್ತು ಶ್ರಾವಸ್ತೀ ಬಳಿ ನಿರ್ಮಿಸಲಾದ 'ಅಂಧಕವನ'ವನ್ನು ನಿದರ್ಶಿಸಲಾಗುವುದು. ರಾಜಗೃಹ, ಶ್ರಾವಸ್ತೀ, ವೈಶಾಲಿ ಮುಂತಾದ ಕೇಂದ್ರಗಳಿಂದ ಧಾನ್ಯಕಟಕಕ್ಕೆ ಬಂದ ಬೌದ್ಧ ಭಿಕ್ಷುಗಳು ಇಲ್ಲೊಂದು (ವೈಶಾಲಿಯ ಮಾದರಿಯ) ಮಣ್ಣಿನ ಸ್ತೂಪವನ್ನು ನಿರ್ಮಿಸಿದ್ದರೆಂದೂ ಅದನ್ನೇ ವಿಸ್ತರಿಸಿ, ಅಲಂಕರಿಸಿ, ಮಹಾಸ್ತೂಪವನ್ನಾಗಿ ಅಶೋಕ ಪರಿವರ್ತಿಸಿದನೆಂದೂ ಪ್ರತಿಪಾದಿಸಲಾಗಿದೆ.[೮]

ಮೌರ್ಯಪೂರ್ವ ಯುಗದಲ್ಲಿ ಇಲ್ಲಿ ನೆಲೆಸಿದ ಮಾಗಧೀಯರು ತಮ್ಮೊಡನೆ ಪಾಲೀ-ಪ್ರಾಕೃತ ಭಾಷೆಯನ್ನು ತಂದುದರಲ್ಲಿ ಅನುಮಾನವಿಲ್ಲ, ಆದರೆ ಅವರು ಬ್ರಾಹ್ಮೀ ಲಿಪಿಯಲ್ಲಿ ವ್ಯವಹರಿಸಬಲ್ಲವರಾಗಿದ್ದರೆಂಬುದಕ್ಕೆ ಆಧಾರಗಳಿಲ್ಲ. ಅಲ್ಲದೆ ಅಶೋಕಪೂರ್ವ ಕಾಲದ, ನಿಶ್ಚಿತ ಸ್ವರೂಪದ, ಬ್ರಾಹ್ಮೀ ಬರಹ ಇಲ್ಲಿ ಬಳಕೆಯಲ್ಲಿತ್ತೆಂಬುದಕ್ಕೂ ಆಧಾರಗಳು ದೊರಕುವುದಿಲ್ಲ. ಈ ಕಾರಣ ಬ್ರಾಹ್ಮೀ ಲಿಪಿಯನ್ನು ಈ ಜನಾಂಗಗಳಿಗೆ ಮೊದಲು ಪರಿಚಯಿಸಿಕೊಟ್ಟವನು ಅಶೋಕನೇ ಎನ್ನಬೇಕಾಗುತ್ತದೆ. ಅಮರಾವತಿಯಲ್ಲಿ ಈತನು ಕಂಡರಿಸಿದ ಏಳು ಸಾಲುಗಳ ಒಂದು ಸ್ತಂಭಶಾಸನ ಇದಕ್ಕೊಂದು ಆಧಾರ. ತನ್ನ ಜೀವಿತದ ಕೊನೆಯ ವರ್ಷಗಳಲ್ಲಿ ಇಂತಹ ಸ್ತಂಭಶಾಸನಗಳನ್ನು ಅಶೋಕ ಕೊರೆಸಿದನೆಂಬ ಅಭಿಮತವಿರುವುದರಿಂದ, ಕರ್ನಾಟಕ ವಲಯದ ಕಿಬ್ಬಂಡೆ ಶಾಸನಗಳನ್ನು ಕೊರೆಸಿ ಸುಮಾರು ಎರಡು ದಶಕಗಳ ನಂತರ, ಅಂದರೆ ಕ್ರಿ.ಪೂ. ೨೪೪-೨೪೩.ರ ಕಾಲಾವಧಿಯಲ್ಲಿ, ಅವನು ಸ್ತಂಭಶಾಸನವನ್ನು ಅಮರಾವತಿಯಲ್ಲಿ ಬರೆಸಿರಲು ಸಾಧ್ಯ.

ಇನ್ನು ಪ್ರಾಕೃತ ಭಾಷಿಕರು ಕರ್ನಾಟಕವನ್ನು ತಲುಪಿದ್ದು ಭದ್ರಬಾಹು-ಚಂದ್ರಗುಪ್ತರ ಜೈನ ಐತಿಹ್ಯವು ನಮಗೆ ತುಂಬಾ ಪರಿಚಿತವಾಗಿರುವುದರಿಂದ, ಅದನ್ನು ಸವಿಸ್ತಾರವಾಗಿ ಪುನರುಕ್ತಿಗೊಳಿಸುವ ಆವಶ್ಯಕತೆ ಇಲ್ಲವೆಂದು ನಾನು ಭಾವಿಸುವೆ. ಚಂದ್ರಗುಪ್ತನ ಆಡಳಿತಾಂತ್ಯದಲ್ಲಿ (ಕ್ರಿ.ಪೂ. ಸು.೩೦೦) ಸಂಭವಿಸಿದ ಆರ್ಯಾವರ್ತದ ಒಂದು ಭಯಂಕರ ಕ್ಷಾಮದಿಂದ ರಕ್ಷಿಸಿಕೊಳ್ಳಲು, ಸಾವಿರಾರು ಅನುಯಾಯಿಗಳೊಡನೆ ಭದ್ರಬಾಹು-ಚಂದ್ರಗುಪ್ತರು ಉಜ್ಜಯಿನಿಯಿಂದ ದಕ್ಷಿಣಾಭಿಮುಖವಾಗಿ ಬಂದದ್ದು, ಅವರು ಶ್ರವಣಬೆಳ್ಗೊಳದಲ್ಲಿ ಸಮಾಧಿ

ಸಂಪಾದಿಸಿಕೊಂಡದ್ದು, ಭದ್ರಬಾಹುವಿನ ಶಿಷ್ಯರು ಅಲ್ಲಿಂದ ಇನ್ನೂ ದಕ್ಷಿಣಕ್ಕೆ ಮುಂದುವರಿದು ತಮಿಳಹಂ ತಲುಪಿದ್ದು, ಈ ಐತಿಹ್ಯದ ಪ್ರಧಾನ ಅಂಶಗಳು. ಇದನ್ನು ಪ್ರತಿಪಾದಿಸುವ ಅತಿ ಪೂರ್ವ ಕಾಲದ (ಕ್ರಿ.ಶ. ೬೦೦) ಶಾಸನಗಳು ಶ್ರವಣಬೆಳ್ಗೊಳದ ಚಿಕ್ಕಬೆಟ್ಟದಲ್ಲಿ ದೊರಕಿರುವುವಲ್ಲದೆ, ಅನಂತರ ಕಾಲದ ಇನ್ನಿತರ ದಾಖಲೆಗಳೂ ಲಭ್ಯವಾಗಿರುವುವು.

ಬೌದ್ಧ ಐತಿಹ್ಯವನ್ನು ಪ್ರತಿಪಾದಿಸುವಂತಹ ವಿವರಣಾತ್ಮಕವಾದ ಶಿಲ್ಪನಿರೂಪಣೆಯು ಜೈನ ಐತಿಹ್ಯಕ್ಕೆ ದೊರೆಯದಿದ್ದರೂ ಚಂದ್ರಗಿರಿ ಮೇಲಿನ ಒಂದು ಗುಹಾಲಯ (ಅದರಲ್ಲಿ ಇರುವ 'ಭದ್ರಬಾಹು ಪಾದುಕ'), ಚಂದ್ರಗುಪ್ತ ಬಸದಿ ಮತ್ತು ಇದರ ಜಾಲಂಧ್ರದಲ್ಲಿ ಸೊಗಸಾಗಿ ನಿರೂಪಿಸಲಾಗಿರುವ ಭದ್ರಬಾಹು-ಚಂದ್ರಗುಪ್ತರ ಗಾಥಾ, ಹಲವು ಬಗೆಯಲ್ಲಿ ಈ ಐತಿಹ್ಯವನ್ನು ಪೋಷಿಸುವುವು.

ಧಾನ್ಯಕಟಕವನ್ನು ಮೊದಲು ತಲುಪಿದ ಬುದ್ಧ ಮತ್ತು ಅವನ ಅನುಯಾಯಿಗಳ ಬಗ್ಗೆಯಾಗಲೀ ಶ್ರವಣಬೆಳ್ಗೊಳವನ್ನು ಮೊದಲು ತಲುಪಿದ ಭದ್ರಬಾಹು-ಚಂದ್ರಗುಪ್ತ ಮತ್ತು ಅವರ ಅನುಯಾಯಿಗಳ ಬಗ್ಗೆಯಾಗಲೀ ಸಮಕಾಲೀನ ಲಿಖಿತ ದಾಖಲೆಗಳನ್ನು ಬಯಸುವುದು ಸರಿಯಲ್ಲ, ಏಕೆಂದರೆ ಅದೊಂದು ಮೌಖಿಕ ವ್ಯವಹಾರಗಳ ಯುಗವಾಗಿತ್ತು. ಆದರೆ ಅಶೋಕ ಶಾಸನಗಳ ಬೆನ್ನ ಹಿಂದೆ ಬಂದ ೬೦೦ ವರ್ಷ ಕಾಲದ ಲಿಖಿತ ದಾಖಲೆಗಳಿಗೆ ಆಂಧ್ರದಲ್ಲಾಗಲೀ ಕರ್ನಾಟಕದಲ್ಲಾಗಲೀ ಕೊರತೆ ಇಲ್ಲ.

ಅಶೋಕನು ದಖ್ಖಣದಲ್ಲಿ ಸೃಷ್ಟಿಸಿದ ಒಂದು ಶಾಸನ ಕ್ಷೇತ್ರ : ಧಾನ್ಯಕಟಕದ ಪರಂಪರೆಯು ಅಶೋಕನನ್ನು ಸಾಕಷ್ಟು ಸೆಳೆದರೂ ಅವನು ತನ್ನ ಗಮನವನ್ನು ಹೆಚ್ಚು ಕೇಂದ್ರೀಕರಿಸಿದ್ದು ಮಧ್ಯ ದಖ್ಖಣದಲ್ಲಿ. ಇದರ ಉತ್ತರದ ಗಡಿ ಗುಲಬರ್ಗಾ ಜಿಲ್ಲೆಯ ಸಣ್ಣತಿಯಾಗಿದ್ದರೆ, ದಕ್ಷಿಣದ ಗಡಿ ಚಿತ್ರದುರ್ಗ ಜಿಲ್ಲೆಯ ಸಿದ್ಧಾಪುರ-ಬ್ರಹ್ಮಗಿರಿ ಆಗಿದ್ದವು. ಪಶ್ಚಿಮದ ಗಡಿ ಕೊಪ್ಪಳ ಜಿಲ್ಲೆಯ ಇದೇ ಹೆಸರಿನ ಪಟ್ಟಣವಾಗಿದ್ದರೆ, ಪೂರ್ವದ ಗಡಿ ಕರ್ನೂಲು ಜಿಲ್ಲೆಯ ಯರ್ರಗುಡಿಯಾಗಿತ್ತು. ಈ ಸೀಮಿತ ಕ್ಷೇತ್ರದಲ್ಲಿ ಅಶೋಕ ಹನ್ನೊಂದು ಕಿಬ್ಬಂಡೆ ಶಾಸನಗಳನ್ನಲ್ಲದೆ, ಹೆಬ್ಬಂಡೆ ಶಾಸನಗಳ ಒಂದು ಗುಚ್ಛವನ್ನೂ ವಿಶಿಷ್ಟ ಅಥವಾ ಪ್ರತ್ಯೇಕ ಶಾಸನವನ್ನೂ ಕೊರೆಸಿದನು. ಈ ಶಾಸನಗಳೆಲ್ಲವೂ ಸುಮಾರು ೧೨೫ ಕಿ ಮೀ. (ಕೊಪ್ಪಳದಿಂದ ಯರ್ರಗುಡಿ ; ಮಸ್ಕಿಯಿಂದ ಬ್ರಹ್ಮಗಿರಿ) ವಿಸ್ತೀರ್ಣದಲ್ಲಿ ದಟ್ಟೈಸಿಕೊಂಡು ಒಂದು ವಿಶಿಷ್ಟ ಬಗೆಯ ಶಾಸನ ಕ್ಷೇತ್ರವನ್ನು ನಿರ್ಮಿಸಿಕೊಂಡಂತೆ ಕಾಣುವುವು.

ತನ್ನ ಕಾಲದಲ್ಲಿ ಪ್ರಚಲಿತವಿದ್ದ ಬೌದ್ಧ ಪರಂಪರೆಯನ್ನನುಸರಿಸಿ ಮಧ್ಯ ದಖ್ಖಣದ (ಕರ್ನಾಟಕ -ಆಂಧ್ರ) ಎಲ್ಲಾ ಜನಾಂಗಗಳನ್ನು 'ಅಂಧಕ' ಎಂಬ (ಹೆಬ್ಬಂಡೆ ಶಾಸನ ೧೩.ರಲ್ಲಿ) ಒಂದೇ ಹೆಸರಿನಿಂದ ಅಶೋಕ ಗುರುತಿಸಿದನು. ಅಂದರೆ ತನ್ನ ಚಟುವಟಿಕೆ ಕೇಂದ್ರದಲ್ಲಿಯ ಕರ್ನಾಟಕದ ಜನಾಂಗಗಳನ್ನೂ ಇದರಲ್ಲಿ ಅವನು ಸೇರಿಸಿದ್ದನೆಂದರ್ಥ. ಕಳಿಂಗ ಯುದ್ಧದ ನಂತರ ಅಲ್ಲಿಯ ನಿವಾಸಿಗಳನ್ನು ಸಂತೈಸಲು ಹೊರಡಿಸಿದ ಮಾದರಿಯಲ್ಲಿ ಸಣ್ಣತಿಯಲ್ಲೂ ಅವನು ಒಂದು 'ವಿಶೇಷ ಶಾಸನ'ವನ್ನು ಹೊರಡಿಸಿದ್ದನ್ನು ಗಮನಿಸಿದರೆ, ಭೀಮಾ ನದಿಯವರೆಗೂ ಅವನು ಸೈನ್ಯಾಚರಣೆ ಕೈಕೊಂಡಿದ್ದನೆಂದು ತೋರಿಬರುವುದು. ಸಣ್ಣತಿ ಮೌರ್ಯಪೂರ್ವಯುಗದ ಬೌದ್ಧ ಕೇಂದ್ರವಾಗಿರದಿದ್ದರೂ ಅಶೋಕನ ವೈಯಕ್ತಿಕ ಆಸಕ್ತಿಯಿಂದಾಗಿ ಇದು ಮೌರ್ಯ ಸಾಮ್ರಾಜ್ಯದ ಒಂದು ಪ್ರಧಾನ ಆಡಳಿತ ಮತ್ತು ಧಾರ್ಮಿಕ ಕೇಂದ್ರವಾಗಿ

ಬೆಳೆಯಿತು. ಇಲ್ಲಿ ದೊರಕಿರುವ ಮಹಾಸ್ತೂಪ ಮತ್ತು ಹಲವು ವಿಹಾರಗಳ ಅವಶೇಷಗಳು ಅಶೋಕನ ಕಾಲದಲ್ಲಿ ಪ್ರಾರಂಭವಾದ ಧಾರ್ಮಿಕ ಚಟುವಟಿಕೆಗಳು ಹೇಗೆ ಮುಂದುವರಿದು ಇದನ್ನೊಂದು ಮಹತ್ವದ ಬೌದ್ಧ ಕೇಂದ್ರವನ್ನಾಗಿ ಬೆಳೆಸಿದವೆಂಬುದನ್ನು ಸೂಚಿಸುತ್ತವೆ.[೬]

ತನ್ನ ಸಾಮ್ರಾಜ್ಯದ ಮಹತ್ವದ ಆಡಳಿತ ಘಟಕವನ್ನಾಗಿ ಈ ಪ್ರದೇಶವನ್ನು ಪರಿವರ್ತಿಸಲು ಅಶೋಕ ಕೈಕೊಂಡ ಹಲವು ಕ್ರಮಗಳು ಗಮನಾರ್ಹವಾಗಿವೆ. ಸುವರ್ಣಗಿರಿಯನ್ನು ದಕ್ಷಿಣದ ರಾಜಧಾನಿಯನ್ನಾಗಿಸಿಕೊಂಡು, ಇಲ್ಲಿ ತನ್ನ 'ಅಯಪುತ'(ಆರ್ಯಪುತ್ರ)ನನ್ನು ನೇಮಕ ಮಾಡಿ, ಅವನ ಸಹಾಯಕ್ಕೆ ಮಹಾಮಾತ್ರರನ್ನಿಟ್ಟು ಈ ಕೇಂದ್ರದ ಘನತೆಯನ್ನು ಅಶೋಕ ಹೆಚ್ಚಿಸಿದನು. ಅಲ್ಲದೆ, ದಕ್ಷಿಣದ ಗಡಿಯಾದ 'ಇಸಿಲ'(ಬ್ರಹ್ಮಗಿರಿ?)ವನ್ನು ಭದ್ರಗೊಳಿಸಿ ಅದನ್ನು ನೇರವಾಗಿ ಮಹಾಮಾತ್ರರ ಅಧೀನಕ್ಕೆ ಒಪ್ಪಿಸಿದನು. ಈ ಮಾದರಿಯ ಆಡಳಿತ ವ್ಯವಸ್ಥೆಯನ್ನು ವಾಯವ್ಯ ಗಡಿಯ ತಕ್ಷಶಿಲೆ, ಮಧ್ಯಭಾರತದ ಉಜ್ಜಯಿನಿ, ಕಳಿಂಗ (ಒರಿಸ್ಸಾ)ದ ತೋಸಲಿಗಳಲ್ಲಿಯೂ ಮಾಡಿ, ಅವುಗಳ ಹೊಣೆಹೊರಲು 'ಕುಮಾರ'ರನ್ನು ಅಶೋಕ ನೇಮಿಸಿದನು. ಈ ಕುಮಾರರು ಅವನ ರಕ್ತಸಂಬಂಧಿಗಳಾಗಿದ್ದರೆ ಸುವರ್ಣಗಿರಿಯ ಆರ್ಯಪುತ್ರನು ಅವರಿಗಿಂತ ಅಧಿಕ ಅಂತಸ್ತಿನ ಮತ್ತು ಸಮೀಪದ ಸಂಬಂಧಿಯಾಗಿದ್ದನೆಂದೆನಿಸುವುದು.[೭] ಇಸಿಲದಲ್ಲಿ ಮಾಡಿದಂತಹ ವ್ಯವಸ್ಥೆಯನ್ನು ಅವನು ಸಮಾಪಾ (ಕಳಿಂಗ) ಮತ್ತು ಕೋಸಾಂಬಿ(ಉತ್ತರಪ್ರದೇಶ)ಗಳಲ್ಲಿಯೂ ಮಾಡಿದನು.

ತನ್ನ ನೆಲೆಯನ್ನು ಈ ಬಗೆಯಲ್ಲಿ ದಕ್ಷಿಣದಲ್ಲಿ ಭದ್ರಪಡಿಸಿಕೊಳ್ಳಲು ಅಶೋಕನಿಗಿದ್ದ ರಾಜಕೀಯ ಹಾಗೂ ರಾಜಕೀಯೇತರ ಕಾರಣಗಳಲ್ಲಿ ಕೆಲವನ್ನು ನಾವು ಸುಲಭವಾಗಿ ಗ್ರಹಿಸಬಹುದು. ಬ್ರಹ್ಮಗಿರಿಯ ದಕ್ಷಿಣಕ್ಕಿದ್ದ ಪ್ರದೇಶವನ್ನು ಈ ಕಾಲದಲ್ಲಿ ತಮಿಳೇತರ ವಡುಗರು (ಕಬನಿ-ಕಾವೇರಿ ನಡುವಣ ಪ್ರದೇಶ; ನೀಲಗಿರಿ-ವೆಂಕಟಾದ್ರಿಯ ಉತ್ತರ ಭಾಗ) ಮತ್ತು ತಮಿಳರು (ಮಧ್ಯ ಕಾವೇರಿಯಿಂದ ಕನ್ಯಾಕುಮಾರಿ) ಹಂಚಿಕೊಂಡಿದ್ದರು. ಅಶೋಕ ತನ್ನ ಹೆಬ್ಬಂಡೆ ಶಾಸನ ೧೩ ಮತ್ತು ೨ ರಲ್ಲಿ ಸಕ್ರಮವಾಗಿ ಚೋಡ (ಚೋಳ), ಪಾಂಡಿಯ ರಾಜ್ಯಗಳಿಂದ ತಂಬಪಣ್ಣಿ (ತಾಮ್ರಪರ್ಣಿ ಅಥವಾ ಶ್ರೀಲಂಕಾ)ವರೆಗೆ ಧರ್ಮಪ್ರಸಾರಕರನ್ನು ಕಳಿಸಿದ್ದನ್ನು ಮತ್ತು ಇವನ್ನೊಳಗೊಂಡು 'ಸತಿಯಪುತ' ಮತ್ತು 'ಕೇರಳಪುತ'ರ ರಾಜ್ಯಗಳಿಗೆ ವೈದ್ಯಕೀಯ ನೆರವನ್ನು ಒದಗಿಸಿದ್ದನ್ನು ತಿಳಿಸಿ, ಇವು ತನ್ನ ರಾಜ್ಯದ ಹೊರಗಿನ ಪ್ರದೇಶಗಳಾಗಿದ್ದವೆಂಬುದನ್ನು ಸ್ಪಷ್ಟಪಡಿಸಿರುವನು. ಇಲ್ಲಿ 'ತಮಿಳಹಂ'ವನ್ನು ಹಂಚಿಕೊಂಡು ಆಳುತ್ತಿದ್ದ 'ಮೂವೇಂದರ್' (ಮೂವರು ಕಿರೀಟಧಾರಿ ಅರಸರಾದ ಚೋಳ, ಚೇರ ಮತ್ತು ಪಾಂಡ್ಯ) ರನ್ನು ಬಿಟ್ಟು ಅಧಿರಾಜರಲ್ಲಿ ಸತಿಯ ಪುತ್ರನನ್ನಲ್ಲದೆ ಉಳಿದ ಯಾರನ್ನೂ ಅವನು ಹೆಸರಿಸುವುದಿಲ್ಲ; ಇದರಂತೆ ಬ್ರಹ್ಮಗಿರಿಯ ಕ್ಷಿಪ್ರ ನೈಋತ್ಯ ಪ್ರದೇಶದಲ್ಲಿ ಆಳುತ್ತಿದ್ದ ವಡುಗರಲ್ಲಿ ಪ್ರಮುಖರಾದ ಪುನ್ನಾಟ, ಎರುಮೈ, ತುಳು, ಕೊಂಗ, ಕಟಂಬು, ಮೋಹರ್, ಕೋಸರ್ ಮುಂತಾದವರನ್ನೂ ಹೆಸರಿಸುವುದಿಲ್ಲ.

ಸಮಾಜ ಸಂಘಟನೆ ಮತ್ತು ನೀತಿಬೋಧೆಯ ಕಾರ್ಯವನ್ನು ಸುವರ್ಣಗಿರಿಯಿಂದ ದಕ್ಷಿಣಕ್ಕೆ ವಿಸ್ತರಿಸುವ ಅಭೀಪ್ಸೆಯನ್ನು ಅಶೋಕ ಹೊಂದಿದ್ದರೂ ಸ್ವಾತಂತ್ರ್ಯಪ್ರಿಯರಾದ ಇಲ್ಲಿಯ ಜನಾಂಗಗಳು ಅವನ ಅರಸೊತ್ತಿಗೆಯನ್ನಾಗಲೀ ಅವನು ಪ್ರತಿಪಾದಿಸುತ್ತಿದ್ದ ಧರ್ಮ

ವನ್ನಾಗಲೀ ಅವನು ಬಳಸುತ್ತಿದ್ದ ಲಿಪಿಭಾಷೆಯನ್ನಾಗಲೀ ಒಪ್ಪದೆ, ಇವೆಲ್ಲವನ್ನೂ ಸಾರಾಸಗಟಾಗಿ ತಿರಸ್ಕರಿಸಿದರೆಂದು ತೋರುವುದು. ಈ ಪ್ರದೇಶವನ್ನು ತನ್ನ ರಾಜಕೀಯ ಕಕ್ಷೆಯೊಳಗೆ ತೆಗೆದುಕೊಳ್ಳಲು ಅಶೋಕನೇನೂ ನಿರಾಸಕ್ತನಾಗಿರಲಿಲ್ಲ - ಆದರೆ ಅದನ್ನು ಸಾಧಿಸಿಕೊಳ್ಳಲು ಅವನಿಗೆ ಅವಕಾಶ ದೊರೆಯದಂತೆ ಈ ಜನಾಂಗ ಶಕ್ತಿಗಳು ಹೇಗೆ ನೋಡಿಕೊಂಡವೆಂಬುದನ್ನು ತಮಿಳು ಆಕರಗಳಿಂದ ನಾವು ಅರಿತುಕೊಳ್ಳುವೆವು.

ಸಣ್ಣತಿಯ ವರೆಗೂ ಸೈನ್ಯಾಚರಣೆ ಕೈಕೊಂಡು, ಸುವರ್ಣಗಿರಿಯಲ್ಲಿ ಆರ್ಯಪುತ್ರನಿಗೆ ರಾಜಧಾನಿ ಪಟ್ಟಣವನ್ನು ನಿರ್ಮಿಸಿಕೊಟ್ಟು, ಅಲ್ಲಿಂದ ಕೆಳಗಣ ಪ್ರದೇಶದಲ್ಲಿ ನೆಲೆಸಿದ್ದ ಬೃಹತ್ ಶಿಲಾಯುಗದ ಜನಾಂಗಗಳನ್ನು ಸುಲಭವಾಗಿ ವಶಪಡಿಸಿಕೊಳ್ಳುತ್ತಾ ಇಸಿಲದ ವರೆಗೂ ಮುನ್ನಡೆದು, ಅಲ್ಲಿ ಒಂದು ಸೇನಾಠಾಣ್ಯವನ್ನು ಅಶೋಕ ಸ್ಥಾಪಿಸಿದ ಚಿತ್ರ ನಮಗೆ ದೊರಕುವುದು. ಅಲ್ಲಿದ್ದ ವಡುಗರಲ್ಲಿ ಕೆಲವರನ್ನು ತನ್ನೆಡೆಗೆ ಸೆಳೆದುಕೊಳ್ಳುತ್ತಾ ಇವರನ್ನು ತಮಿಳಹಂನ 'ಮೂವೇಂದರ' ವಿರುದ್ಧ ಎತ್ತಿಕಟ್ಟಲು ಅವನು ಪ್ರಯತ್ನಿಸಿದಾಗ, ಇದರ ಲಾಭವನ್ನು ಕೆಲವು ಬಡಗ ನಾಯಕರು ಪಡೆದುಕೊಳ್ಳಲು ಹಿಂಜರಿಯಲಿಲ್ಲ, ಆದರೆ ಸ್ವಾತಂತ್ರ್ಯಪ್ರಿಯರಾದ ಅವರು ಕೂಡಾ ತಮಿಳರ ಆಧಿಪತ್ಯವನ್ನು ಎದುರಿಸಿದಂತೆ ಮೌರ್ಯರ ಆಧಿಪತ್ಯವನ್ನೂ ಎದುರಿಸಿದರೆಂದು ತೋರುವುದು. ಒಂದೆರಡು ಬಾರಿ ಮಾಡಿದ ತನ್ನ ಪ್ರಯತ್ನಗಳು ಬಯಸಿದ ಫಲಕೊಡದಿದ್ದಾಗ ತನ್ನ ರಾಜಕೀಯ ಆಮಿಷವನ್ನು ಕಡಿತಗೊಳಿಸಿ, ಧರ್ಮಪ್ರಸಾರ, ವೈದ್ಯಕೀಯ ನೆರವು, ಈ ಮೊದಲಾದವುಗಳನ್ನು ಒದಗಿಸಿ, ದಕ್ಷಿಣ ಜನಾಂಗಗಳ ಮೈತ್ರಿ ಸಂಪಾದಿಸಿಕೊಳ್ಳಲು ಅಶೋಕ ಪ್ರಯತ್ನಪಟ್ಟನು. ಇವೂ ಹೆಚ್ಚು ಫಲಿಸದಿದ್ದಾಗ ತನ್ನ ಗಮನವನ್ನು ಮಹಿಷಮಂಡಲ, ಬನವಾಸಿ ಮತ್ತು ಸಿಂಹಳಗಳಲ್ಲಿ ಹೆಚ್ಚು ಕೇಂದ್ರೀಕರಿಸಿ, ಬೌದ್ಧ ಧರ್ಮ ಮತ್ತು ಬ್ರಾಹ್ಮೀ ಲಿಪಿಯನ್ನು ಪ್ರಸಾರ ಮಾಡುವ ಕಾರ್ಯದಲ್ಲಿ ಶ್ರಮಿಸಿ, ಅವನು ಸಾಕಷ್ಟು ಯಶಸ್ಸು ಪಡೆದುಕೊಂಡನೆನ್ನಬಹುದು.

ಅಶೋಕನ ಮೈತ್ರಿ ನೀತಿಯನ್ನು ಸ್ವಾಗತಿಸುವ ಮೂಲಕ ಸಿಂಹಳೀಯರು ಮಾಡಿದ ಪ್ರಗತಿಯನ್ನು ಮೊದಲು ಅರಿತುಕೊಂಡು, ಆ ನಂತರ ತಮಿಳಹಂನಲ್ಲಾದ ಬೆಳವಣಿಗೆಯನ್ನು ತಿಳಿದುಕೊಳ್ಳಲು ನಾವು ಪ್ರಯತ್ನಿಸಬಹುದು.

ಶ್ರೀಲಂಕಾವನ್ನು ಪ್ರವೇಶಿಸಿದ ಬ್ರಾಹ್ಮೀ : ಭೌಗೋಳಿಕವಾಗಿ ತಮಿಳುನಾಡು ಮತ್ತು ಶ್ರೀಲಂಕಾ ಬಹು ಸಮೀಪವಿದ್ದರೂ ಸಾಂಸ್ಕೃತಿಕವಾಗಿ ಈ ಎರಡು ಪ್ರದೇಶಗಳು ಬಹು ದೂರವಾಗಿದ್ದುದು ಮೌರ್ಯ ಮತ್ತು ಮೌರ್ಯೋತ್ತರ ಕಾಲದ ಆಕರಗಳಿಂದ ವ್ಯಕ್ತಗೊಳ್ಳುವುದು. ಚಾರಿತ್ರಿಕ ಯುಗದ (ಕ್ರಿ.ಪೂ. ೩ನೆಯ ಶತಕ) ಆರಂಭದಿಂದಲೂ ಶ್ರೀಲಂಕಾ ಹೆಚ್ಚು ಸಂಪರ್ಕ ಇಟ್ಟುಕೊಂಡಿದ್ದು ಉತ್ತರ ಭಾರತದೊಡನೆ ಮತ್ತು ದ್ರಾವಿಡೇತರ ಮಾಧ್ಯಮಗಳೊಡನೆ ಎಂಬುದು ಸ್ಪಷ್ಟಗೊಂಡಿದೆ. ಆಳವಾಗಿ ಬೇರು ಬಿಟ್ಟ ಒಂದು ಐತಿಹ್ಯದಂತೆ ಬುದ್ಧನನ್ನಲ್ಲದೆ ಈ ದ್ವೀಪವನ್ನು ತಲುಪಿದ ಮೊಟ್ಟ ಮೊದಲ 'ಆರ್ಯ', ಸಿಂಹಪುರದ ವಿಜಯ. ಇದು ಸಂಭವಿಸಿದ್ದು ಕ್ರಿ.ಪೂ. ೬-೫ ಶತಕಗಳಲ್ಲಿ. ಈ ವಿಜಯ ಬಂಗಾಳ-ಕಳಿಂಗ ಪ್ರದೇಶದವನಾಗಿದ್ದನೆಂಬ ಒಂದು ವಾದವಿದೆ. ಶ್ರೀಲಂಕಾವನ್ನು ಆಳಿದ ಕ್ರಿ.ಶ. ೧೨ನೆಯ ಶತಮಾನದ ಒಂದು ಅರಸು ಮನೆತನವು ತಮ್ಮ ಪೂರ್ವಜರಾದ ಕಳಿಂಗದ ಸಿಂಹಪುರದವರನ್ನು ಸ್ಮರಿಸಿರುವುದು.[೧೦]

ಆರಂಭಕಾಲದ ಈ ಆರ್ಯರು ಸಿಂಹಳಕ್ಕೆ ಬಂದದ್ದು ವ್ಯಾಪಾರವನ್ನು ವಿಸ್ತರಿಸಿಕೊಳ್ಳಲು. ಮ್ಯಾಗಸ್ತನೀಸ್, ಕೌಟಿಲ್ಯ ಮತ್ತು ಖಾರವೇಳನ (ಹಾತಿಗುಂಫ ಶಾಸನ) ಉಲ್ಲೇಖಗಳು ಈ ಕಾಲದ ವಾಣಿಜ್ಯ ಸಂಬಂಧವನ್ನು ದೃಢಪಡಿಸುವುವು. ಸಿಂಹಪುರದ ಉಲ್ಲೇಖಗಳು ತಮಿಳು ಮಹಾಕಾವ್ಯಗಳಾದ *ಶಿಲಪ್ಪದಿಕಾರಂ* ಮತ್ತು *ಮಣಿಮೇಕಲೈ* ಕೂಡಾ ಬರುವುವು.[೧೧] ವಣಿಜಿಗನಾಗಿ ಬಂದ ವಿಜಯನು ಕ್ರಮೇಣ ತನ್ನ ಅಧಿಕಾರವನ್ನು ವಿಸ್ತರಿಸಿಕೊಂಡು, ಪಾಂಡ್ಯ ರಾಜ್ಯದ ಹದಿನೆಂಟು ಶ್ರೇಣಿಗಳಿಗೆ ಸೇರಿದ ಒಂದು ಸಾವಿರ ಕನ್ಯೆಯರನ್ನು ಸಿಂಹಳಕ್ಕೆ ಕರೆತಂದನಂತೆ. ಶಂಕಂ ಕವಿಗಳಲ್ಲಿ ಕೆಲವರು - ಇಳತ್ತು ಪೂರಂದೇವನಾರ್, ಈಳನಾಗನಾರ್, ಮುಸುರಿ ನೀಲಕಂಟನಾರ್ - ಶ್ರೀಲಂಕಾ ನೆಲದವರೆಂದು ತಮಿಳು ವಿದ್ವಾಂಸರು ವಾದಿಸುವರು, ಆದರೆ 'ಇಲಂಕೈ' ತುಂಬಾ ವಿರಳವಾಗಿ ಮಾತ್ರ ಶಂಕಂ ಸಾಹಿತ್ಯದಲ್ಲಿ ಉಲ್ಲೇಖಗೊಂಡಿರುವುದು ನಸ್ನ ಗಮನಕ್ಕೆ ಬಂದ ವಿಷಯ.[೧೨]

ಧರ್ಮಪ್ರಸಾರ ಮಾಡಲು ಮಹೇಂದ್ರನನ್ನು ಸಿಂಹಳಕ್ಕೆ ಅಶೋಕ ಕಳಿಸಿದ್ದನ್ನು ಸಿಂಹಳದ ಘಟನಾವಳಿಗಳಲ್ಲದೆ ರಾಜಗಳದ ಒಂದು ಶಾಸನವೂ ಬೆಂಬಲಿಸುವುದು. ಈ ದ್ವೀಪದ ಪುಣ್ಯವಶಾತ್ (*'ಇಮ ದಿಪ ಪಮುಟಮಯ ಇದಿಯ ಅಗತನ'*) ಅವನು ಇಲ್ಲಿಗೆ ಆಗಮಿಸಿದನೆಂದು ಅದು ತಿಳಿಸುವುದು.[೧೩] ಅಶೋಕ ಮತ್ತು ಅವನ ಸಮಕಾಲೀನ ಸಿಂಹಳದ ಅರಸನು 'ದೇವಾನಾಂಪಿಯ' ಎಂದು ಕರೆದುಕೊಂಡು, ಒಂದೇ ಶೈಲಿಯ (ಅಶೋಕಬ್ರಾಹ್ಮೀ) ಲಿಪಿಯನ್ನು ಬಳಸಿ, ನೈಸರ್ಗಿಕ ಬಂಡೆಗಳ ಮೇಲೆ ಶಾಸನಗಳನ್ನು ಕೊರೆಸಿದ್ದು ಒಂದು ಆಕಸ್ಮಿಕ ಮಾತ್ರ ಆಗಿರಲಾರದು. ಹೀಗೆ ಸಿಂಹಳದಲ್ಲಿ ಪ್ರಾರಂಭಗೊಂಡ ಬ್ರಾಹ್ಮೀ ಲಿಪಿಯ ಬಳಕೆ ಅವ್ಯಾಹತವಾಗಿ ೭ನೆಯ ಶತಮಾನದ ವರೆಗೂ ಮುಂದುವರಿಯಿತು. ಇದು ಪ್ರಾರಂಭವಾದ ಮೊದಲು ಮೂರು ಶತಮಾನಗಳಲ್ಲಿ ೩೭೪ ಕೇಂದ್ರಗಳನ್ನು ತಲುಪಿ ತನ್ನ ಸಂಖ್ಯೆಯನ್ನು ೧,೪೪೦ಕ್ಕೆ ಎತ್ತರಿಸಿಕೊಂಡಿತು. ಇವುಗಳಲ್ಲಿ ಕನಿಷ್ಠ ೫ ಶಾಸನಗಳು ಅಶೋಕನ ಕಾಲದವುಗಳೆಂದು ತೀರ್ಮಾನಿಸಲಾಗಿದೆ.[೧೪]

ಸಿಂಹಳಬ್ರಾಹ್ಮೀಯ ವಿಶೇಷತೆ : ಸಿಂಹಳದ ರಾಜಕೀಯ ಮತ್ತು ಧಾರ್ಮಿಕ ಇತಿಹಾಸದ ವಿವರಗಳನ್ನು ಬದಿಗಿಟ್ಟು, ಬ್ರಾಹ್ಮೀ ಲಿಪಿಗೆ ಸಂಬಂಧಪಟ್ಟದ್ದನ್ನು ಮಾತ್ರ ಇಲ್ಲಿ ಗಮನಿಸಿದರೆ ಅದರಲ್ಲಿ ಎದ್ದು ಕಾಣುವ ಕೆಲವು ಅಂಶಗಳು ಇಂತಿವೆ :

(೧) ಧಾನ್ಯಕಟಕದೊಡನೆ ಬುದ್ಧನು ನೇರ ಸಂಪರ್ಕ ಹೊಂದಿದಂತೆ ಸಿಂಹಳದೊಡನೆಯೂ ಹೊಂದಿದ್ದನೆಂಬ ಐತಿಹ್ಯವಿದೆ. ಸರಿಸುಮಾರು ಇದೇ ಕಾಲಾವಧಿಯಲ್ಲಿ ಸಿಂಹಪುರದ ವಿಜಯನು ಹಲವು 'ಆರ್ಯ'ರೊಡನೆ ಇಲ್ಲಿಗೆ ಬಂದು ನೆಲೆಸಿದನೆಂದು ನಂಬಲಾಗಿದೆ. ಇದನ್ನು ಪರೋಕ್ಷವಾಗಿ ಪ್ರತಿಪಾದಿಸಲು ಇದೇ ಕಾಲದ್ದೆನ್ನಲಾದ ಮಡಕೆಯ ಮೇಲಿನ ಬ್ರಾಹ್ಮೀ ಗಿಚ್ಚು ಅನುರಾಧಪುರದ ಉತ್ಖನನದಲ್ಲಿ ದೊರಕಿದ್ದು ಅದು ಬ್ರಾಹ್ಮೀ ಲಿಪಿ ಮತ್ತು ಪ್ರಾಕೃತ ಭಾಷೆಯಲ್ಲಿರುವುದನ್ನು ಖಚಿತಪಡಿಸಿಕೊಳ್ಳಲಾಗಿದೆ.[೧೫] ಆರಂಭಕಾಲದ ಈ ಲಿಪಿಯನ್ನು ಬಂಗಾಳ-ಕಳಿಂಗ ಪ್ರದೇಶದಿಂದ ಬಂದ ಮೊದಲ ತಲೆಮಾರಿನ ಆರ್ಯರು ಸಿಂಹಳಕ್ಕೆ ತಂದಿರಲು ಸಾಧ್ಯ, ಆದರೆ ಅಲ್ಲಿಂದ ಅಶೋಕನ ಕಾಲದ ವರೆಗೂ ಭಾರತದಲ್ಲಾಗಲೀ ಸಿಂಹಳದಲ್ಲಾಗಲೀ ಈ ಲಿಪಿ ಏಕೆ ಮುಂದುವರಿಯಲಿಲ್ಲ ಎಂಬುದೊಂದು ದೊಡ್ಡ ಪ್ರಶ್ನೆ.

(೨) ಬ್ರಾಹ್ಮೀ ಲಿಪಿ, ಪ್ರಾಕೃತ ಭಾಷೆ ಮತ್ತು ಬೌದ್ಧ ಮತ ಅಶೋಕನ ಕಾಲದಲ್ಲಿಯೇ ಶ್ರೀಲಂಕಾದಲ್ಲಿ ಭದ್ರ ನೆಲೆ ಕಂಡುಕೊಂಡವೆನ್ನುವುದರಲ್ಲಿ ಅನುಮಾನವಿಲ್ಲ. ಕ್ರಿ.ಪೂ.೩.ನೆಯ ಶತಮಾನದ ಕೊನೆಯ ದಶಕಗಳಲ್ಲಿ ಆಳಿದ ದೇವಾನಾಂಪಿಯ ತಿಸ್ಸನ ವಂಶಜನಾದ ಉತ್ತಿಯನೆಂಬ ಅರಸನ ಕಾಲದಲ್ಲಿ ಗುಹಾಲಯ ಬರವಣಿಗೆ ಪ್ರಾರಂಭಗೊಂಡು, ಮುಂದಿನ ಮೂರು ಶತಕಗಳಲ್ಲಿ ಈ ದ್ವೀಪದ ಬಹುತೇಕ (ಉತ್ತರದ ಜಾಫ್ನಾ ಮತ್ತು ನೈಋತ್ಯದಂಚನ್ನು ಹೊರತುಪಡಿಸಿ) ಭಾಗಕ್ಕೆ ವಿಸ್ತರಿಸಿಕೊಂಡಿತು. ಈ ಅವಧಿಯಲ್ಲಿ ಕಂಡರಿಸಿದ ೧,೪೪೦ ಶಾಸನಗಳು ಅಂದಿನ ಬಿರುಸಿನ ಚಟುವಟಿಕೆಯನ್ನು ಪ್ರತಿಬಿಂಬಿಸುವುವು.[೧೬]

(೩) ಅಶೋಕಬ್ರಾಹ್ಮೀ ಶಾಸನಗಳಿಗೂ ಆರಂಭಕಾಲದ ಸಿಂಹಳ-ಬ್ರಾಹ್ಮೀ ಶಾಸನಗಳಿಗೂ ಲಿಪಿಸಾಮ್ಯವಿದ್ದರೂ ಹಲವು ಕುತೂಹಲಕಾರಿ ವ್ಯತ್ಯಾಸಗಳಿವೆ. ಇವುಗಳಲ್ಲಿ ಸು. ೩.೨ ಶಾಸನಗಳನ್ನು (ಖರೋಷ್ಠೀ ಮತ್ತು ಅರಾಮೈಕ್‌ನಂತೆ) ಬಲದಿಂದ ಎಡಕ್ಕೆ, ೭ ಶಾಸನಗಳನ್ನು ಹಾವಿನ ನಡಿಗೆಯಂತೆ (ಆರಂಭಕಾಲದ ಅಪರೂಪದ ಗ್ರೀಕ್ ಬರಹದಂತೆ) ಉಳಿದವುಗಳನ್ನು ಎಡದಿಂದ ಬಲಕ್ಕೆ ಬರೆಯಲಾಗಿದೆ. ಈ ವೈವಿಧ್ಯತೆ ಕ್ರಿ.ಶ. ೧ ನೆಯ ಶತಮಾನದಲ್ಲಿ ಅಂತ್ಯಗೊಂಡು, ಆ ನಂತರ ಕಾಲದ ಎಲ್ಲ ಶಾಸನಗಳೂ ಎಡದಿಂದ ಬಲಕ್ಕೆ ಬರೆಯಲ್ಪಟ್ಟಿವೆ.[೧೭] ಇಷ್ಟೇ ಕುತೂಹಲಕರವಾದ ಮತ್ತೊಂದು ವಿಷಯವೆಂದರೆ, ಆರಂಭಕಾಲದಿಂದಲೇ ಸಿಂಹಳೀಯರು ಬ್ರಾಹ್ಮೀಯನ್ನು ತಮ್ಮ ನೆಲದ (ಇಂಡೋಆರ್ಯನ್ ಮೂಲದ ಸಿಂಹಳ) ಭಾಷೆಗೆ ಅಳವಡಿಸಿಕೊಳ್ಳಲು ಪ್ರಯತ್ನಪಟ್ಟು ಪ್ರಾಕೃತವನ್ನು ಕ್ರಮೇಣವಾಗಿ ಹಿಂದಕ್ಕೆ ಸರಿಸಿದ್ದು, ಹೀಗೆ ಬ್ರಾಹ್ಮೀ ಲಿಪಿಯನ್ನು ಬರಮಾಡಿಕೊಂಡು ಅದನ್ನು ತನ್ನ ನುಡಿಗಟ್ಟಿನ ವಾಹನವನ್ನಾಗಿ ಮಾಡಿಕೊಂಡ ಭಾರತೀಯ ಮತ್ತು ಭಾರತೀಯೇತರ ಜನಾಂಗಗಳಲ್ಲಿ ಸಿಂಹಳೀಯರು ಮೊದಲಿಗರಾದರು. ಅಲ್ಲದೆ ಕ್ರಿ.ಶ. ೭ನೆಯ ಶತಮಾನದ ವರೆಗೂ ಅವ್ಯಾಹತವಾಗಿ ಬ್ರಾಹ್ಮೀ ಬರಹವನ್ನು ಮುಂದುವರಿಸಿ ಇವರು ಇನ್ನೊಂದು ದಾಖಲೆಯನ್ನು ನಿರ್ಮಿಸಿದರು.

(೪) ಸಿಂಹಳಬ್ರಾಹ್ಮೀಗೆ ಕಾರಣ ಪುರುಷನು ಅಶೋಕನ ಧರ್ಮರಾಯಭಾರಿಯಾದ ಮಹಿಂದ ಎಂಬುದನ್ನು ವಿನಯದ ಟೀಕಾಗ್ರಂಥ 'ಸಮಂತಪಾಸಾದಿಕಾ'ದಲ್ಲಿ ಸ್ಪಷ್ಟಪಡಿಸಲಾಗಿದೆ. ಬುದ್ಧಶಾಸನವು ಸಿಂಹಳದಲ್ಲಿ ಭದ್ರ ನೆಲೆ ಕಂಡುಕೊಳ್ಳಬೇಕಾದರೆ, ಇಲ್ಲಿ ಜನಿಸಿದ ವ್ಯಕ್ತಿಯೋರ್ವನು ದೀಕ್ಷೆ ಪಡೆದು ಸಂಘ ಸೇರಬೇಕು ಮತ್ತು ಅವನ ಮಾತೃಭಾಷೆಯಲ್ಲಿಯೇ ವಿನಯವನ್ನು ಅವನು ಪಠಿಸಬೇಕು, ಎಂದು ಮಹಿಂದನು ಬಯಸಿದನೆಂದು ಈ ಗ್ರಂಥದಲ್ಲಿ ತಿಳಿಸಲಾಗಿದೆ. ಇದರಂತೆ ಅಂದಿನ ಆಳರಸ ದೀಕ್ಷೆ ಪಡೆದುಕೊಂಡು ಸಂಘವನ್ನು ಸೇರಿದ ನಂತರ ಅನೇಕ ಸಿಂಹಳೀಯರು ಸಂಘ ಸೇರಿದರೆಂದು ಹೇಳಲಾಗಿದೆ. ಆರಂಭಕಾಲದ ಸಿಂಹಳಬ್ರಾಹ್ಮೀ ಶಾಸನಗಳಲ್ಲಿಯ ಸಿಂಹಳೀಯರ ಹೆಸರುಗಳು ಇದನ್ನು ಬೆಂಬಲಿಸುವುವು.[೧೮] ಇದಾದ ಹಲವು ದಶಕಗಳು ಗತಿಸಿದ ನಂತರ 'ತಮಿಳುಬ್ರಾಹ್ಮೀ' (ಕ್ರಿ.ಪೂ. ೨ನೆಯ ಶತಕ) ಬಳಕೆಗೆ ಬಂದುದರಿಂದ, ಬಹುಶಃ 'ಸಿಂಹಳಬ್ರಾಹ್ಮೀ'ಯೇ, 'ತಮಿಳುಬ್ರಾಹ್ಮೀ'ಗೆ ಸ್ಫೂರ್ತಿ ನೀಡಿತೇನೋ ಎಂಬ ಸಂಶಯ ಉಂಟಾಗುವುದು.

(೫) ಸಿಂಹಪುರದ ವಿಜಯನಾಗಲೀ ಅವನೊಡನೆ ಬಂದವರಾಗಲೀ ಬ್ರಾಹ್ಮೀ ಲಿಪಿಯಲ್ಲಿ ಬರೆದ ಪ್ರಾಕೃತ ಭಾಷೆಯ ಮಡಕೆಗಳನ್ನು ಅನುರಾಧಪುರಕ್ಕೆ ತಂದಿದ್ದರೆ, ಅವು ಅಂದಿನ ಬಂಗಾಳ-ಕಳಿಂಗ ಪ್ರದೇಶದಲ್ಲಿ ಪ್ರಚಾರದಲ್ಲಿದ್ದ ಮಾಧ್ಯಮಗಳಾಗಿರಬಹುದೆನ್ನಬಹುದು.

ಆದರೆ 'ಅಶೋಕಬ್ರಾಹ್ಮೀ' ಕೂಡಾ ಇದೇ ಮಾರ್ಗವನ್ನು ಹಿಡಿದು ಸಿಂಹಳ ತಲುಪಿತೆಂಬುದಕ್ಕೆ ಹಲವು ತೊಡಕುಗಳಿವೆ.

ಆರಂಭಕಾಲದ ಸಿಂಹಳಬ್ರಾಹ್ಮೀ ಶಾಸನಗಳು ಇಲ್ಲಿಯ ವರೆಗೂ ದೊರಕಿರುವುದು ಈ ದ್ವೀಪದ ಉತ್ತರ ಅಥವಾ ಪೂರ್ವ ಭಾಗದಲ್ಲಲ್ಲ, ಪಶ್ಚಿಮ ಭಾಗದ ಪುತ್ತಳಂ ಜಿಲ್ಲೆಯಲ್ಲಿ. ಅಲ್ಲಿಂದ ಮಹಾವ್ಯೋ ಮತ್ತು ಕಲನಿ ನದೀಪಾತ್ರ ಹಿಡಿದು, ಬಲಗಲ್ ಕೊರಲೆಯಲ್ಲಿ ಅವು ಮೊದಲು ಸ್ಥಾನ ಪಡೆದುಕೊಂಡು, ಅಲ್ಲಿಂದ (ಉತ್ತರದ ಜಾಫ್ನಾ ಮತ್ತು ನೈಋತ್ಯದಂಚನ್ನು ಹೊರತುಪಡಿಸಿ) ದ್ವೀಪದ ತುಂಬೆಲ್ಲಾ ವ್ಯಾಪಿಸಿಕೊಂಡವು.[೧೯] ಜಾಫ್ನಾ ಪ್ರದೇಶ 'ಸಿಂಹಳ-ಬ್ರಾಹ್ಮೀ ಶಾಸನಶೂನ್ಯವಾಗಿರುವುದರಿಂದ ತಮಿಳುನಾಡು ಮತ್ತು ಕೇರಳದಿಂದ ಈ ಲಿಪಿ ದ್ವೀಪವನ್ನು ಮುಟ್ಟಲಿಲ್ಲವೆಂಬುದು ಖಚಿತಗೊಳ್ಳುವುದು. ಕಳಿಂಗ ಅಥವಾ ಗೌಡ (ಬಂಗಾಳ) ಪ್ರದೇಶದಿಂದ ಸಮುದ್ರ ತೀರವನ್ನನುಸರಿಸಿ ಬಂದವರು ಬ್ರಾಹ್ಮೀಯನ್ನು ಇಲ್ಲಿಗೆ ತಂದಿದ್ದರೆ ಸಹಜವಾಗಿ ಅದು ಮೊದಲು ಈ ದ್ವೀಪದ ಉತ್ತರ (ಜಾಫ್ನಾ) ಅಥವಾ ಪೂರ್ವ ಭಾಗದಲ್ಲಿ (ಟ್ರಿಂಕೋಮಲೀ, ಬಟ್ಟಿಕೊಲೋ, ಅಂಪಾರ ಜಿಲ್ಲೆಗಳಲ್ಲಿ) ನೆಲೆ ಕಂಡುಕೊಳ್ಳಬೇಕಿತ್ತು. ಇನ್ನು ಪಶ್ಚಿಮ ಭಾರತದ ಯಾವುದಾದರೊಂದು ಕೇಂದ್ರದಿಂದ ಅದು ಪಶ್ಚಿಮ ಲಂಕಾವನ್ನು ಮುಟ್ಟಿದ್ದರೆ ಅವುಗಳಲ್ಲಿ ಒಂದು ಗಿರಿನಾರ್ (ಗುಜರಾತ್), ಮತ್ತೊಂದು ಸೋಪಾರ (ಮಹಾರಾಷ್ಟ್ರ), ಇನ್ನೊಂದು ವನವಾಸ (ಕರ್ನಾಟಕ) ಮಾತ್ರ ಆಗಿರಲು ಸಾಧ್ಯ.

ಗುಜರಾತಿನ ಗಿರಿನಾರ್ ಅಥವಾ ಮಹಾರಾಷ್ಟ್ರದ ಸೋಪಾರದಿಂದ 'ಅಶೋಕ ಬ್ರಾಹ್ಮೀ' ಸಿಂಹಳವನ್ನು ಮುಟ್ಟಿದ್ದಕ್ಕೆ ಆಧಾರವಾಗಲೀ ಐತಿಹ್ಯವಾಗಲೀ ಇಲ್ಲ. ಗಿರಿನಾರ್ ಮತ್ತು ಕಲ್ಸೀ ಶಾಸನಗಳಲ್ಲಿ ತಾಮ್ರಪರ್ಣಿಯ ಪ್ರಸ್ತಾಪ ಬರುವುದೇನೊ ನಿಜ, ಆದರೆ ಈ ಆಧಾರದ ಮೇಲೆ ಗುಜರಾತ ಮತ್ತು ಉತ್ತರಾಂಚಲಗಳೊಂದಿಗೆ ಈ ದ್ವೀಪದ ಸಂಪರ್ಕವನ್ನು ಕಲ್ಪಿಸಿಕೊಳ್ಳಲಾಗದು. ಇನ್ನು ಬನವಾಸಿಯಿಂದ ಅದು ಸಂಭವಿಸಿರಬಹುದೇ ಎಂಬ ಅನುಮಾನ ಉದ್ಭವಿಸುವುದು. ವನವಾಸಕ್ಕೆ ಸಂಬಂಧಪಟ್ಟ ಕೆಲವು ಕುತೂಹಲಕಾರಿ ವಿವರಗಳು ಇದನ್ನು ತಳ್ಳಿಹಾಕುವುದಿಲ್ಲ.

ಮೂರನೆಯ ಬೌದ್ಧ ಪರಿಷತ್ ವಿಸರ್ಜನೆಗೊಂಡ ನಂತರ ತನ್ನ ಧರ್ಮಪ್ರಸಾರಕರನ್ನು ಅನೇಕ ಕಡೆ ಅಶೋಕ ಕಳಿಸಿದ್ದನ್ನು ಮಹಾವಂಸದಲ್ಲಿ ಸ್ಪಷ್ಟಪಡಿಸಲಾಗಿದೆ. ಅವುಗಳಲ್ಲಿ ವನವಾಸ ಮತ್ತು ಮಹಿಷಮಂಡಲಗಳೂ ಸೇರಿಕೊಂಡಿದ್ದವು. ಇಲ್ಲಿಂದ ಮಹಿಂದನು ಲಂಕಾದ್ವೀಪವನ್ನು ತಲುಪಿದನೆಂಬುದಕ್ಕೆ ಆಧಾರವಿಲ್ಲ, ಆದರೆ ಅಶೋಕನ ಧರ್ಮಪ್ರಸಾರ ಕಾರ್ಯವು ವನವಾಸದಲ್ಲಿ ಫಲಿಸಿದಷ್ಟು ಬೇರೆಲ್ಲೂ ಫಲಿಸಲಿಲ್ಲವೆಂಬುದಕ್ಕೆ ಸಾಕಷ್ಟು ಆಧಾರಗಳಿವೆ. ಅಶೋಕಪೂರ್ವಯುಗದಲ್ಲಿಯೇ ಬನವಾಸಿಯು ಬೌದ್ಧ ಸಮಾಜದೊಡನೆ ಸಂಪರ್ಕ ಹೊಂದಿತ್ತೆಂಬ ಐತಿಹ್ಯ, ಬನವಾಸಿಯ ಉತ್ಖನನದಲ್ಲಿ ದೊರೆತ ಶಾತವಾಹನಪೂರ್ವಕಾಲದ ಅವಶೇಷಗಳು, ಸಿಂಹಳದ ಘಟನಾವಳಿಗಳಲ್ಲಿ ಬನವಾಸಿಯ ಥೇರ ರಖಿತರ ಮತ್ತು 'ಪಬ್ಬಜ್ಜಾ' ದೀಕ್ಷೆಯ ಪ್ರಸ್ತಾಪ, ಅರಸ ದುತ್ತಗಾಮಿನಿ ಸ್ಥಾಪಿಸಿದ ಸ್ತೂಪದ ಉದ್ಘಾಟನಾ ಸಂದರ್ಭದಲ್ಲಿ ೧೮,೦೦೦ ಬನವಾಸಿಯ ಭಿಕ್ಖುಗಳು ಸಿಂಹಳ ತಲುಪಿದ್ದು, ಫಾಯಿಯಾನನು ಇಲ್ಲಿ ಗಮನಿಸಿದ ಮಹಿಶಾಸಕ (ಮಹಿಷ=ಮಹಿಷ ಮಂಡಳ) ಮತ್ತು ಅಸ್ಸಕ (ಅಸ್ಮಕ = ಮಹಾರಾಷ್ಟ್ರ) ಸಂಘದ ಪ್ರಭಾವ, ಹೂಯನ್‌ತ್ಸಾಂಗ್ ಈ 'ಕೊಂಕಣಪುರ'ದಲ್ಲಿ ಕಂಡ

ಅಶೋಕಸ್ತೂಪ, ಬುದ್ಧ ಕರಂಡಕ, ಮೈತ್ರೇಯ ವಿಗ್ರಹ ಮತ್ತು ಹಲವಾರು ಸಂಘಾರಾಮಗಳು – ಈ ಮುಂತಾದವು ಅಶೋಕನ ಮತ್ತು ಆನಂತರದ ಕಾಲದಲ್ಲಿ ಬನವಾಸಿ ಬೌದ್ಧ ಕೇಂದ್ರವಾಗಿ ಬೆಳೆದ ಬಗೆಯನ್ನು ಸೂಚಿಸುವುವು. ಈ ಕಾರಣ ಬನವಾಸಿ ಮತ್ತು ಮಹಿಷ ಮಂಡಲವನ್ನು ತಲುಪಿದ (ಮಹದೇವ ಮತ್ತು ರಖಿತರ) ಧರ್ಮಪ್ರಚಾರಕ ತಂಡವು ಇಲ್ಲಿಂದ ಇನ್ನೂ ಮುಂದುವರಿದು ಸಿಂಹಳವನ್ನು ತಲುಪಿರಬಾರದೇಕೆ? ಎಂಬ ಅನುಮಾನ ಉಂಟಾಗುವುದು.

ಸಿಂಹಳಬ್ರಾಹ್ಮೀ ಶಾಸನಗಳಲ್ಲಿ ಮಾಗಧಿಯ ಪ್ರಭಾವ ಅತ್ಯಲ್ಪವಾಗಿದ್ದು ವಾಯುವ್ಯ ಪ್ರದೇಶದ ಪ್ರಾಕೃತ (ಉದಾ. ದೀರ್ಘಸ್ವರಾಕ್ಷರ ಮತ್ತು ಸಂಯುಕ್ತಾಕ್ಷರ, ಐ, ಐ, ಔ, ಈ, ಊ ಬಳಕೆಯಿಲ್ಲದಿರುವುದು) ಪ್ರಭಾವ ಎದ್ದುಕಾಣುವುದು. ಖರೋಷ್ಠೀ ಮತ್ತು ಅರಾಮೈಕ್ ಬರಹದಂತೆ ಗಣನೀಯ ಸಂಖ್ಯೆಯ ಶಾಸನಗಳನ್ನು ಇಲ್ಲಿ ಬಲದಿಂದ ಎಡಕ್ಕೆ ಬರೆದಿರುವುದು ಇಷ್ಟೇ ಎದ್ದು ಕಾಣುವ ಮತ್ತೊಂದು ವಿಷಯ. ಮಹಿಂದನು ಸಿಂಹಳವನ್ನು ತಲುಪಿದಾಗ, ಅವನ ಸಂಘದಲ್ಲಿ ಭಾರತದ ನಾನಾ ಪ್ರದೇಶದವರಿದ್ದು ಅವರಲ್ಲಿ ಕೆಲವರು (ವಾಯುವ್ಯ ಪ್ರದೇಶದ) ಖರೋಷ್ಠೀಗಳೂ ಸೇರಿಕೊಂಡಿದ್ದರೆಂದು ತೋರುವುದು. ಇವರು ಬ್ರಹ್ಮಗಿರಿಯನ್ನು ಮತ್ತು ಯರ್ರಗುಡಿಯನ್ನು ಹತ್ತಾರು ವರ್ಷಗಳ ಮುಂಚೆಯೇ ತಲುಪಿ ಇಲ್ಲಿ ಕೆಲ್ಬಂಡೆ ಶಾಸನಗಳನ್ನು ಕೊರೆದಿದ್ದರೆಂಬುದಕ್ಕೆ ಸ್ಪಷ್ಟ ಆಧಾರಗಳಿವೆ.[೨೦] ಇವರಲ್ಲಿ ಕೆಲವರು ಮಹಿಂದನೊಡನೆ ಸಿಂಹಳವನ್ನು ತಲುಪಿದ ಸಂಭವನೀಯತೆಯನ್ನು ತಳ್ಳಿಹಾಕುವಂತಿಲ್ಲ. ಆರಂಭ ಕಾಲದಲ್ಲಿ ಈ ಖರೋಷ್ಠೀಗಳು ಬಲದಿಂದ ಎಡಕ್ಕೆ ಸಿಂಹಳಬ್ರಾಹ್ಮೀ ಶಾಸನಗಳನ್ನು ಕಂಡರಿಸಿದ್ದರೆ ಆಶ್ಚರ್ಯಪಡಬೇಕಾದುದೇನೂ ಇಲ್ಲ.

ಮೊದಲ ತಲೆಮಾರಿನ ಭಾರತದ ಭಿಕ್ಷುಗಳನ್ನು ಸಿಂಹಳದಲ್ಲಿ ನೆಲೆಸಲು ಕಂಟಕ ಚೆತಿಯ ಬಳಿ ೬೮ ಗುಹೆಗಳನ್ನು ಸಿದ್ಧಗೊಳಿಸಬೇಕಾಯಿತೆಂದು ಮಹಾವಂಸ ತಿಳಿಸುವುದು.[೨೧] ಇವರು ಬೇರೆ ಬೇರೆ ನುಡಿಗಟ್ಟಿನವರಾಗಿದ್ದುದರಿಂದ, ಅವರೆಲ್ಲರೂ ಒಂದೇ (ನೆಲದ) ಭಾಷೆಯನ್ನು ರೂಢಿಸಿಕೊಂಡು, ಪೆಸ್ಲಮುನಿಯ ಮಾರ್ಗದರ್ಶನದಲ್ಲಿ ಸಿಂಹಳಬ್ರಾಹ್ಮೀಯನ್ನು ಅಭಿವೃದ್ಧಿಪಡಿಸಬೇಕೆಂಬುದು ಮಹಿಂದನ ಅಭೀಪ್ಸೆಯಾಗಿತ್ತೆಂದು ತೋರುವುದು.

ಅಶೋಕನ ಕಾಲದಲ್ಲಿ ಆರಂಭಗೊಂಡ ಈ ಎರಡು ದೇಶಗಳ ಕೊಡುಕೊಳ್ಳುವಿಕೆ ಕನಿಷ್ಠ ಅರ್ಧ ಸಹಸ್ರಮಾನ ಕಾಲ ಅವ್ಯಾಹತವಾಗಿ ಮುಂದುವರಿಯಿತೆನ್ನುವುದರಲ್ಲಿ ಅನುಮಾನವಿಲ್ಲ. ಈ ಕಾಲಾವಧಿಯಲ್ಲಿ ಸಿಂಹಳ ಹೆಚ್ಚು ಸಂಪರ್ಕವಿಟ್ಟುಕೊಂಡದ್ದು ದಖ್ಖಿಣದೊಡನೆ (ಪ್ರಧಾನವಾಗಿ ಅಮರಾವತಿ, ನಾಗಾರ್ಜುನಕೊಂಡ, ಬನವಾಸಿ, ಮುಂ), ತಮಿಳಹಂನೊಡನಲ್ಲ. ಈ ಕಾಲದ ಭಾಷಾವಿನಿಮಯದ ಸಮಗ್ರ ಅಭ್ಯಾಸವಿನ್ನೂ ಆಗಬೇಕಾಗಿರುವುದರಿಂದ, ಅದರ ಪರಿಣಾಮ ಮತ್ತು ಪ್ರಭಾವದ ಬಗ್ಗೆ ಈಗ ಹೆಚ್ಚು ತಿಳಿಸಲು ಸಮಗ್ರ ಸಾಧ್ಯವಾಗುತ್ತಿಲ್ಲ. ಆದರೆ ಕೆಲವು ಕುತೂಹಲಕಾರೀ ವಿವರಗಳ ಕಡೆ ನಾನು ಗಮನ ಹರಿಸಬಯಸುವೆನು:

(ಅ) ಕ್ರಿ.ಪೂ. ೩ನೆಯ ಶತಮಾನದಲ್ಲಿ (೨೩೭-೨೧೫) ಅನುರಾಧಪುರದಿಂದ ಆಳುತ್ತಿದ್ದ ಸೂರತಿಸ್ಸನನ್ನು ತಮಿಳಹಂನ ಸೇನ ಮತ್ತು ಗುತ್ತಕ ಎಂಬ ವಣಿಜಗರು ಸೋಲಿಸಿ ಸುಮಾರು ೨ ದಶಕ ಕಾಲ ಆಳಿದರೆಂದು ಸಿಂಹಳದ ಘಟನಾವಳಿಗಳು ತಿಳಿಸುವುವು. ದಕ್ಷಿಣ

ಭಾರತದ ಈ ಸೇನ ಮತ್ತು ಗುತ್ತಕರು ಕಡಲ ವ್ಯಾಪಾರಿಗಳಾಗಿದ್ದರೆಂದೂ ಬೌದ್ಧ ಧರ್ಮದ ವಿರೋಧಿಗಳಾಗಿರಲಿಲ್ಲವೆಂದೂ ಪುಣ್ಯತೀರ್ಥದಲ್ಲಿ ಮಿಂದರೆ ಪಾಪ ನಾಶವಾಗುವುದೆಂಬುದನ್ನು ನಂಬಿದ್ದರೆಂದೂ ವರ್ಣಿಸಲಾಗಿದೆ. ಅಲ್ಲದೆ ಅನುರಾಧಪುರದಿಂದ ಅನತಿ ದೂರದಲ್ಲಿ ಹರಿಯುತ್ತಿದ್ದ 'ಕದಂಬ ನದಿ'ಯನ್ನು ತಮ್ಮ ರಾಜಧಾನಿಯೆಡೆ ಅವರು ತಿರುಗಿಸಿಕೊಂಡರೆಂದು ತಿಳಿದು ಬರುವುದು. ಈ ಸೇನ-ಗುತ್ತಕರು ಯಾರು ಎಂಬುದು ಇತ್ಯರ್ಥವಾಗಿಲ್ಲ. ಈ ಹೆಸರಿನ ಚಿತ್ರರಸರನ್ನಾಗಲೀ ವಣಿಜಿಗರನ್ನಾಗಲೀ ಶಂಕಂ ಕಾವ್ಯದಲ್ಲಿ ಹೆಸರಿಸಿಲ್ಲ-ಕಾರಣ ಇವರು ತಮಿಳಹಂ ಹೊರವಲಯದ ವಡುಗರಾಗಿರಬಹುದೆನಿಸುವುದು. ಶಂಕಂ ಕಾಲದಲ್ಲಿ ಕಟಂಬು(ಕದಂಬ)ಗಳು ಪ್ರಸಿದ್ಧ ಕಡಲ ದೊರೆಗಳಾಗಿದ್ದರು. ಇವರನ್ನು ಕಡಲ್ಗಳ್ಳರೆಂದು ಶಂಕಂ ಕವಿಗಳು ಆಗಾಗ್ಗೆ ಪ್ರಸ್ತಾಪಿಸಿ, ಚೇರನ್ ಚಂಗುಟ್ಟುವನ್ ಇವರನ್ನು ನಿಗ್ರಹಿಸಲು ಮೇಲಿಂದ ಮೇಲೆ ಹೋರಾಡಬೇಕಾದುದನ್ನು ಪದಿಟ್ರುಪತ್ತು ಮತ್ತು ಶಿಲಪ್ಪದಿಕಾರಂದಲ್ಲಿ ತಿಳಿಸಿರುವರು.[೨೨] ಈ ಕಡಲಾಧಿಪತಿಗಳು ಅನುರಾಧಪುರದ ಅರಿಪೋ ನದಿಮುಖದಲ್ಲಿ ತಮ್ಮ ನೆಲೆಯನ್ನು ಗುರುತಿಸಿಕೊಂಡಿದ್ದರೆಂದು ಮತ್ತು ಇದನ್ನು ಅಂದು ಕದಂಬ ನದಿಯೆಂದು ಕರೆಯಲಾಗುತ್ತಿತ್ತೆಂದು ಇತಿಹಾಸಕಾರ ರಸನಾಯಗಂ ಅಭಿಪ್ರಾಯಪಟ್ಟಿರುವರು.[೨೩] ಸೇನ (ಕರ್ನಾಟಕದ ಸೇನ?) ಮತ್ತು ಗುತ್ತಕರು ಕದಂಬ ವಂಶಜರಾಗಿದ್ದರೋ ಇಲ್ಲವೋ ತಿಳಿಯದು, ಆದರೆ ಅವರು ಕದಂಬರನ್ನು ಗೌರವಿಸುತ್ತಿದ್ದರೆಂಬುದರಲ್ಲಿ ಮತ್ತು ಸಮುದ್ರ ವ್ಯಾಪಾರಿಗಳಾಗಿದ್ದರೆಂಬುದರಲ್ಲಿ ಅನುಮಾನವಿಲ್ಲ. ಇದು ಏನೇ ಇರಲಿ, ಈ ಕಾಲದಲ್ಲಿ ಕದಂಬರು ಸಿಂಹಳದೊಡನೆ ವಾಣಿಜ್ಯ ಸಂಬಂಧವನ್ನು ಹೊಂದಿ, ಅಲ್ಲಿ ಅವರ ಅಧಿಕಾರವನ್ನು ವಿಸ್ತರಿಸಿಕೊಳ್ಳಲು ಶ್ರಮಿಸಿದ್ದರೆ ಮತ್ತು ಆಗ ಅವರು ತಮಿಳರ ವಿರುದ್ಧ ಕಾದಾಡಬೇಕಾದ ಪ್ರಸಂಗ ಬಂದಿದ್ದರೆ ಆಶ್ಚರ್ಯಪಡಬೇಕಿಲ್ಲ. ಕನ್ನಡ ಮತ್ತು ವಟ್ಟಿಯುತ್ತು ಶಾಸನಗಳಿರುವ ೫ನೆಯ ಶತಮಾನದ (ಚಿತ್ರದುರ್ಗ ಜಿಲ್ಲೆಯ)ತಮಟಕಲ್ಲು ವೀರಗಲ್ಲು ಸೂಚಿಸುವ ಈ ಬಗೆಯ ಕಾದಾಟವನ್ನು ಇಲ್ಲಿ ನಾವು ಜ್ಞಾಪಿಸಿಕೊಳ್ಳಬಹುದು.

(ಆ) ಕದಂಬರಂತೆ 'ಮೊರಿಯ'ರೂ ಸಿಂಹಳದೊಡನೆ ಸಂಬಂಧವಿಟ್ಟುಕೊಂಡ ಬಗ್ಗೆ ಶಾಸನಿತ ಆಧಾರಗಳು ದೊರೆಯುವುವು. ೫ನೆಯ ಶತಮಾನದಾರಂಭದಲ್ಲಿ ತಮಿಳರು ಕೆಲ ಕಾಲ ಸಿಂಹಳವನ್ನು ಆಳಿದಾಗ ಅವರನ್ನು ಅಲ್ಲಿಂದ ಹೊರಹಾಕಿದವನು 'ಮೊರಿಯ' ವಂಶದ ಧಾಸುಸೇನ ('ಸೇನ' ಪದವನ್ನು ಗಮನಿಸಿ). ಇವನ ಪುತ್ರ ಕಸ್ಸಪನೇ ಪ್ರಖ್ಯಾತ ಸೀಗಿರಿಯ ರೂವಾರಿ. ಧಾಸುಸೇನನು ತನ್ನ ಜೀವನವನ್ನು ಸ್ವಇಚ್ಛೆಯಿಂದ (ಸಮಾಧಿಮರಣ?) ಅಂತ್ಯ ಮಾಡಿಕೊಂಡನು.[೨೪] ಶಂಕಂ ಕವಿಗಳು 'ಮೊರಿಯ' ಮತ್ತು 'ವಂಬಮೊರಿಯ'ರನ್ನು ಹಲವು ಬಾರಿ ಉಲ್ಲೇಖಿಸಿರುವರು. ಆದರೆ ಕ್ರಿ.ಶ. ೫ನೆಯ ಶತಮಮಾನದ ಈ ಮೊರಿಯರು ಕೊಂಕಣ ಮೌರ್ಯರಾಗಿರಲು ಸಾಧ್ಯ. ಅಂದರೆ ಕದಂಬರಂತೆ ಪಶ್ಚಿಮ ಕರಾವಳಿಯ ಪ್ರದೇಶದವರಾದ ಇವರೂ ಸಿಂಹಳದೊಡನೆ ಸಂಪರ್ಕ ಹೊಂದಿದ್ದರೆಂದು ಭಾವಿಸಬೇಕಾಗುವುದು.

(ಇ) ೨-೪ನೆಯ ಶತಮಾನಗಳ ಸಿಂಹಳಬ್ರಾಹ್ಮೀ ಶಾಸನಗಳಲ್ಲಿ ಬರುವ ಹೆಂಗಸರು ತಮ್ಮ ಪತಿಯ ಹೆಸರಿನೊಡನೆ 'ಅಬ್ಬೆ' ಪ್ರತ್ಯಯವನ್ನು ಸೇರಿಸಿ ಕರೆದುಕೊಂಡಿರುವುದು ತುಂಬಾ ಕೊತೂಹಲಕರವಾದ ವಿಷಯ. ಪುಸ್ಸನ ಮಡದಿ 'ಪುಸಬಿ' ಎಂದು, ಕಾದಸ ಹೆಂಡತಿ 'ಕಾದಬಿ'

ಎಂದು ಕರೆದುಕೊಂಡಂತೆ, ಮಿತಬಿ, ಚೆತಬಿ, ಅಮಲಬಿಯರು ಕರೆದುಕೊಂಡ ವಿವರಗಳು ಈ ಶಾಸನಗಳಲ್ಲಿ ದೊರೆಯುವುವು. ಆರಂಭಕಾಲದಲ್ಲಿ ಅರಸಿಯರಿಗೆ ಮಾತ್ರ ಸೀಮಿತವಾಗಿದ್ದ ಈ ವಿಶೇಷಣವು ನಂತರ ಪ್ರತಿಷ್ಠಿತ ಮನೆತನದ ಹೆಂಗಸರಿಗೂ ಕಾಲಾನಂತರ ಸಾಮಾನ್ಯ ಗೃಹಣಿಯರಿಗೂ ವಿಸ್ತರಿಸಿತೆಂದು ಕಾಣುವುದು.[೨೯] ಈ 'ಅಬು', 'ಅಂಬು', 'ಅಬ್ಬೆ', 'ಬ' ಪ್ರತ್ಯಯಗಳು ಇಂದಿಗೂ ಬನವಾಸಿ ಪ್ರದೇಶವನ್ನು ಒಳಗೊಂಡು ಉತ್ತರ ಕರ್ನಾಟಕದಲ್ಲೆಲ್ಲಾ ಪ್ರಸಾರದಲ್ಲಿದ್ದು, ಸಾಮಾನ್ಯರ ನುಡಿಗಟ್ಟಿನ ಭಂಡಾರವನ್ನು ಸೇರಿಕೊಂಡಿವೆ. ಈ ಪದದ ಪೂರ್ವೇತಿಹಾಸವನ್ನು ಶೋಧಿಸಿ ಇದು ಸಿಂಹಳದಲ್ಲಿ ಮೊದಲು ಪ್ರಚಾರಕ್ಕೆ ಬಂದ ಬಗೆಯನ್ನೂ ಆ ನಂತರ ಕಾಲದಲ್ಲಿ ಕರ್ನಾಟಕದಲ್ಲಿ ವಿಶೇಷವಾಗಿ ಗಟ್ಟಿಗೊಳ್ಳಲಿದ್ದ ಕಾರಣಗಳನ್ನೂ ನಾವು ತಿಳಿದುಕೊಳ್ಳಬೇಕಾಗಿದೆ.

ತಮಿಳಹಂ ಮತ್ತು ಬ್ರಾಹ್ಮೀಲಿಪಿ : ಒಂದು ಪ್ರಬುದ್ಧ ಮತ್ತು ಸಾಹಿತ್ಯಿಕ ಭಾಷೆಯಾಗಿ ಕ್ರಿಸ್ತಪೂರ್ವ ಶತಕಗಳಲ್ಲಿ ತಮಿಳು ಹೊರಹೊಮ್ಮಿರಲು ಸಾಧ್ಯ, ಆದರೆ ಎಷ್ಟು ಶತಮಾನಗಳ ಕಾಲ ಅದು ಮೌಖಿಕವಾಗಿ ಮುಂದುವರಿದಿತ್ತೆಂಬುದನ್ನು ನಿರ್ಧರಿಸಲು ತೊಡಕುಗಳಿವೆ. ಕ್ರಿ.ಪೂ. ೩-೨ನೆಯ ಶತಮಾನಗಳಲ್ಲಿ ತಮಿಳರು ಶ್ರೀಲಂಕೆಯೊಡನೆ ವಾಣಿಜ್ಯ ಮತ್ತು ರಾಜಕೀಯ ಸಂಪರ್ಕವನ್ನಿಟ್ಟುಕೊಂಡದ್ದನ್ನು ಅಲ್ಲಗಳೆಯುವಂತಿಲ್ಲ, ಆದರೆ ಅವರು ಈ ಕಾಲದಲ್ಲಿ ತಮಿಳನ್ನಾಗಲೀ ಸಿಂಹಳವನ್ನಾಗಲೀ ಬಳಸಿ ಸಿಂಹಳದಲ್ಲಿ ಒಂದೂ ಶಾಸನವನ್ನು ಹೊರಡಿಸಲಿಲ್ಲವೆಂಬುದು ಗಮನಾರ್ಹ. ಆರಂಭಕಾಲದ ಸಿಂಹಳಬ್ರಾಹ್ಮೀ ಶಾಸನಗಳಲ್ಲಿ ಪ್ರಾಕೃತ ಪ್ರಭಾವವನ್ನು ಗುರುತಿಸಲಾಗಿದೆಯೇ ಹೊರತು, ಸಂಸ್ಕೃತ, ಪಾಲಿ ಮತ್ತು ತಮಿಳಿನ ಪ್ರಭಾವವನ್ನಲ್ಲ. ೫ನೆಯ ಶತಮಾನದಲ್ಲಿ, ತಮಿಳು ಮೂಲದ ಖುದುದ್ದಪಾರಿಂದನು ಅನುರಾಧಪುರದಿಂದ ಕೆಲವು ಕಾಲ ಆಳಿದಾಗ ಅವನ ಅರಸಿ ಸಿಂಹಳಬ್ರಾಹ್ಮೀಯಲ್ಲಿ ಶಾಸನಗಳನ್ನು ಹೊರಡಿಸಿದಳಾಗಲಿ, ತಮಿಳಿನಲ್ಲಲ್ಲ. ಬ್ರಾಹ್ಮೀಯಿಂದ ಕ್ರಮೇಣ ಮುಕ್ತಗೊಳ್ಳುತ್ತಾ ಸಿಂಹಳಲಿಪಿಯು ಸ್ವಾತಂತ್ರ ಪಡೆದುಕೊಂಡ ನಂತರ ಮಾತ್ರ ಪಲ್ಲವ ಗ್ರಂಥ ಮತ್ತು ಸಂಸ್ಕೃತ ಶಾಸನಗಳು ಸಿಂಹಳದಲ್ಲಿ ಬಳಕೆಗೆ ಬರತೊಡಗಿದವು, ಅಲ್ಲದೆ ಇದೇ ಕಾಲದ ಬಾದಾಮಿ ಚಾಳುಕ್ಯರ ಶಾಸನಗಳ ಪ್ರಭಾವವನ್ನೂ ಇಲ್ಲಿ ಗುರುತಿಸಲಾಗಿದೆ.[೩೦] ಇದು ಏನೇ ಇರಲಿ, ಈ ಕಾಲದ ಒಂದು ತಮಿಳು ಶಾಸನವನ್ನೂ ಶ್ರೀಲಂಕೆಯಲ್ಲಿ ಕಾಣದಿರುವುದು, ತಮಿಳು ಮೂಲದ ಪದಗಳು ಇಲ್ಲವೆನ್ನುವಷ್ಟು ಅಪರೂಪವಾಗಿ ಸಿಂಹಳದ ಶಾಸನಗಳಲ್ಲಿ ೮ನೆಯ ಶತಮಾನದ ನಂತರವೂ ಕಾಣುವುದು ತುಂಬಾ ಕುತೂಹಲಕಾರಕ.

ಶಂಕಂ ಕಾವ್ಯದಲ್ಲಸಿ ನಂದ ಮತ್ತು ಮೌರ್ಯರು : ಶಂಕಂ ಕವಿಗಳು ನಂದರನ್ನು ಜ್ಞಾಪಿಸಿಕೊಂಡರೂ ತಮಿಳಹಂನೊಡನೆ ಅವರನ್ನು ಪ್ರಸ್ತುತಗೊಳಿಸಿಕೊಳ್ಳುವುದಿಲ್ಲ. 'ವೇಲ್‌ಪ್ಪೋರ್ ನಂದರ್' ಅಂದರೆ 'ಸುಪ್ರಸಿದ್ಧ ನಂದರು' ಎಂದು ಅವರನ್ನು ಗುರುತಿಸಿ, ಸಂಪದ್ಭರಿತ ಪಾಟಲೀಪುತ್ರದಿಂದ ಅವರು ಆಳುತ್ತಿದ್ದುದನ್ನೂ ಗಂಗಾನದಿಯಲ್ಲಿ ಸಂಗ್ರಹಿಸಿಟ್ಟ ಅವರ ಅಪಾರ ನಿಧಿಯನ್ನೂ ಕವಿ ಮಾಮೂಲ್ನಾರ್ ಉಲ್ಲೇಖಿಸುವನು.[೩೧] ನಂದರನ್ನು ದೂರದಿಂದಲೇ ಕಂಡ ಈ ಕವಿ ಮೌರ್ಯರು ತಮಿಳಹಂ ಒಳಗೆ ನುಗ್ಗಲು ಪ್ರಯತ್ನಿಸಿದ್ದನ್ನು ಕಣ್ಣಾರೆ ಕಂಡವನೆಂಬಂತೆ ವರ್ಣಿಸುವನು. ಅಪಾರ ಸೈನ್ಯದೊಡನೆ ಮೌರ್ಯರು ತಮಿಳಹಂ

ಕಡೆ ಬಂದುದನ್ನೂ, ಈ ಸೇನಾ ಮುಂಚೂಣಿಯಲ್ಲಿ ವಡುಗರು ನಿಂತು ಅವರಿಗೆ ಮಾರ್ಗದರ್ಶನ ಮಾಡಿದುದನ್ನೂ ತಮ್ಮ ಯುದ್ಧ ಯೋಜನೆಗೆ ಸಹಕಾರ ನೀಡದ ಮೋಹರ್ ಮುಂತಾದ ಗಡಿನಾಡ ನಾಯಕರನ್ನು ಸದೆಬಡಿಯಲು ಅವರು ಪ್ರಯತ್ನಿಸಿದುದನ್ನೂ ಈ ಕವಿ ವಿವರಿಸುವನು.

'ಆಕಾಶವನ್ನು ಚುಂಬಿಸುವ ದುರ್ಗಮ ಗಿರಿಪ್ರದೇಶವನ್ನು ದಾಟಲು ಮೌರ್ಯರು ಸದೃಢ ರಥಗಳನ್ನು ತಂದರು; ಧ್ವಜಗಳಿಂದ ಅಲಂಕಾರಗೊಂಡಿದ್ದ ಅವುಗಳ ಚಕ್ರಗಳು ಉರುಳಿದೆಡೆಯಲ್ಲೆಲ್ಲಾ ಹೊಸ ಜಾಡು ಮಾಡಿಕೊಂಡು ಮುನ್ನುಗ್ಗಿದವು. ಥಳಥಳ ಹೊಳೆಯುವ ನದಿ ಝರಿಗಳ ಈ ಗುಡ್ಡಗಾಡಿನಲ್ಲಿ ಹೆಬ್ಬುಲಿಯೊಂದನ್ನು ತನ್ನ ಧವಳದಂತದಲ್ಲಿ ಆನೆ ಬಂಧಿಸಿತ್ತು; ಈ ಬಂಧನದಿಂದ ತಪ್ಪಿಸಿಕೊಳ್ಳಲು ಆ ಹುಲಿ ಸೆಣಸಾಡಿದಾಗ ಅದನ್ನು ಮತ್ತೊಮ್ಮೆ ನೆಲಕ್ಕೊತ್ತಿ ಜಜ್ಜಿ ಹಾಕಿ, ಗರ್ವದಿಂದ ತೇಗದ ಕಾಡಿನೆಡೆ ಧಾವಿಸಿತು' ಎಂದು ಒಂದೆಡೆ ಮಾಮೂಲನಾರ್ ಬಣ್ಣಿಸುವನು.[೨೮] ಮೌರ್ಯರನ್ನು 'ವಂಬ' ಪೂರ್ವಪ್ರತ್ಯಯ ದಿಂದ ಶಂಕಂ ಕವಿಗಳು ಕೆಲವು ಬಾರಿ ಹೆಸರಿಸುವರು.[೨೯] 'ವಂಬ' ಎಂದರೆ 'ಹೊಸಬರು', 'ಹೊರಗಿನವರು', 'ಪರದೇಶಿಗರು', 'ದಾರಿಹೋಕರು', 'ಕದನಪ್ರಿಯರು' ಎಂಬ ಅರ್ಥ ಗಳನ್ನು ಕೊಡಲಾಗಿದೆ. ಮೌರ್ಯರ ನೆರವಿಗೆ ನಿಂತ ಕೋಸರ್ ನಾಯಕನನ್ನು ಬೆಂಬಲಿಸಲು ಅವರ ಶತ್ರುಗಳಾದ ಮೋಹರ್ ವಿರುದ್ಧ ಧಾವಿಸಿ ಬಂದುದನ್ನೂ ಈ ಕವಿ ಇನ್ನೊಂದೆಡೆ ವಿವರಿಸುವನು. ಬಿಲ್ಲು ಕಾಳಗದಲ್ಲಿ ಪ್ರಸಿದ್ಧರಾದ ವಡುಗರು ಮೌರ್ಯ ಸೈನ್ಯದ ಮುಂಚೂಣಿ ಯಲ್ಲಿ ನಿಂತು ಅದಕ್ಕೆ ಮಾರ್ಗದರ್ಶನ ಮಾಡುತ್ತಿದ್ದುದನ್ನು ಅವನು ಮತ್ತೊಂದೆಡೆ ವಿವರಿಸುವನು.[೩೦] ಬಹುಶಃ ಇಂತಹ ಒಂದು ಸಂದರ್ಭದಲ್ಲಿ 'ಪಾಟಿ' ಎಂಬ ನಾಯಕನ ಕೋಟೆಗೆ ಚೋಳನು ಲಗ್ಗೆ ಹಾಕಿ, ವಂಬವಡುಗರ ತಲೆ ತರೆದು ಅವನ್ನು ಭೂಮಿಯ ಮೇಲೆ ಹೊದಿಸಿದಾಗ, ದಂತ ಕತ್ತರಿಸಿದ ಆನೆಗಳ ರುಂಡಗಳನ್ನು ಹೊದಿಸಿದಂತೆ ಅದು ಕಾಣುತ್ತಿತ್ತೆಂದು ಕವಿ ಇದೈಯನ್ ಶೇಂದನ್ ಕೊಟ್ರನಾರ್ ಕೊಟ್ಟಿರುವ ಚಿತ್ರಕ್ಕೂ ಮೌರ್ಯರೊಡನೆ ಕಾದಾಡಿದ ರಣರಂಗದ ಚಿತ್ರಕ್ಕೂ ಏನಾದರೂ ಸಂಬಂಧವಿರುವುದೇನೋ ಎಂಬ ಕುತೂಹಲ ಉಂಟಾಗುವುದು.[೩೧]

ದಕ್ಷಿಣದಂಚಿನ ಪೊದಿಯ ಬೆಟ್ಟದ ವರೆಗೂ ಮೌರ್ಯರು ದಾಳಿ ಮಾಡಿದರೆಂಬ ಒಂದು ಅಭಿಮತವಿದೆ. ಆದರೆ ಇದಕ್ಕೆ ಶಂಕಂ ಸಾಹಿತ್ಯದಲ್ಲಿ ಮನ್ನಣೆ ದೊರೆಯುವುದಿಲ್ಲ. ಒಂದುವೇಳೆ ಇದು ನಿಜವಾಗಿದ್ದರೆ ತಮಿಳು ರಾಜಕೀಯ ಶಕ್ತಿಗಳು ಈ ದಾಳಿಯಿಂದ ಎಚ್ಚೆತ್ತು, ತಮ್ಮ ಸಂಘಟನೆಯನ್ನು ಬಲಪಡಿಸಿಕೊಂಡು, ಮೌರ್ಯರನ್ನು ತಮಿಳಹಂನಿಂದ ಹೊರ ಹಾಕಿದ್ದಲ್ಲದೆ ಮುಂದೆಂದೂ ಅವರು ಅಲ್ಲಿ ಕಾಲಿಡದಂತೆ ಕಟ್ಟೆಚ್ಚರ ವಹಿಸಿದರೆಂದು ಕಾಣುವುದು. ಇದನ್ನು ಪ್ರತಿಪಾದಿಸಲು ಕ್ರಿ.ಪೂ. ೨ ನೆಯ ಶತಮಾನದ ಕಳಿಂಗ ಖಾರವೇಳನ ಹಾತಿಗುಂಫ ಶಾಸನ ನೆರವಿಗೆ ಬರುವುದು. ೧೧೩. ವರ್ಷ ಕಾಲ ಅಸ್ತಿತ್ವದಲ್ಲಿದ್ದ 'ತ್ರಮಿಕದೇಸ ಸಂಘತಮ್' ಎಂಬ ಸೇನಾ ಒಕ್ಕೂಟವನ್ನೂ ಇದರಿಂದ ಕಳಿಂಗ ರಾಜ್ಯಕ್ಕೆ ಸದಾ ಇದ್ದ ವಿಪತ್ತನ್ನೂ ಈ ಶಾಸನದಲ್ಲಿ ಸ್ಪಷ್ಟವಾಗಿ ವಿವರಿಸಲಾಗಿದೆ.[೩೨] ಅಂದರೆ ಅಶೋಕ ಕಳಿಂಗವನ್ನು ಜಯಿಸಿ, ಅಲ್ಲಿಂದ ಸುವರ್ಣಗಿರಿಯನ್ನು ಯಶಸ್ವಿಯಾಗಿ ತಲುಪಿದಾಗ, ತಮಿಳರು ಒಂದು ಸೇನಾ ಒಕ್ಕೂಟವನ್ನು ನಿರ್ಮಿಸಿಕೊಂಡು ಮೌರ್ಯರನ್ನು ಎದುರಿಸಲು ಸನ್ನದ್ಧರಾಗಿ ನಿಂತರೆಂದು ಭಾವಿಸಬಹುದು.

ಆರಂಭಕಾಲದ ತಮಿಳುಬ್ರಾಹ್ಮೀ ಶಾಸನಗಳನ್ನು, ಮತ್ತು ತಮಿಳು ಸಾಹಿತ್ಯವನ್ನು ಆಧಾರವನ್ನಾಗಿಸಿಕೊಂಡು ನೋಡಿದರೆ, ಅಶೋಕನ (ರಾಜ)ನೀತಿಗಾಗಲೀ ಧರ್ಮಕ್ಕಾಗಲೀ ತಮಿಳಹಂನಲ್ಲಿ ಎಳ್ಳಷ್ಟೂ ಎಡೆ ಸಿಕ್ಕಲಿಲ್ಲವೆಂದೆನಿಸುವುದು. ಈ ಕಾರಣದಿಂದಾಗಿ ದಕ್ಷಿಣ ಭಾರತ ಮತ್ತು ಶ್ರೀಲಂಕೆಯನ್ನು ತಲುಪಿದ ಅಶೋಕಬ್ರಾಹ್ಮೀ ತಮಿಳಹಂ ತಲುಪದಾಯಿತು.

ಕ್ರಿ.ಪೂ. ಸುಮಾರು ೨ನೆಯ ಶತಮಾನದಲ್ಲಿ ಬ್ರಾಹ್ಮೀ ಲಿಪಿ ತಮಿಳಹಂ ತಲುಪಿದ್ದು ಕರ್ನಾಟಕ ಮೂಲದಿಂದ. ಅಂದರೆ ಭದ್ರಬಾಹು-ಚಂದ್ರಗುಪ್ತರೊಡನೆ ಬಂದ ಜೈನರು ಕರ್ನಾಟಕದಲ್ಲಿ ನೆಲೆಸಿ ಸುಮಾರು ಒಂದು ಶತಮಾನಕ್ಕೂ ಹೆಚ್ಚು ಕಾಲದ ನಂತರ ಈ ಮಾಧ್ಯಮಗಳು ತಮಿಳಹಂ ತಲುಪಿದವು ಎಂದು ಅರ್ಥ. ಜೈನ ಸಂಘವನ್ನು ತಮಿಳಹಂಗೆ ಮೊಟ್ಟಮೊದಲ ಬಾರಿಗೆ ಕೊಂಡೊಯ್ದವನು ಭದ್ರಬಾಹುವಿನ ಶಿಷ್ಯ ವಿಶಾಖಮುನಿ ಎಂಬುದನ್ನು ಒಂದು ಜೈನ ಐತಿಹ್ಯ ತಿಳಿಸುವುದು.

ಕ್ರಿ.ಪೂ. ೨ನೆಯ ಶತಮಾನದ ತಮಿಳಹಂನಲ್ಲಿ ದೊರೆತ ಅತ್ಯಂತ ಪುರಾತನ ಬರಹಗಳೆಲ್ಲವೂ ಜೈನ ಗುಹಾಲಯಗಳಿಗೆ ಸಂಬಂಧಪಟ್ಟವೆ. ಆದರೆ ವೈಗೈ (ಮದುರೈ) ನದಿ ಪ್ರದೇಶದ ಹನ್ನೊಂದು ಕೇಂದ್ರಗಳಲ್ಲಿ ದೊರೆತ ಈ ಶಾಸನಗಳ ಒಟ್ಟು ಸಂಖ್ಯೆ ೩೫ ಮಾತ್ರ. ಮುಂದಿನ ಒಂದುನೂರು ವರ್ಷಗಳಲ್ಲಿ (ಕ್ರಿ.ಪೂ. ೧ನೆಯ ಶತಕ) ೨೪ ಶಾಸನಗಳನ್ನು ಇದಕ್ಕೆ ಸೇರಿಸಿಕೊಂಡು, ಈ ಸಂಖ್ಯೆಯನ್ನು ೫೯ಕ್ಕೆ ಎತ್ತರಿಸಿಕೊಳ್ಳಲಾಯಿತು. ಕ್ರಿ.ಪೂ. ಯುಗದ ಈ ಜೈನ ಬರವಣಿಗೆಗಳು ದೊರಕಿರುವುದು ೨೮ ಕೇಂದ್ರಗಳಲ್ಲಿ ಮಾತ್ರ.

ಈ ಕಾಲದ 'ತಮಿಳುಬ್ರಾಹ್ಮೀ' ಬರಹಗಳೆಲ್ಲವೂ ಒಂದೆರಡು ಪದ ಇಲ್ಲವೇ ಒಂದೆರಡು ವಾಕ್ಯಗಳಲ್ಲಿ ಮುಕ್ತಾಯಗೊಳ್ಳುವ ತುಂಡು ಶಾಸನಗಳಾಗಿದ್ದು, ಇದರಲ್ಲಿ ಸುದೀರ್ಘ ಶಾಸನವೆನಿಸಿಕೊಳ್ಳುವ ಮಂಗಳಂ ಶಾಸನವೂ ೫೬ ಅಕ್ಷರಗಳನ್ನು ಮಿಕ್ಕಿಲ್ಲ. ಕ್ರಿ.ಶ. ೨ರಿಂದ ೪ನೆಯ ಕಾಲಾವಧಿಯ ಶಾಸನಗಳಲ್ಲಿ ಕೂಡಾ ಇದು ಹೆಚ್ಚು ಬದಲಾವಣೆಯಾಗಲಿಲ್ಲ, ಏಕೆಂದರೆ ಕ್ರಿ.ಶ. ೨, ೩ ಮತ್ತು ೪ನೇ ಶತಮಾನದವುಗಳೆನ್ನಲಾದ ೯, ೧೬ ಮತ್ತು ೫ ಶಾಸನಗಳಲ್ಲಿ ಯಾವುವೂ ೬೫ ಅಕ್ಷರಗಳನ್ನು ಮಿಕ್ಕಿಲ್ಲ.[೨೨] ಕ್ರಿ.ಪೂ. ೨ನೆಯ ಶತಕದಿಂದ ಕ್ರಿ.ಶ. ೪ನೆಯ ಶತಕ (ಸುಮಾರು ೬೦೦ ವರ್ಷಗಳ) ತಮಿಳುನಾಡಿನ ೩೦ ಕೇಂದ್ರಗಳಲ್ಲಿ ಕಂಡರಿಸಿದ ಶಾಸನಗಳ ಸಂಖ್ಯೆ ನೂರರ ಗಡಿಯನ್ನು ದಾಟಲಿಲ್ಲ ಮಾತ್ರವಲ್ಲ ಇವಾವೂ ಜೈನೇತರ ವ್ಯವಹಾರಕ್ಕೆ ವಿನಿಯೋಗವಾಗಲಿಲ್ಲವೆಂಬುದು ಗಮನಾರ್ಹ. ದೊಡ್ಡದೊಡ್ಡ ಅಕ್ಷರಗಳನ್ನು ವಕ್ರ ಸಾಲುಗಳಲ್ಲಿ ಮೂಡಿಸಿರುವ ಈ ಶಾಸನಗಳ ಲಿಪಿಕಾರರು ಅಕ್ಷರಾಭ್ಯಾಸಕ್ಕೆ ಮೊದಲ ಹೆಜ್ಜೆ ಇಟ್ಟವರ ಬಾಲಲಿಪಿಯನ್ನು ನೆನಪಿಗೆ ತಂದುಕೊಡುವುವು. ಬರೆಯಲು ಪ್ರಯಾಸಪಡುವವನು ಆದಷ್ಟು ಸಂಕ್ಷಿಪ್ತವಾಗಿ ವಿಷಯಸೂಚಿಸಿ ಮುಗಿಸುವಂತೆ, ಈ ಶಾಸನಗಳು ೨-೩ ರಿಂದ ೬೫ ಅಕ್ಷರಗಳಲ್ಲಿ ಮುಕ್ತಾಯಗೊಳ್ಳುವುವು. ಅಲ್ಲದೆ ಇವಾವೂ ೫ ಚಿಕ್ಕ ಸಾಲುಗಳನ್ನು ಮಿಕ್ಕಿಲ್ಲ.

ತಮಿಳುನಾಡಿನ ಈ ಬರಹ ಸಾಧನೆಯನ್ನು ಅದರ ಉತ್ತರ ಮತ್ತು ದಕ್ಷಿಣ ಪ್ರದೇಶಗಳ ಸಾಧನೆಗಳೊಡನೆ ಹೋಲಿಸಿ ನೋಡಿದರೆ, ಈ ಚಿತ್ರ ಇನ್ನೂ ಹೆಚ್ಚು ಅರ್ಥಪೂರ್ಣಗೊಳ್ಳುವುದು. ಕರ್ನಾಟಕ ಮತ್ತು ಆಂಧ್ರ ಪ್ರದೇಶದ ಜನಾಂಗಗಳು ಈ ಕಾಲದಲ್ಲಿ ಸುದೀರ್ಘ

ಶಾಸನಗಳನ್ನು ಬರೆಯುವ, ಬರೆಸುವ, ಮತ್ತು ಲಿಪಿ ಮೂಲಕ ವ್ಯವಹರಿಸುವ ಬಗೆಯನ್ನು ಹೆಚ್ಚು ಪರಿಣಾಮಕಾರಿಯಾಗಿ ಕರಗತ ಮಾಡಿಕೊಂಡಿದ್ದರೆನ್ನುವುದರಲ್ಲಿ ಅನುಮಾನವಿಲ್ಲ. ಅಶೋಕನ ಹೆಬ್ಬಂಡೆ, ಕಿರುಬಂಡೆ, ಸ್ತಂಭ, ಶಿಲಾಫಲಕ ಶಾಸನಗಳಲ್ಲದೆ, ಶಾತವಾಹನ, ಇಕ್ಷ್ವಾಕು, ಸಾಲಂಕಾಯನ, ವಿಷ್ಣುಕುಂಡಿ, ಚುಟು, ಕದಂಬ, ಪ್ರಾಕೃತಪಲ್ಲವ, ಈ ಮುಂತಾದವರ ಸರಿಸುಮಾರು ಒಂದು ಸಾವಿರ ಶಾಸನಗಳು ಈ ಆರುನೂರು ವರ್ಷಗಳಲ್ಲಿ ಕರ್ನಾಟಕ-ಆಂಧ್ರ ಪ್ರದೇಶದಲ್ಲಿ ಹೊರಬಂದುದಕ್ಕೆ ಆಧಾರಗಳಿವೆ. ಇಂತಹ ಅರವತ್ತಕ್ಕೂ ಮೀರಿದ ಕೇಂದ್ರಗಳಲ್ಲಿಯ ಶಾಸನಗಳಲ್ಲಿ ಅಮರಾವತಿಯಲ್ಲಿ ದೊರೆತ ಸು. ೨೧೨, ನಾಗಾರ್ಜುನ ಕೊಂಡದಲ್ಲಿ ದೊರೆತ ಸು. ೭೫, ಸಣ್ಣತಿಯಲ್ಲಿ ದೊರೆತ ಸು. ೮೦ ಶಾಸನಗಳನ್ನು ಗಮನಿಸಿದರೆ, ಇಲ್ಲಿಯ ಬರಹ ವ್ಯವಹಾರದ ಆಳವನ್ನೂ ವಿಸ್ತಾರವನ್ನೂ ನಾವು ಕಲ್ಪಿಸಿಕೊಳ್ಳಬಹುದಾಗಿದೆ.[೩೪]

ಸಿಂಹಳ ಪುರಾತನ ತಮಿಳಹಂ ಅಂಗವಾಗಿತ್ತೆಂಬ ತಮಿಳರ ವಾದವನ್ನು ಹಿಂದಿನ ಲೇಖನಗಳಲ್ಲಿ ಗಮನಿಸಿದ್ದೇವೆ. ಆದರೆ 'ಬರಹ ಕ್ಷೇತ್ರ'ದಲ್ಲಿ ಸಿಂಹಳದ ವಾಸ್ತವ ಅನುಭವವು ತಮಿಳುನಾಡಿನ ಅನುಭವಕ್ಕಿಂತ ತುಂಬಾ ಭಿನ್ನವಾಗಿರುವುದು ಎದ್ದುಕಾಣುವುದು. ಈ ಆಧಾರದಿಂದ ಕ್ರಿ.ಪೂ ಯುಗದ ಶ್ರೀಲಂಕಾ ದ್ವೀಪವು ತಮಿಳು ಸಾಹಿತ್ಯದ ಪ್ರಭಾವಕ್ಕೆ ಲವಲೇಶವೂ ಒಳಗಾಗದೇ ಭಿನ್ನ ಬಗೆಯಲ್ಲಿ ತನ್ನ ಭಾಷಾ ಮತ್ತು ಲಿಪಿಯ ಇತಿಹಾಸವನ್ನು ನಿರ್ಮಿಸಿಕೊಂಡಿತೆಂದು ಸಾಧಿಸಲಾಗಿದೆ. ಅಶೋಕ ಸಾಮ್ರಾಜ್ಯದ ಭಾಷೆ, ಲಿಪಿ, ಮೌಲ್ಯ, ಧರ್ಮ ಮತ್ತು ಸಂಸ್ಥೆಗಳೊಡನೆ ನಿಕಟ ಹಾಗೂ ನೇರ ಸಂಬಂಧವಿಟ್ಟುಕೊಂಡಿದ್ದರಿಂದ, ಸಿಂಹಳವು ಇಷ್ಟೊಂದು ಪ್ರಗತಿ ಸಾಧಿಸಲು ಸಾಧ್ಯವಾಯಿತೆಂದು ಭಾವಿಸಲಾಗಿದೆ.

ಕ್ರಿ.ಪೂ. ೩ರಿಂದ ಕ್ರಿ.ಶ. ೪ನೆಯ ಶತಕದ (೬೦೦ ವರ್ಷಗಳಲ್ಲಿ)ಲ್ಲಿ ಸಿಂಹಳೀಯರು ಒಟ್ಟು ೩,೪೪೦ ಶಾಸನಗಳನ್ನು ಬರೆಸಿ ತಮಿಳರಿಗಿಂತ ಸುಮಾರು ೩.೫೦ ಹೆಚ್ಚು ಪಟ್ಟು ಲಿಪಿ ವ್ಯವಹಾರದಲ್ಲಿ ತೊಡಗಿದ್ದುದು ಈ ಅಂಕೆಸಂಖ್ಯೆಗಳಿಂದ ವ್ಯಕ್ತಗೊಳ್ಳುತ್ತದೆ. ಇದಕ್ಕಿಂತಲೂ ಮುಖ್ಯವಾದ ಅಂಶವೆಂದರೆ ಕ್ರಿ.ಪೂ. ಕಾಲದ ಸಂಕ್ಷಿಪ್ತ ಗುಹಾಲಯ ಶಾಸನಗಳನ್ನು ಬಿಟ್ಟು ಉಳಿದ ಶಾಸನಗಳು ಸಿಂಹಳೀಯರ ರಾಜಕೀಯ, ಧಾರ್ಮಿಕ, ಸಾಮಾಜಿಕ ಹಾಗೂ ಆರ್ಥಿಕ ಜೀವನದ ಬಗ್ಗೆ ಪೂರ್ಣಪ್ರಮಾಣದ ಬೆಳಕು ಚೆಲ್ಲುವುದು. ಇವರು ಬ್ರಾಹ್ಮೀ ಲಿಪಿಯನ್ನು ತನ್ನ ನೆಲದ ಭಾಷೆಗೆ ಅಳವಡಿಸಿಕೊಂಡು 'ಸಿಂಹಳಬ್ರಾಹ್ಮೀ'ಯನ್ನು ಸೃಷ್ಟಿಸಿಕೊಂಡಿದ್ದನ್ನು ಅನುಕರಿಸಿ ಇಲ್ಲವೇ ಅದರಿಂದ ಸ್ಫೂರ್ತಿ ಪಡೆದು, ಅಂದಾಜು ಒಂದು ಶತಮಾನದ ನಂತರ, 'ತಮಿಳುಬ್ರಾಹ್ಮೀ'ಯನ್ನು ತಮಿಳರು ಸೃಷ್ಟಿಸಿಕೊಂಡರೆಂದರೆ ತಪ್ಪಾಗಲಿಕ್ಕಿಲ್ಲ. ಇದು ಏನೇ ಇರಲಿ, ಸುಮಾರು ಆರುನೂರು ವರ್ಷ ಕಾಲದ ಪ್ರಯತ್ನದ ನಂತರವೂ 'ತಮಿಳುಬ್ರಾಹ್ಮೀ', 'ಸಿಂಹಳಬ್ರಾಹ್ಮೀ'ಯ ಗುಣಮಟ್ಟವನ್ನಾಗಲೀ ವಿಷಯ ವೈಶಾಲ್ಯತೆಯನ್ನಾಗಲೀ ಸಂಪಾದಿಸಿ ಕೊಳ್ಳದೆ, ಅಸಮರ್ಪಕ ಮತ್ತು ಅಪಕ್ವ ಮಾಧ್ಯಮವಾಗಿಯೇ ಉಳಿಯಿತು. ತನ್ನ ಅಭಿವ್ಯಕ್ತಿ ಮಾಧ್ಯಮವನ್ನು ಉತ್ತಮಗೊಳಿಸಿಕೊಳ್ಳಲು ತಮಿಳುಬ್ರಾಹ್ಮೀಯಿಂದ ದೂರ ಸರಿಯುತ್ತಾ, ಕ್ರಿ.ಶ. ೫ನೆಯ ಶತಕದ ಆರಂಭದಲ್ಲಿ ವಟ್ಟೆಳುತ್ತು ಲಿಪಿಯನ್ನು ತಮಿಳರು ಹೆಚ್ಚು ಹೆಚ್ಚು ಅವಲಂಬಿಸತೊಡಗಿದರು. ವಟ್ಟೆಳುತ್ತು ಲಿಪಿ ಬಳಸಿ ಕರ್ನಾಟಕದ ಚಿತ್ರದುರ್ಗ ಜಿಲ್ಲೆಯ

ವರೆಗೂ ಇವರು ವ್ಯವಹರಿಸಲು ಪ್ರಯತ್ನಿಸಿದರೆಂಬುದಕ್ಕೆ ತಮಟಕಲ್ಲಿನ ಒಂದು ಶಾಸನ ಆಧಾರ ಒದಗಿಸುವುದು.[೩೯] ಆದರೆ ಅರಸರ ಹೆಸರುಗಳನ್ನು ಮತ್ತು ಸಂಸ್ಕೃತ ಪದಗಳನ್ನು ಬರೆಯಲು ವಟ್ಟೆಳುತ್ತು ಲಿಪಿಯೂ ಸಹಕಾರಿಯಾಗದ ಕಾರಣ, ಇಂತಹ ಪದಗಳನ್ನು ಗ್ರಂಥಲಿಪಿಯಲ್ಲಿ ಬರೆದು ಅವರು ತೃಪ್ತಿಪಟ್ಟುಕೊಳ್ಳಬೇಕಾಯಿತು. ಸಂಸ್ಕೃತ ಪದಗಳು ಇನ್ನೂ ಹೆಚ್ಚೆಚ್ಚಗೊಳ್ಳತೊಡಗಿದಾಗ ವಟ್ಟೆಳುತ್ತುವಿನ ನಿಷ್ಪ್ರಯೋಜಕತೆ ಹೆಚ್ಚು ಮನವರಿಕೆಯಾಗ ತೊಡಗಿ ಕೊನೆಗೆ ಗ್ರಂಥವನ್ನು ಅವರು ಅವಲಂಬಿಸುವಂತೆ ಮಾಡಿತು. ದಕ್ಷಿಣಬ್ರಾಹ್ಮೀ (ಕರ್ನಾಟಕ-ಆಂಧ್ರ) ಲಿಪಿಯಲ್ಲಿ ತನ್ನ ಬೇರು ಕಂಡುಕೊಂಡ ಗ್ರಂಥಲಿಪಿಯನ್ನು ಇನ್ನೂ ಸರಳೀಕರಿಸಿ, ಆವಶ್ಯಕವಾದ ವಟ್ಟೆಳುತ್ತು ಅಕ್ಷರಗಳನ್ನು ಅದರಲ್ಲಿ ಸೇರಿಸಿಕೊಂಡು, ಅಂತಿಮವಾಗಿ ತಮಿಳು ಲಿಪಿಯನ್ನು ೮ನೆಯ ಶತಮಾನದಲ್ಲಿ ಸಿದ್ಧಗೊಳಿಸಲಾಯಿತು. ಇದನ್ನು ಮೊದಲು ಪ್ರಚಾರಕ್ಕೆ ತಂದವರು ಪಲ್ಲವರು ಮತ್ತು ಅವರ ಸಾಮಂತರು. ಇದು ಪರಿಪೂರ್ಣತೆಯನ್ನೂ ಪ್ರೌಢಾವಸ್ಥೆಯನ್ನೂ ಕಂಡುಕೊಂಡದ್ದು ೧೧ನೆಯ ಶತಮಾನದ ಚೋಳರ ಆಳ್ವಿಕೆ ಕಾಲದಲ್ಲಿ.[೪೦] ತಮಿಳು ಈ ಬಗೆಯಲ್ಲಿ ಪ್ರೌಢ ಹಂತವನ್ನು ಮುಟ್ಟುವುದಕ್ಕೆ ಸುಮಾರು ಮೂರು ಶತಮಾನಗಳ ಮುಂಚೆಯೇ ಕನ್ನಡ ಲಿಪಿ ಮತ್ತು ಭಾಷೆ ಪರಿಪೂರ್ಣತೆಯನ್ನು ಗಳಿಸಿಕೊಂಡದ್ದನ್ನು ನಾವು ಹಲ್ಮಿಡಿಯ ಶಾಸನ(ಕ್ರಿ.ಶ. ಸು.೪೫೦)ದಲ್ಲಿ ಕಾಣುವೆವು. ಕದಂಬರ ಹಲ್ಮಿಡಿ (ಕ್ರಿ.ಶ. ಸು. ೪೫೦), ತಡಗಣಿ (ಸು.೫೦೦), ತಮಟಕಲ್ಲು(ಸು. ೫೦೦) ಮತ್ತು ಗಂಗರ ತಗರೆ, ಸಿರಿಗುಂದ (ಸು. ೬ನೆಯ ಶತಕ) ಮುಂತಾದ ಆರಂಭಕಾಲದ ಶಾಸನಗಳು ಕನ್ನಡ ಲಿಪಿ ಹೇಗೆ ಭದ್ರ ನೆಲೆಯನ್ನು ಕಂಡುಕೊಳ್ಳುತ್ತಾ ವಿಸ್ತರಿಸಿಕೊಳ್ಳತೊಡಗಿತೆಂಬುದನ್ನು ತೋರಿಸಿಕೊಡುವುವು. ಒಂದು ಸಹಸ್ರಮಾನ ಕಾಲದಲ್ಲಿ, ಮೂರು ದುಸ್ತರ ಮೆಟ್ಟಿಲೇರಿ - ತಮಿಳುಬ್ರಾಹ್ಮೀ, ವಟ್ಟೆಳುತ್ತು, ಗ್ರಂಥತಮಿಳು - ತಮಿಳರು ಸಾಧಿಸಿಕೊಂಡದ್ದನ್ನು, ಬ್ರಾಹ್ಮೀಯಿಂದ ಒಂದೇ ಮೆಟ್ಟಿಲೇರಿ ಕನ್ನಡ ಲಿಪಿ ಮತ್ತು ಭಾಷೆಯನ್ನು ಸಂಪಾದಿಸಿಕೊಂಡದ್ದು ವಿಸ್ಮಯಕಾರಕವಾಗಿದೆ. ಅಲ್ಲದೆ ಬ್ರಾಹ್ಮೀ ಯುಗದಲ್ಲಿ ಕೈಜೋಡಿಸಿ ನಡೆದಂತೆ, ತಮ್ಮದೇ ಆದ ಲಿಪಿಯನ್ನು ಗಳಿಸಿಕೊಂಡ ನಂತರವೂ ಕನ್ನಡಿಗರು ಮತ್ತು ತೆಲುಗರು ಕೆಲವು ಶತಮಾನಗಳ ಕಾಲ ಈ ಹೊಸ ಲಿಪಿಯನ್ನು ಬಳಸಿಕೊಳ್ಳುತ್ತಾ ತಮ್ಮ ಭಾಷೆಯನ್ನು ಬೇರ್ಪಡಿಸಿಕೊಳ್ಳುತ್ತಾ ಬೆಳೆದದ್ದೂ ಇಷ್ಟೇ ಕುತೂಹಲಕಾರಕವಾಗಿದೆ. ಈ ಆರುನೂರು ವರ್ಷ ಕಾಲದಲ್ಲಿ ಪ್ರಾಕೃತವನ್ನೇ ವ್ಯವಹಾರ ಭಾಷೆಯನ್ನಾಗಿ ಮಾಡಿಕೊಂಡ ದಕ್ಷಿಣರು, ಹೇಗೆ ಸ್ವತಂತ್ರ ಲಿಪಿಯನ್ನು ಸೃಷ್ಟಿಸಿಕೊಂಡರು ಮತ್ತು ಈ ಕಾಲಾವಧಿಯಲ್ಲಿ ಕನ್ನಡವನ್ನೂ ತೆಲುಗನ್ನೂ ಬೆಳೆಸಲು ಪ್ರಾಕೃತ ಹೇಗೆ ನೆರವಾಯಿತು ಮತ್ತು ಹೇಗೆ ಅಡ್ಡಿಯಾಯಿತು, ಎಂಬುದನ್ನು ನಾವಿನ್ನೂ ಶೋಧಿಸಿ ಅರಿತುಕೊಳ್ಳಬೇಕಾಗಿದೆ.

ಆಕರ/ಟಿಪ್ಪಣಿ:

೧. ಇದು ಇಂದಿನ ಮಟ್ಟಿಗೆ ತೀರ್ಮಾನಿತಗೊಂಡ ವಿಷಯ. ಆದರೆ ಅಂತಿಮ ನಿರ್ಣಯವೆನ್ನಲು ಬಾರದು. ಮ್ಯಾಗಸ್ತನೀಸ್ ಮತ್ತು ಸ್ಟ್ರಾಬೋ ಭಾರತೀಯರಿಗೆ ಲಿಪಿ ಜ್ಞಾನವಿರಲಿಲ್ಲವೆಂಬುದನ್ನು ಗಮನಿಸಿ ಈ ನಿರ್ಣಯಕ್ಕೆ ಬರಲಾಗಿದೆ. ಲಿಪಿಬಳಕೆ ಮಾಡದೇ ಹೇಗೆ ನಂದರು ಬೃಹತ್ ರಾಜ್ಯವನ್ನು ಆಳಿದರೆಂಬುದನ್ನು ನಿದರ್ಶಿಸಿ ಈ ವಾದವನ್ನು ಬಲಗೊಳಿಸಲಾಗಿದೆ. ಇದು ಏನೇ ಇರಲಿ ಮೌರ್ಯಪೂರ್ವಕಾಲದ ದೇಸಿ ಲಿಪಿಯ ಕುರುಹುಗಳು ತುಂಬಾ ಅಪರೂಪ, ರಾಜ್ಯದ ವ್ಯವಹಾರಕ್ಕೆ ಬಳಸಿದ ಶಿಲಾಫಲಕಗಳು

ಅಶೋಕನ ಕಾಲಕ್ಕಿಂತ ಮೊದಲು ಸಿಗುವುದಿಲ್ಲ. ಅನುರಾಧಪುರದಲ್ಲಿ ದೊರೆತ 'ಗಡಿಗ'ಗಿಷ್ಟು ಬ್ರಾಹ್ಮೀ ಲಿಪಿಯಲ್ಲಿರುವುದು ನಿಜ. ಆದರೆ ಅದೊಂದು ನಾಲ್ಕು ಅಕ್ಷರಗಳ ಚಿಕ್ಕಬರಹ ಮತ್ತು ಅದರ ಕಾಲ ನಿರ್ಣಯ ಪ್ರಶ್ನಾರ್ಹ.

೨. ನೋ. ಕೆಳಗೆ ಅ.ಟಿ.೧೫

೩. ಮಿತ್ರ, ರಾಜೇಂದ್ರಲಾಲ್ (ಸಂ.). *ಲಲಿತವಿಸ್ತರ* (೧೮೭೭) ಪು.೧೮೨. - ಉಲ್ಲೇಖ, ಸಿರಿಸೋಮ "ಬ್ರಾಹ್ಮೀ ಇನ್ಸ್ಕ್ರಿಪ್ಷನ್ ಆಫ್ ಶ್ರೀಲಂಕಾ ಫ್ರಮ್ ೩ರ್ಡ್ ಸೆಂಚುರಿ ಬಿ.ಸಿ. ಟು ೬೫ ಎ.ಡಿ", ಇನ್ಸ್ಕ್ರಿಪ್ಷನ್ಸ್, ಸಂ.೨, (ಆರ್ಕಿಯಲಾಜಿಕಲ್ ಡಿಪಾರ್ಟ್‌ಮೆಂಟ್ ಸೆಂಟಿನರಿ (೧೮೯೦-೧೯೯೦), ವಿಜಸೇಖರ, ನಂದದೇವ (ಪ್ರ.ಸಂ.),(ಶ್ರೀಲಂಕಾ, ೧೯೯೦) ಪು.೬, ಅಡಿ. ಟಿ.೨೮ (ಪು.೩೬). ಜೈನ ಪರಂಪರೆಯಲ್ಲಿ (*ಪನ್ನವನಸುತ್ತ*) ಕೂಡಾ ಪ್ರಥಮ ಸ್ಥಾನವನ್ನು ಬಂಭಿ (ಬ್ರಾಹ್ಮೀ)ಗೆ ಕೊಡಲಾಗಿದೆ.

೪. ಶರ್ಮ, ಐ.ಕೆ., "ಅರ್ಲಿ ಸ್ಕಲ್ಪ್ಚರ್ಸ್ ಅಂಡ್ ಎಪಿಗ್ರಫಿ ಫ್ರಂ ಸೌತ್‌ಈಸ್ಟ್ ಇಂಡಿಯ: ನ್ಯೂ ಎವಿಡೆನ್ಸ್ ಫ್ರಮ್ ಅಮರಾವತಿ", *ಇಂಡಿಯನ್ ಎಪಿಗ್ರಫಿ: ಇಟ್ಸ್ ಬೇರಿಂಗ್ ಆನ್ ದಿ ಹಿಸ್ಟರಿ ಆಫ್ ಆರ್ಟ್*, (ಸಂ.) ಆಷರ್, ಎಫ್.ಎಂ., ಮತ್ತು ಗಾಯ್, ಜಿ.ಎಸ್. (ನವದೆಹಲಿ, ೧೯೮೫). ಪು. ೧೯. ಚಿತ್ರ ೨೨.

೫. ಹೊಫ್ಮನ್ಸ್, ಎಚ್., "ಬುದ್ಧಾಸ್ ಪ್ರೀಚಿಂಗ್ ಆಫ್ ಕಾಲಚಕ್ರತಂತ್ರ ಅಟ್ ದಿ ಸ್ತೂಪ ಆಫ್ ಧಾನ್ಯಕಟಕ", *ಜರ್ಮನ್ ಸ್ಕಾಲರ್ಸ್ ಆನ್ ಇಂಡಿಯ*, ಸಂ.೧. (ವಾರಣಾಸಿ, ೧೯೭೩.), ಪು.೧೪೦

೬. ಶರ್ಮ, ಐ.ಕೆ., ಅದೇ. ಅಲ್ಲದೆ ನೋ. *ಬುದ್ಧಿಸ್ಟ್ ಇನ್ಸ್ಕ್ರಿಪ್ಷನ್ಸ್ ಆಫ್ ಆಂಧ್ರದೇಶ*, (ಸಂ.). ಹನುಮಂತರಾವ್, ಬಿ.ಎಸ್.ಎಲ್. ಮುಂತಾದವರು, (ಸಿಕಂದರಾಬಾದ್, ೧೯೯೮). ಪು. ೩೯-೪೨

೭. ಶ್ರವಣಬೆಳ್ಗೊಳದ ಕ್ರಿ.ಶ. ೬೦೦ ರ ಎರಡು ಶಾಸನಗಳು. ಶಿವಕೋಟ್ಯಾಚಾರ್ಯನ ವಡ್ಡಾರಾಧನೆ (೧೦ನೆಯ ಶತಕ) ಅಲ್ಲದೇ ಇನ್ನೂ ಕೆಲವು ಗ್ರಂಥ ಮತ್ತು ಶಾಸನ ಆಧಾರಗಳು ದೊರೆಯುವುವು. ನೋ. ಎಸ್. ಶೆಟ್ಟರ್, *ಶ್ರವಣಬೆಳ್ಗೊಳ*, (ಧಾರವಾಡ, ೧೯೮೧), ಪು.೧೦. ಈ ಐತಿಹ್ಯದ ಉಲ್ಲೇಖ ಹೇಮಚಂದ್ರನ *ಪರಿಶಿಷ್ಟ ಪರ್ವನ್*, ೮, ಪು.೪೧೫ ರಲ್ಲಿ ಬರುವುದೆಂದು ರೋಮಿಲ ಥಾಪರ್ ಹೇಳಿರುವರು, ಆದರೆ ಈ ಗ್ರಂಥದ ಹೆಚ್ಚಿನ ಮಾಹಿತಿ ಅವರ ಗ್ರಂಥಸೂಚಿಯಲ್ಲಿ ದೊರೆಯುವುದಿಲ್ಲ - ನೋ. *ಅಶೋಕ ಅಂಡ್ ದಿ ಡಿಕ್ಲೈನ್ ಆಫ್ ಮೌರ್ಯಾಸ್*, (ದೆಹಲಿ, ೧೯೯೮ ಪು.ಮು), ಪು.೧೪. ಅಡಿ.ಟಿ.೫

೮. ಶರ್ಮ, ಐ.ಕೆ. ಮತ್ತು ವರಪ್ರಸಾದರಾವ್, ಜೆ., *ಅರ್ಲಿ ಬ್ರಾಹ್ಮೀ ಇನ್ಸ್ಕ್ರಿಪ್ಷನ್ಸ್ ಫ್ರಮ್ ಸನ್ನತಿ*, (ನವದೆಹಲಿ, ೧೯೯೩), ಪು.೨-೮, ೧೦೪-೧೦೭. ಈ ಗ್ರಂಥ ಪ್ರಕಟನೆಯಾದ ನಂತರ ಸನ್ನತಿಯಲ್ಲಿ ಒಂದು ಮಹಾಸ್ತೂಪವನ್ನೂ, ಅಶೋಕನದೆನ್ನಲಾದ ಭಾವಶಿಲ್ಪವನ್ನೂ ವರದಿ ಮಾಡಲಾಗಿದೆ. ನೋ. *ಇಂಡಿಯನ್ ಆರ್ಕಿಯಾಲಜಿ-ಎ ರಿವ್ಯೂ*, ೧೯೯೭-೧೯೯೮, ಪು.೯೩-೯೫, ಚಿತ್ರ. ೭೨

೯. 'ಅಯ'(ಸಂ. ಆರ್ಯ; ಪ್ರಾ.ಅಯ್ಯ) ಪುತನು ಆಳುವ ಅರಸನ ಪುತ್ರನಾಗಿದ್ದು ಮುಂದಿನ ಪಟ್ಟಾಧಿಕಾರಿಯಾಗಿರುವುದು ಆರಂಭಕಾಲದ ಶ್ರೀಲಂಕಾ ಶಾಸನಗಳಿಂದ ತಿಳಿದುಬರುವುದು. ನಮ್ಮ ದೇಶದ ಬ್ರಾಹ್ಮೀ ಶಾಸನಗಳಲ್ಲಿ 'ಅಯ' ಪದವು ಹೆಚ್ಚು ಬಾರಿ 'ಭಿಕ್ಷು'ಗಳನ್ನು ಸೂಚಿಸಲು, ಅಪರೂಪವಾಗಿ ಮಾತ್ರ ರಾಜಪುತ್ರನನ್ನು ಸೂಚಿಸಲು ಬಳಕೆಯಾಗಿದೆ ಎಂದು, ಶ್ರೀಲಂಕಾದ ಶಾಸನತಜ್ಞ ಪರನವಿತನ (*ಇನ್ಸ್ಕ್ರಿಪ್ಷನ್ಸ್ ಆಫ್ ಶ್ರೀಲಂಕಾ*, (ಶ್ರೀಲಂಕಾ, ೧೯೭೦), ಸಂ.೧, ಪು. ೧೦೬)ನ ಅಭಿಪ್ರಾಯವನ್ನು ಕೂಲಂಕಷವಾಗಿ ಪರೀಕ್ಷಿಸಬೇಕಾಗಿದೆ.

೧೦. ಸಿರಿಸೋಮ, ಅದೇ., ಪು. ೩೧-೩೨

೧೧. *ಶಿಲಪ್ಪದಿಕಾರಂ* ೨೩., ಸಾ. ೧೩೦-೧೪೦; *ಮಣಿಮೇಕಲೈ* ೨೬. ಸಾ. ೧೫-೧೭

೧೨. ಪದಿಟ್ರು. ೩೯, ೧೫; ಪುರನಾ. ೩೫೩, ೩; ೩೭೯, ೬; ಶಿರು. ೧೧೯, ೧೨೦

೧೩. ಸಿರಿಸೋಮ, ಅದೇ, ಪು.೩೪. ಕ್ರಿ.ಪೂ. ೨ ರ ರಾಜಗಳದ ಶಾಸನವು ಮಹಿಂದ ಥೇರನನ್ನು ಹೆಸರಿಸುವುದಲ್ಲದೆ ಅವನ ಚಿತಾಭಸ್ಮವನ್ನು ಸ್ತೂಪಗಳಲ್ಲಿ ರಕ್ಷಿಸಿಡಲು ಸಿಂಹಳದ ಅನೇಕ ವಿಹಾರಗಳಿಗೆ ವಿತರಿಸಲಾಗಿದ್ದನ್ನು ತಿಳಿಸುವುದು.

೧೪. ಅದೇ, ಪು.೩. ಅಶೋಕನ ಸಮಕಾಲೀನನಾಗಿ ಸಿಂಹಳವನ್ನು ಆಳಿದ ದೇವಾನಾಂಪಿಯತಿಸ್ಸನ ಸೋದರನಾದ ಉತ್ತಿಯ ಸಾಂಪ್ರದಾಯಿಕ 'ಅಶೋಕಬ್ರಾಹ್ಮೀ' ಲಿಪಿಯನ್ನು ಬಳಸಿ ಮಿಹಿಂತಲೆಯಲ್ಲಿ ಮೂರು, ಪಿಚ್ಚಂದಿಯವದಲ್ಲಿ ಎರಡು ಗುಹಾಶಾಸನಗಳನ್ನು ಕೊರೆಸಿದನು.

೧೫. ಶ್ರೀಲಂಕಾದಲ್ಲಿ ಇಲ್ಲಿಯ ವರೆಗೂ ದೊರೆತ ಅತ್ಯಂತ ಪೂರ್ವಕಾಲದ ಶಾಸನವಿದಾಗಿದೆ. ಕೊನಿಂಗ್ಹ್ಯಾಮ್, ಆರ್.ಎ.ಇ, ಅಲ್ಚಿನ್, ಎಫ್, ಆರ್., ಮುಂ. ''ಪ್ಯಾಸೇಜ್ ಟು ಇಂಡಿಯ? ಅನುರಾಧಪುರ ಅಂಡ್ ಅರ್ಲಿ ಯೂಜ್ ಆಫ್ ಬ್ರಾಹ್ಮೀ ಸ್ಕ್ರಿಪ್ಟ್'', ಕೇಂಬ್ರಿಜ್ ಆರ್ಕಿಯಾಲಾಜಿಕಲ್ ಜರ್ನಲ್, ೬. (೧), ಪು. ೭೩-೯೭, ಆದರೆ ಮೂರು ಅಕ್ಷರಗಳ - ಅರಮ - ಈ ಶಾಸನದ ಕಾಲದ ಬಗ್ಗೆ ಪ್ರಶ್ನೆಗಳನ್ನು ಎತ್ತಲಾಗಿದೆ.

೧೬. ಸಿರಿಸೋಮ. ಅದೇ., ಪು. ೩

೧೭. ಅದೇ. ಪು. ೬

೧೮. ಅದೇ. ಪು. ೩೫, ಅಡಿ.ಟಿ. ೧೬೮

೧೯. ಅದೇ, ಪು. ೫, ಅಡಿ.ಟಿ.೩೦ ಮತ್ತು ಪು. ೪೭ರಲ್ಲಿಯ ನಕಾಶ.

೨೦. ಎಸ್. ಶೆಟ್ಟರ್. ಫುಟ್ ಪ್ರಿಂಟ್ಸ್ ಆಫ್ ಆರ್ಟಿಜಾನ್ಸ್ ಇನ್ ಹಿಸ್ಟರಿ, ೬೪ನೆಯ ಇಂಡಿಯನ್ ಹಿಸ್ಟರಿ ಕಾಂಗ್ರೆಸ್‌ನ ಸರ್ವಾಧ್ಯಕ್ಷ ಭಾಷಣ (ಮೈಸೂರು, ೨೦೦೩), ಪು. ೨೪-೩೪

೨೧. ಸಿರಿಸೋಮ, ಅದೇ. ಪು. ೩೫

೨೨. ಪದಿಜ್ಯು. V, ೧೨. ಪು.೩; ೧೭, ಪು.೪-೫; ಶಿಲಪ್ಪ XXIX

೨೩. ರಸನಾಯಗಂ, ಏನ್ಷಿಯಂಟ್ ಜಾಫ್ನಾ, ಪು.೧೨೩. ನೋ. ಪಿಳ್ಳೈ, ಕೆ.ಕೆ., ಸೌತ್ ಇಂಡಿಯ ಅಂಡ್ ಶ್ರೀಲಂಕಾ: ಸರ್ ವಿಲಿಯಮ್ ಮೇಯರ್ ಎಂಡೋಮೆಂಟ್ ಲೆಕ್ಚರ್ಸ್, (೧೯೫೮-೫೯). (ಚೆನ್ನೈ. ೨೦೦೧ ಪು.ಮು.) ಪು.೩೪-೩೫ ಮತ್ತು ೮೩

೨೪. ಮುದಿಯನ್ಸ್, ಎಸ್., ಇನ್ಸ್ಕ್ರಿಪ್ಷನ್ಸ್ ಆಫ್ ಶ್ರೀಲಂಕಾ : ೪೦೦-೮೦೦, ವಿಜಸೇಖರೆ (ಸಂ.). ಅದೇ. ಪು.೧೦೦

೨೫. ಹತ್ತಿರಚ್ಚಿ, ಎ. ಎಸ್. ''ಇನ್ವೆಸ್ಟಿಗೇಷನ್ ಆಫ್ ೨, ೩, ೪ ಸೆಂಚುರಿ ಇನ್ಸ್ಕ್ರಿಪ್ಷನ್ಸ್'', ವಿಜೆಸೇಖರೆ (ಸಂ.), ಅದೇ., ಪು. ೫೭ರಿಂದ. ವಿಶೇಷವಾಗಿ ನೋ. ಪು. ೧೦೩

೨೬. ಅದೇ.,ಪು.೧೧೯

೨೭. ಅಗನಾ. ೨೫೧.೫; ೨೬೫.೪

೨೮. ಅಗನಾ. ೨೫೧.೧೨; ಪುರನಾ. ೧೭೫.೬

೨೯. ಅಗನಾ ೨೫೧.೧೨

೩೦. ಅದೇ.

೩೧. ಅದೇ. ೨೮೧-೮

೩೨. ಎಪಿಗ್ರಾಫಿಯ ಇಂಡಿಕಾ ೨೦, ಪು.೭೯

೩೩. ಮಹಾದೇವನ್, ಐ. ಅರ್ಲಿ ತಮಿಳ್ ಎಪಿಗ್ರಫಿ: ಫ್ರಮ್ ದಿ ಅರ್ಲಿಯಸ್ಟ್ ಟೈಮ್ಸ್ ಟು ದಿ ಸಿಕ್ಸ್ತ್ ಸೆಂಚುರಿ ಎಡಿ, (ಚೆನ್ನೈ-ಹಾರ್ವರ್ಡ್, ೨೦೦೩), ಪು. ೩೧೫

೩೪. ಹನುಮಂತರಾವ್ ಮುಂ. ಅದೇ., ಪು. ೬೯-೯೨, ೧೨೩-೧೭೬; ಶರ್ಮ ಮತ್ತು ವರಪ್ರಸಾದರಾವ್ ಅದೇ., ಪು. ೧೦ ರಿಂದ.

೩೫. ಎಪಿಗ್ರಾಫಿಯ ಕರ್ನಾಟಿಕ XI, ಚಿತ್ರದುರ್ಗ ೪೩

೩೬. ತಮಿಳು ಲಿಪಿಯನ್ನು ಸಾಧಿಸಿಕೊಂಡ ನಂತರ ಅಲ್ಲಿಯ ವರೆಗೂ ಮೌಖಿಕವಾಗಿ ಪ್ರಸಾರದಲ್ಲಿದ್ದ ಶಂಕಂ, ನಾಯನ್ನಾರ್ ಮತ್ತು ಆಳ್ವಾರರ ಕವಿತೆಗಳನ್ನು ವ್ಯವಸ್ಥಿತವಾಗಿ ಸಂಪಾದಿಸುವ ಕಾರ್ಯ ಪ್ರಾರಂಭವಾಯಿತೆಂಬುದನ್ನು ಇಲ್ಲಿ ಗಮನಿಸುವುದವಶ್ಯ.

■ **ಷ. ಶೆಟ್ಟರ್** : ಡಾ|| ಎಸ್. ರಾಧಾಕೃಷ್ಣನ್ ಪ್ರಾಧ್ಯಾಪಕರು, ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸ್ಡ್ ಸ್ಟಡೀಸ್, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಕ್ಯಾಂಪಸ್, ಬೆಂಗಳೂರು - ೫೬೦ ೦೧೨ ■
email : profssettar@yahoo.co.in

ಪುಸ್ತಕ ಪರಿಶೀಲನೆ

೧. ಹೀಗೊಂದು ವೃತ್ತಾಂತ : ಪ್ರೊ. ವಿ. ಬಿ. ಅರ್ತಿಕಜೆ

ಕನ್ನಡ ಪ್ರಪಂಚ ಪ್ರಕಾಶನ, ಪುತ್ತೂರು-೫೭೪ ೨೦೨ (ದ.ಕ.). ಪ್ರಮು. ೨೦೦೬. ಪು. ೬೭೨, ರೂ. ೧೫೦/-

ಕೆಲ ಊರುಗಳು ಅಲ್ಲಿರುವ ಕಲ್ಪನಾಶೀಲ, ಕ್ರಿಯಾಶೀಲ ವ್ಯಕ್ತಿಗಳು ರೂಪಿಸಿಕೊಳ್ಳುವ ಆಸ್ಥೆ ಅಭಿರುಚಿಗಳಿಂದ ಸಾಂಘಿಕ ಆಯಾಮಗಳನ್ನು ರೂಪಿಸಿಕೊಳ್ಳುತ್ತವೆ. ಸಾಹಿತ್ಯ ಸಂಸ್ಕೃತಿಗಳ ಕುರಿತು ಪ್ರೌಢ ಪ್ರೀತಿ ಹೆಮ್ಮೆಗಳಿಂದ ತುಂಬಿದ ಒಂದು ಸನ್ನಿವೇಶ ನಿರ್ಮಾಣವಾಗುತ್ತದೆ. ಆ ಸಂಸ್ಕೃತಿ ಪಸರಿಸುತ್ತದೆ. ಹೀಗಾಗಿ ಒಂದು ಪ್ರಾದೇಶಿಕ ನೆಲೆಗಟ್ಟಿನಲ್ಲಿ ಅರ್ಥಪೂರ್ಣ ಸಾಂಸ್ಕೃತಿಕ ವಾತಾವರಣ ನಿರ್ಮಾಣಗೊಳ್ಳುತ್ತದೆ. ಕರಾವಳಿಯ ಪುತ್ತೂರು ಅಂಥದೊಂದು ಊರು. ಇಪ್ಪತ್ತನೆಯ ಶತಮಾನದ ಆರಂಭದ ದಶಕಗಳಿಂದಲೇ ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತನ್ನದೇ ಆದ ಒಂದು ವ್ಯಕ್ತಿತ್ವ ಅಸ್ಮಿತೆಗಳನ್ನು ಗಳಿಸಿಕೊಳ್ಳುತ್ತ ಬೆಳೆದ ಊರು.

'ಹೀಗೊಂದು ವೃತ್ತಾಂತ' ಎಂಬ (ನಾಟಕ ಅಥವಾ ಕಾದಂಬರಿಯ ಶೀರ್ಷಿಕೆಯನ್ನು ಧ್ವನಿಸುವ) ಈ ಕೃತಿ ವೈವಿಧ್ಯಮಯ ಚಟುವಟಿಕೆಗಳ ನೆಲೆಯಾದ ಪುತ್ತೂರು ಮತ್ತದರ ಆಗು-ಹೋಗು, ಸಂಘ ಸಂಸ್ಥೆ, ಅಲ್ಲಿ ಸಾಹಿತ್ಯ-ಸಂಸ್ಕೃತಿ-ಕಲೆಗಳ ಕುರಿತು ನಡೆದ ಉಪನ್ಯಾಸ, ಗೋಷ್ಠಿ, ಚರ್ಚೆ, ಸಂವಾದಗಳು, ಅಲ್ಲಿಯ ಸಾಧಕ-ಪ್ರತಿಭಾವಂತರು, ಅವರ ಸಾಧನೆ-ಬೋಧನೆಗಳು ಅವುಗಳನ್ನು ಕೇಂದ್ರವಾಗಿಟ್ಟುಕೊಂಡು ೧೯೮೬ ರಿಂದ ಹದಿನೇಳು ವರ್ಷಗಳ ಕಾಲ (೮೫೦ ವಾರ) ನಿರಂತರವಾಗಿ ವಾರ್ತಾಪತ್ರ(news letter) ರೂಪದಲ್ಲಿ ಬರೆದ ಬರಹಗಳ ಸಂಗ್ರಹ. ಮೊದಲು ಎಂಟು ವರ್ಷಗಳ ಕಾಲ ಮಂಗಳೂರಿನ 'ಹೊಸ ದಿಗಂತ' ಪತ್ರಿಕೆಯಲ್ಲಿ ನಂತರ 'ಕನ್ನಡ ಜನ ಅಂತರಂಗ'ದಲ್ಲಿ ಪ್ರಕಟಗೊಂಡು, ಈಚಿನ ವರ್ಷಗಳಲ್ಲಿ 'ಕರಾವಳಿ ಅಲೆ'ಯಲ್ಲಿ ಮುಂದುವರಿದ ಈ ಸಾಪ್ತಾಹಿಕ ಅಂಕಣದ ೧೭೪ ಆಯ್ದ ಬರಹಗಳು ಇಲ್ಲಿವೆ. ಇವುಗಳ ಆಯ್ಕೆ ಲೇಖಕ ವಿ. ಬಿ. ಅರ್ತಿಕಜೆಯವರದಲ್ಲ. ಲೇಖಕರು ಹೇಳುವ ಹಾಗೆ ಪ್ರಕಾಶಕ ಬೋಳಂತಕೋಡಿ ಈಶ್ವರ ಭಟ್ಟರು ತನ್ನ ನೇತೃತ್ವದ ಸಾಹಿತ್ಯ ಚಟುವಟಿಕೆಗಳಿಗೆ ಸಂಬಂಧಿಸಿದ ಅಂಕಣಗಳನ್ನಷ್ಟೇ ಆರಿಸಿ ಗ್ರಂಥರೂಪದಲ್ಲಿ ಪ್ರಕಟಿಸಿದ್ದಾರೆ. ಈ ಪುಸ್ತಕದಲ್ಲಿರುವ 'ನನ್ನ ವೃತ್ತಾಂತ' ಎಂಬ ಒಂದು ಪುಟದ ಬರಹದಲ್ಲಿ ಈಶ್ವರ ಭಟ್ಟರು ಬರೆಯುತ್ತಾರೆ : "ಆಯ್ಕೆಯಲ್ಲಿ ನಾನು ಉಪಯೋಗಿಸಿದ ಒಂದೇ ಒಂದು ಮಾನದಂಡವೆಂದರೆ ಬರೆಹ ನನಗೆ ಅಥವಾ ನನ್ನ ಕಾರ್ಯಕ್ಷೇತ್ರಕ್ಕೆ ಸಂಬಂಧಿಸಿದುದೇ? ಎಂಬುದು. ಆದುದರಿಂದ ಹೀಗೊಂದು ವೃತ್ತಾಂತ ನನ್ನ ವೃತ್ತಾಂತವೂ ಹೌದು." ಮುಂದುವರಿದು ಭಟ್ಟರು ಹೇಳುತ್ತಾರೆ : "ನನಗೆ ಪ್ರಚಾರದ ತುಡಿತ ಇಲ್ಲ ಆದರೆ ನಾನು ಮಾಡಿದ ಕೆಲಸ ಆದಷ್ಟು ಹೆಚ್ಚು ಜನರಿಗೆ ಗೊತ್ತಾಗಬೇಕು; ಒಂದು ದಾಖಲೆಯಾಗಿ ಉಳಿಯಬೇಕು ಎಂಬ ಆಸೆಯಿದೆ. ನನ್ನಲ್ಲಿ 'ಅಹಂಕಾರ' ಇಲ್ಲ ಆದರೆ ಮನಸಿನ ಒಂದು ಮೂಲೆಯಲ್ಲಿ 'ಅಹಂ' ಅಡಗಿ ಕುಳಿತಿದೆ..." ತಮ್ಮ ಉದ್ದೇಶದ ಬಗ್ಗೆ ಇದಕ್ಕಿಂತ ಹೆಚ್ಚು ಪ್ರಾಮಾಣಿಕವಾಗಿರುವುದು ಅಸಾಧ್ಯವಾದ್ದರಿಂದ ಇದನ್ನೆಲ್ಲ ಬದಿಗಿಟ್ಟು ನೋಡಿದರೂ ಐದು ದಶಕಗಳಿಗೆ ಮಿಕ್ಕಿದ ತನ್ನ ಅಸ್ತಿತ್ವದ ಅವಧಿಯಲ್ಲಿ ಪುತ್ತೂರಿನ ಕರ್ನಾಟಕ ಸಂಘ ನಡೆಸಿದ ಕಾರ್ಯಚಟುವಟಿಕೆಗಳು ಪ್ರಶಂಸೆಗೆ ಅರ್ಹವಾದಂಥವು. ೧೯೫೭ ರಲ್ಲಿ ಇತರ ಸಾಹಿತಿಗಳ ಸಹಕಾರದೊಂದಿಗೆ ಶಿವರಾಮ ಕಾರಂತರು ಸ್ಥಾಪಿಸಿದ ಪುತ್ತೂರಿನ ಕರ್ನಾಟಕ ಸಂಘದ ಚಟುವಟಿಕೆಗಳು ಕಾರಂತರು ಪುತ್ತೂರು ತೊರೆದು ಸಾಲಿಗ್ರಾಮದಲ್ಲಿ ನೆಲೆಸಿದ ಮೇಲೆ ಕೆಲ ಕಾಲ ಕುಂಠಿತಗೊಂಡರೂ ಮುಳಿಯ ಕೃಷ್ಣಭಟ್, ಎ. ಬಿ. ಮೊಳೆಯಾರ್ ಮೊದಲಾದವರ ಪ್ರಯತ್ನದೊಂದಿಗೆ ಮತ್ತೆ ಚುರುಕಾದವು. ಬೋಳಂತಕೋಡಿ ಈಶ್ವರ ಭಟ್ಟರು ಅದರ ಅಧ್ಯಕ್ಷರಾದ ಮೇಲೆ ಇನ್ನೂ ಹೆಚ್ಚಿನ ನಿರಂತರತೆ ಪುಸ್ತಕ ಪ್ರಕಾಶನದಂಥ ಆಯಾಮಗಳು ಸಂಘಕ್ಕೆ ದೊರೆತದ್ದು ಇಲ್ಲಿಯ ಬರಹಗಳಿಂದ ಗೊತ್ತಾಗುತ್ತದೆ. ಹೀಗೊಂದು ಸಂಘ ನಿರಂತರವಾಗಿ ಕ್ರಿಯಾಶೀಲವಾಗಿರುವುದು ವಿರಳ. ಈ ಪುಸ್ತಕ

ದಲ್ಲಿರುವ ಬರಹಗಳಿಗೆ ಕಾರಣವಾದ ಕಾರ್ಯಚಟುವಟಿಕೆಗಳ ವೈವಿಧ್ಯವೇ ಗಮನ ಸೆಳೆಯುವಂಥದು: ಜಿ. ಪಿ. ರಾಜರತ್ನಂ, ನಿರಂಜನ, ಅನುಪಮಾ ನಿರಂಜನ, ಪಂಜೆ ಮಂಗೇಶರಾಯರು, ಬಡೆಕ್ಕಿಲ ವೆಂಕಟರಮಣ ಭಟ್ಟ, ಶಿವರಾಮ ಕಾರಂತ, ಗುಲ್ವಾಡಿ ವೆಂಕಟರಾವ್, ಕಯ್ಯಾರ ಕಿಞ್ಞಣ್ಣ ರೈ, ಎಂ. ಎಸ್. ಕಾಮತ್ ಮುಂತಾದವರ ಸಾಹಿತ್ಯ ಕುರಿತ ವಿಚಾರಗೋಷ್ಠಿಗಳು, ಅಥವಾ ಅವರ ಅಭಿನಂದನ ಗ್ರಂಥ ಪ್ರಕಟಣೆ, ಅವರಲ್ಲಿ ಕೆಲವರ ಸಮಗ್ರ ಕೃತಿ ಸಂಪುಟಗಳ ಪ್ರಕಟಣೆ, ಬಿಡುಗಡೆ, ನಾಡು ನುಡಿ ಕುರಿತ ಚಿಂತನಗೋಷ್ಠಿ, ಮಹಿಳಾ ಸಾಹಿತ್ಯ ಗೋಷ್ಠಿ, ಕನ್ನಡ ಮರಾಠಿ ಭಾಷಾ ಸಾಮರಸ್ಯ ಗೋಷ್ಠಿ, ರಂಗ ತರಬೇತಿ ಶಿಬಿರ, ರಸಗ್ರಹಣ ಶಿಬಿರ, ಸಾಹಿತ್ಯ ಸೌರಭ ಸರಣಿಯ ಕಾರ್ಯಕ್ರಮಗಳು, ಜಿಲ್ಲಾ ಸಾಹಿತ್ಯ ಸಮ್ಮೇಳನದ ಆತಿಥ್ಯ... ಇತ್ಯಾದಿ.

ಹೀಗೆ ಮುಖ್ಯವಾಗಿ ಪುತ್ತೂರಿನ ಕರ್ನಾಟಕ ಸಂಘ ಅದಕ್ಕೆ ಹೆಗಲೆಣೆಯಾಗಿ ಪುತ್ತೂರಿನ ಸಂತ ಫಿಲೋಮಿನಾ ಕಾಲೇಜು ಮತ್ತು ವಿವೇಕಾನಂದ ಕಾಲೇಜಿನ ಕನ್ನಡ ಸಂಘಗಳು ಹಾಗೂ ದಕ್ಷಿಣ ಕನ್ನ ಜಿಲ್ಲಾ ಕ.ಸಾ.ಪ. ಘಟಕ ಇವುಗಳ ಆಶ್ರಯದಲ್ಲಿ ನಡೆದ ಕಾರ್ಯಕ್ರಮಗಳ ವಿಸ್ತೃತ ವರದಿಗಳು ಇಲ್ಲಿವೆ. ಆದರೆ ಸಾಹಿತಿ ಕಲಾವಿದರ ಸ್ಮರಣೆ, ಅಭಿನಂದನೆ, ಕನ್ನಡ ಭಾಷೆ-ಸಾಹಿತ್ಯ, ಪುಸ್ತಕ ಪ್ರಕಟಣೆ, ರಂಗಶಿಕ್ಷಣ, ನಾಟಕ, ಯಕ್ಷಗಾನ, ಜನಪದಕಲೆ, ಸ್ತ್ರೀವಾದ, ಪರಿಸರ, ರಸಗ್ರಹಣ ಇಂಥ ವಿಷಯಗಳ ಕುರಿತ ಬರಹಗಳಲ್ಲಿ ಅವುಗಳಿಗೆ ಅಗತ್ಯವಾದ, ಶುಷ್ಕ ವರದಿಗಾರಿಕೆಗೆ ಮೀರಿದ ಗ್ರಹಿಕೆ, ಅಭಿವ್ಯಕ್ತಿಗಳ ಚೈತನ್ಯ ಇಲ್ಲಿಯ ಬರಹಗಳಿಗೆ ಇರುವುದನ್ನು ನಾವು ನೋಡುತ್ತೇವೆ. ಇವು ಅವಸರದ ಸಾಹಿತ್ಯವಾಗಿ ಹಲವು ಮಿತಿಗಳ ನಡುವೆ ಹುಟ್ಟಿಕೊಂಡ ಲೇಖನಗಳು ಎಂಬುದಾಗಿ ಲೇಖಕ ಅರ್ತಿಕಜೆಯವರೇ ಹೇಳುತ್ತಾರಾದರೂ, ಕೆಲವು ವಿಷಯದ ಪುನರಾವರ್ತನೆಗಳನ್ನು ಹೊರತುಪಡಿಸಿ, ಅರ್ತಿಕಜೆಯವರ ಗ್ರಹಿಕೆ ಮತ್ತು ನಡಾವಳಿಗಳ ಮಂಡನೆಗೆ ಹಿನ್ನೆಲೆಯಾಗಿ ಒಂದು ಸ್ವಸ್ಥವೂ ಸ್ಪಷ್ಟವೂ ಆದ ಪರಿಪ್ರೇಕ್ಷ್ಯ ಇರುವದನ್ನು ನಾವು ಕಾಣುತ್ತೇವೆ. ನಾವೀಗ ಗ್ರಹಿಸುವ ಅರ್ಥದಲ್ಲಿ 'ಅಂಕಣ ಸಾಹಿತ್ಯ'ವೆಂದು ಇವುಗಳನ್ನು ಗುರುತಿಸುವದು ಕಷ್ಟವಾದರೂ ಇದು ಕೇವಲ 'ವರದಿ ಸಾಹಿತ್ಯ'ವೂ ಅಲ್ಲ. ಇವೆರಡರ ನಡುವೆ ಯಾವುದೋ ನೆಲೆಯಲ್ಲಿ ನಿಲ್ಲುವ ಈ ಪ್ರಕಾರ ಸಮಕಾಲೀನ ಸಾಂಸ್ಕೃತಿಕ ವಿದ್ಯಮಾನಗಳ ದಾಖಲೆಯಾಗುಳಿವ ಉಪಯುಕ್ತತೆಯನ್ನು ಹೊಂದಿರುವದಂತೂ ನಿಜ.

– **ಅಶೋಕ ಶೆಟ್ಟರ್, ಅಧ್ಯಾಪಕರು, ಇತಿಹಾಸ ಮತ್ತು ಪ್ರಾಕ್ತನಶಾಸ್ತ್ರ ವಿಭಾಗ**
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೫೮೦ ೦೦೩

೨. ಜಾಗತೀಕರಣ ಮತ್ತು ಸಂಸ್ಕೃತಿ : ಸಂ. ಡಾ. ದಸ್ತಗೀರಸಾಬ್ ದಿನ್ನಿ

ಕನಸು ಪ್ರಕಾಶನ, ನಂ. ೪-೪-೧೦೧/೬೨, ಮರಿಗೆಮ್ಮಗುಡಿ ಹತ್ತಿರ, ಜಹೀರಾಬಾದ್, ರಾಯಚೂರು-೫೮೪ ೧೦೧,
ಪ್ರಮು. ೨೦೦೪, ಪು. ೧೬೫, ರೂ. ೧೨೦/-

೨೧ ನೇ ಶತಮಾನದ ಈ ಮೊದಲ ದಶಕದಲ್ಲಿ ದಿನೇ ದಿನೇ ಹೆಚ್ಚುತ್ತಿರುವ ಜಾಗತೀಕರಣದ ಚರ್ಚೆಯ ಕಾವು ಇನ್ನೂ ಇಳಿದಿಲ್ಲ. ಜಾಗತೀಕರಣವೆಂಬ ಈ ಗುಮ್ಮ ತೃತೀಯ ಜಗತ್ತಿನ ರಾಷ್ಟ್ರಗಳ ವಿದ್ವಾಂಸರುಗಳನ್ನೆಲ್ಲ ಇಬ್ಭಾಗ ಮಾಡಿ ಹಾಕಿ ಮತ್ತು ವಿರೋಧವಾದ ಹಲವು ರೀತಿಯ ಅಭಿಪ್ರಾಯಗಳನ್ನು ಕೇಳಿ ನಿಜಕ್ಕೂ ಜಾಗತೀಕರಣವೆಂದರೇನೆಂದರಿಯದ ಶ್ರೀಸಾಮಾನ್ಯ ಗೊಂದಲಕ್ಕೀಡಾಗಿದ್ದಾನೆ. ಇಂಥ ಗೊಂದಲಕಾರಿ ಸಂದರ್ಭದಲ್ಲಿ ಬಂದಿರುವ ಮತ್ತು ಆ ಕಾರಣಕ್ಕಾಗಿ ಮುಖ್ಯವೂ ಆಗಿರುವ ಕೃತಿ 'ಜಾಗತೀಕರಣ ಮತ್ತು ಸಂಸ್ಕೃತಿ'. ಡಾ. ದಸ್ತಗೀರಸಾಬ್ ದಿನ್ನಿಯವರು ಜಾಗತೀಕರಣಕ್ಕೆ ಸಂಬಂಧಿಸಿದಂತೆ ವಿವಿಧ ಜ್ಞಾನ ಶಿಸ್ತುಗಳ ವಿದ್ವಾಂಸರ ಅಭಿಪ್ರಾಯಗಳನ್ನು ಪ್ರಕಟಿಸುವ ೧೫ ಲೇಖನಗಳನ್ನು ಇಲ್ಲಿ ಸಂಪಾದಿಸಿಕೊಟ್ಟಿರುವುದು ಅಧ್ಯಯನದ ದೃಷ್ಟಿಯಿಂದ ಉಪಯುಕ್ತವಾಗಿದೆ.

ಕೃತಿಯ ಹೆಸರೇ ಸೂಚಿಸುವಂತೆ ಇಲ್ಲಿ ಸಂಸ್ಕೃತಿಯ ನೆಲೆಯಿಂದ ಜಾಗತೀಕರಣವನ್ನು ವಿಶ್ಲೇಷಣೆಗೊಳಪಡಿಸುವ ಲೇಖನಗಳೇ ಹೆಚ್ಚಿವೆ. ಹಾಗಿದ್ದೂ ಅವುಗಳ ಆಶಯದಲ್ಲಿ ವ್ಯತ್ಯಾಸವಿದೆ.

ಜಾಗತೀಕರಣವು ನಮ್ಮ ದೇಶೀ ಸಂಸ್ಕೃತಿಯ ಮೇಲೆ ಮಾರಕ ದಾಳಿಯನ್ನು ನಡೆಸಿದೆ ಎಂಬರ್ಥದ ವಾದವನ್ನೇ ಇಲ್ಲಿಯ ಬಹುಪಾಲು ಸಂಸ್ಕೃತಿ ಚಿಂತಕರು ಹೇಳಿದ್ದಾರೆ. ಇದಕ್ಕೆ ವ್ಯತಿರಿಕ್ತವಾಗಿ ಪ್ರೊ. ನಂಗಲಿ, ಡಾ. ಸಬರದ ಮತ್ತು ಡಾ. ನುಗಡೋಣಿಯವರು ಜಾಗತೀಕರಣದ ಸಾಂಸ್ಕೃತಿಕ ಮುಖಾಮುಖಿಯನ್ನು ವಿಭಿನ್ನ ನೆಲೆಗಳಲ್ಲಿ ಚರ್ಚಿಸುವುದು ಕುತೂಹಲಕಾರಿಯಾಗಿದ್ದು ಈ ಹೊಸ ಆಶಯ ಧ್ವನಿಗಳು ಚರ್ಚೆಗೊಂದು ಹೊಸ ದಿಕ್ಕನ್ನು ಸೂಚಿಸುವಂತಿವೆ.

ಉಳಿದಂತೆ ಕೃತಿಯಲ್ಲಿನ ಜಾಗತೀಕರಣದ ಚರ್ಚೆಯು ವ್ಯವಸಾಯ, ಆರೋಗ್ಯನೀತಿ, ಆರ್ಥಿಕ ಕ್ಷೇತ್ರ, ಮಾರ್ಕ್ಸ್‌ವಾದ, ಔದ್ಯೋಗಿಕ ಪರಿಸರ ಹಾಗೂ ಸಮೂಹ ಮಾಧ್ಯಮ ಕ್ಷೇತ್ರಗಳ ಮೇಲೆ ಜಾಗತೀಕರಣ ಉಂಟುಮಾಡಿರುವ ಪರಿಣಾಮಗಳು, ಏರಿಳಿತಗಳು ಹಾಗೂ ತಲ್ಲಣಗಳನ್ನು ಒಳಗೊಂಡಿದೆ. ಆರ್ಥಿಕ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಪ್ರೊ. ಎಂ. ವಿ. ನಾಡಕರ್ಣಿಯವರ ‘ಜಾಗತೀಕರಣಗೊಳ್ಳಿ, ಬೆಳವಣಿಗೆ ಸಾಧಿಸಿ’ ಲೇಖನ ಜಾಗತೀಕರಣದ ಹಿನ್ನೆಲೆಯಲ್ಲಿ ರಾಷ್ಟ್ರೀಯ ಆರೋಗ್ಯ ನೀತಿಯನ್ನು ಚರ್ಚಿಸುವ ಡಾ. ಪ್ರಕಾಶ್‌ರಾವ್‌ರ ಲೇಖನ, ಹಾಗೂ ಉದ್ಯೋಗ ಮತ್ತು ಶ್ರಮಜೀವಿಗಳಿಗೆ ಸಂಬಂಧಿಸಿದಂತೆ ಜಾಗತೀಕರಣದ ಪ್ರಭಾವಗಳನ್ನು ವಿವರಿಸುವ ಡಾ. ಡಿ. ನರಸಿಂಹರೆಡ್ಡಿಯವರ ಲೇಖನಗಳು ತಮ್ಮ ಕ್ಷೇತ್ರದ ಪಾರಿಭಾಷಿಕ ಪದಗಳ ಭಾರದ ಕಾರಣವಾಗಿ ಸಂಕೀರ್ಣ ರಚನೆಗಳಾಗಿವೆಯಲ್ಲದೆ ಕಡೆಗೂ ಆಯಾ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಜಾಗತೀಕರಣಕ್ಕಿರುವ ಪರ್ಯಾಯ ಸಾಧ್ಯತೆಗಳ ಕಿಂಚಿತ್ ಸುಳಿವು ನೀಡದೇ ಕೊನೆಗೊಂಡಿವೆ. ಆದರೆ ಎಲ್ಲಾ ತಜ್ಞರು ಸಂಬಂಧಪಟ್ಟ ಕ್ಷೇತ್ರಗಳವರೇ ಆಗಿರುವುದು ಲೇಖನಗಳಿಗೆ ಅಧಿಕೃತತೆಯನ್ನೊದಗಿಸಿದೆ. ಆದಾಗ್ಯೂ ಚಿಂತನೆಯೊಂದರ ಮೂಲ ಗುರಿ ಅಧಿಕೃತಯಷ್ಟೇ ಆಗಿರದೆ ಸಮಸ್ಯೆಯ ಮತ್ತು ಪರಿಹಾರೋಪಾಯಗಳನ್ನು ಸೂಚಿಸುವುದಾಗಿದೆ ಎಂಬುದನ್ನಿಲ್ಲಿ ನಾವು ಗಮನಿಸಬೇಕು.

ಇನ್ನು ಕೃತಿಯ ಮುಖ್ಯ ಆಶಯವಾದ ಸಂಸ್ಕೃತಿ ಚರ್ಚೆಯಲ್ಲಿ ಪಾಲ್ಗೊಂಡಿರುವ ಲೇಖಕರಲ್ಲಿ ಎರಡು ಗುಂಪುಗಳುಂಟಾಗಿವೆ. ಒಂದು ದೇಶೀ ಪರಂಪರೆಯ ರಕ್ಷಣೆಯೇ ಜಾಗತೀಕರಣದ ಸಾಂಸ್ಕೃತಿಕ ದಾಳಿಯಿಂದ ರಕ್ಷಿಸಿಕೊಳ್ಳಲು ನಮಗಿರುವ ಏಕ ಮಾತ್ರ ಮಾರ್ಗ ಎಂಬ ವಾದ. ಮತ್ತೊಂದು ಜಾಗತೀಕರಣವನ್ನು ಸ್ವಾಗತಿಸುವಂಥದ್ದು. ಈ ಮಧ್ಯೆ ಜಾಗತೀಕರಣದ ಚರ್ಚೆಗೆ ಸಂಸ್ಕೃತಿ ನುಡಿಗಟ್ಟನ್ನು ಬಳಸುವುದು ಹಾದಿ ತಪ್ಪಿಸುವ ಮಾರ್ಗ. ಅದೇನಿದ್ದರೂ ರಾಜಕೀಯ ಆರ್ಥಿಕ ಪರಿಭಾಷೆಯಲ್ಲೇ ನಡೆಯಬೇಕು. ಸಂಸ್ಕೃತಿಯನ್ನು ಜಾಗತೀಕರಣದ ರಾಜಕಾರಣದಿಂದ ಬಹಿಷ್ಕರಿಸಬೇಕು, ಎಂಬ ರಹಮತ್‌ರ ವಾದ ಮಾತ್ರ ಭಿನ್ನವಾಗಿದೆ. ಯಾವುದೇ ಸಂಸ್ಕೃತಿಯು ನೆರೆಯ ಸಂಸ್ಕೃತಿಯೊಂದಿಗೆ ನಿರಂತರ ಒಡನಾಡುತ್ತ ಕೊಳ್ಳು-ಕೊಡುವಿಕೆಯಿಂದ ಶ್ರೀಮಂತಗೊಳ್ಳುತ್ತದೆ. ಮೂಲದಲ್ಲಿ ಶಕ್ತವಾದ ಯಾವ ಸಂಸ್ಕೃತಿಯೂ ಇತರ ಸಂಸ್ಕೃತಿಯ ಒಡನಾಟ ಪ್ರಭಾವದ ಕಾರಣದಿಂದಾಗಿ ಶಿಥಿಲಗೊಳ್ಳಲಾರದು. ಬದಲಿಗೆ ತನ್ನ ಪರಂಪರೆ ಮತ್ತು ಹೊಸದರ ಆಧುನಿಕತೆಗಳ ಎರಕದಲ್ಲಿ ಸುಧಾರಿತ ಮತ್ತು ಸಂಸ್ಕರಿತವಾಗಿ ಆವಿಷ್ಕಾರಗೊಳ್ಳುತ್ತದೆ. ಈ ಹಿನ್ನೆಲೆಯಲ್ಲಿ ರಹಮತ್‌ರ ವಾದಕ್ಕೆ ಅರ್ಥವಿದೆ.

‘ಸಾಹಿತ್ಯ ಸಂಸ್ಕೃತಿ ಮತ್ತು ರಾಜಕಾರಣ’ ಎಂಬ ಲೇಖನದಲ್ಲಿ ಭಾಲಚಂದ್ರ ನೇಮಾಡೆಯವರ ಅಭಿಪ್ರಾಯಗಳು ಸ್ವತಃ ಗೊಂದಲಕಾರಿಯಾಗಿವೆ. ಮತೀಯ ಮೂಲಭೂತವಾದಿಗಳು ತಮ್ಮ ರುಂಡ ಹಾರಿಸಬಹುದೆಂಬ ಭಯದಿಂದ ಸಲ್ಮಾನ್ ರಷ್ದಿ ದಿಲ್ಲಿಗೆ ಬರಲಿಲ್ಲವೆನ್ನುವ ನೇಮಾಡೆಯವರು ಅದಕ್ಕೆ ಜಾಗತೀಕರಣವೇ ಕಾರಣವೆನ್ನುತ್ತಾರೆ. ಇವೆರಡಕ್ಕಿರುವ ಏನಕೇನ ಏನೆಂದು ಅರ್ಥವಾಗುವುದಿಲ್ಲ. ದೂರದಲ್ಲಿ ನಡೆದದ್ದೇನು ಎಂದು ತಿಳಿದುಕೊಳ್ಳುವುದು ಜ್ಞಾನಕ್ಷೇತ್ರದ ವಿಕೃತಿಯನ್ನದೇ ಅನ್ಯವಿಲ್ಲ ಎಂಬ ಮತ್ತು ನಿಮ್ಮ ಪರಂಪರೆಯನ್ನು ಮುಗ್ಧವಾಗಿ ಮುಂದುವರಿಸಿಕೊಂಡು ಹೋದರೆ ನೀವು ಇಲ್ಲವಾಗುವ ಅಪಾಯ ಬರುವುದಿಲ್ಲ. ದೇಸೀಯಲ್ಲದೆ ಬೇರೆ ಅಸ್ತ್ರವಿಲ್ಲ ಎಂಬ ಮಾತುಗಳು ಅವರದು. ಕೂಪ ಮಂಡೂಕವಾದ ಎಂಬುದಕ್ಕೆ ಪುರಾವೆ ಒದಗಿಸುತ್ತವೆ. ಆದರೆ ಸತತ ಸಹಿಷ್ಣುವಾಗಿರುವ ಸಮಾಜ ಒಮ್ಮೆಲೆ ಇಷ್ಟು ಹಿಂಸಾತ್ಮಕಗೊಳ್ಳುವುದರ ಮೂಲ ಜಾಗತೀಕರಣದಲ್ಲಿದೆ ಎಂಬ ಅವರ ಮಾತಂತೂ

ಅನೇಕ ಅರ್ಥಗಳಿಗೆ ಅವಕಾಶ ನೀಡುವಂತಿದ್ದು ಆಳವ ಚಿಂತನೆಯನ್ನು ಅಪೇಕ್ಷಿಸುವಂತಿವೆ. ಇವರ ವಾದಕ್ಕೆ ದನಿಗೂಡಿಸುವ ಡಾ. ರಂಗಾರೆಡ್ಡಿ ಕೋಡಿರಾಂಪೂರ ಶ್ರಮ ಸಂಸ್ಕೃತಿಯ ಬದಲಿಗೆ ಚಟುವಟಿಕೆಗಳು ಸ್ಥಗಿತಗೊಂಡಿವೆ ಎನ್ನುತ್ತಾರೆ. ಶ್ರಮಸಂಸ್ಕೃತಿಯಿದ್ದಾಗ ಶ್ರಮದ ಮರೆವಿಗಾಗಿ ಸುಲಭದ ಮನರಂಜನೆಯ ಮಾರ್ಗವಾಗಿ ಸೃಜನಶೀಲ ಚಟುವಟಿಕೆಗಳು ಹುಟ್ಟಿಕೊಂಡವು. ಅಲ್ಲಿನ ಸೃಜನಶೀಲ ಚಟುವಟಿಕೆಗಳ ಹುಟ್ಟಿನ ಹಿನ್ನೆಲೆ ಹೆಚ್ಚಿನ ಶ್ರಮದ ಮರೆವು. ಆಧುನಿಕತೆಯು ಆ ಶ್ರಮವನ್ನೇ ಕಡಿಮೆ ಮಾಡಿದೆ. ಇಲ್ಲಿನ ಪ್ರಶ್ನೆಯಿರುವುದು ಸೃಜನಶೀಲ ಚಟುವಟಿಕೆಗೆ ಕಾರಣವಾಗಿದ್ದ ಶ್ರಮ ಸಂಸ್ಕೃತಿಯ ದೇಶೀ ಮಾರ್ಗಕ್ಕಿಂತ ಜನರ ಸಮಯ ಶ್ರಮಗಳನ್ನು ಗಣನೀಯವಾಗಿ ಕಡಿಮೆಗೊಳಿಸಿದ ವಿರಾಮ ಸಂಸ್ಕೃತಿಯ ಆಧುನಿಕತೆಯು ಹೇಗೆ ಕೆಡುಕಾದುದಾಗುತ್ತದೆ ಎಂಬುದರಲ್ಲಿ.

ದಲಿತರಿಗೆ ಜಾಗತೀಕರಣವು ಖಂಡಿತಾ ವರವಾಗಲಾರದು ಎಂದಿರುವ ಡಾ. ರಂಗರಾಜ ವನದುರ್ಗ ಮತ್ತು ಮಾರುಕಟ್ಟೆ, ಸುಳಿಯೆದುರು ಬದುಕುಳಿಯಲು ಜೈವಿಕ ವೈವಿಧ್ಯತೆಯು ದಲಿತರಿಗೆ ನೆರವಾಗಬಲ್ಲದು ಎಂದಿರುವ ಪ್ರೊ. ಬಿ. ವಿ. ವೆಂಕಟರಾಂ ಇವರುಗಳು ತಮ್ಮ ಚಿಂತನೆಗಳನ್ನು 'ದಲಿತ' ದಿಂದಾಚೆ ವಿಸ್ತರಿಸಿದರೆ ಅವರ ಕಾಳಜಿ-ಆಶಯಗಳಿಗೆ ಇನ್ನೂ ಹೆಚ್ಚಿನ ಅರ್ಥವಂತಿಕೆ ಮತ್ತು ವ್ಯಾಪಕತೆಗಳು ಸಿಗುತ್ತಿದ್ದವು. ಇದರಿಂದ ಬಹುರಾಷ್ಟ್ರೀಯ ಕಂಪನಿಗಳು ಮತ್ತು ಪ್ರಸ್ತುತ ಸವಾಲುಗಳು ಎಂಬ ಡಾ. ಬಸವರಾಜ ಸಬರದರವರ ಲೇಖನ ತನ್ನ ಉದ್ದೇಶಕ್ಕೆ ಸಾರ್ಥಕತೆಯನ್ನೊದಗಿಸಿದೆ. ದೇಶಿ ವಿದೇಶಿ ಯಾರೇ ಇರಲಿ ಶ್ರಮಜೀವಿಗಳ ಕಣ್ಣೊರೆಸುವ ಪ್ರಾಮಾಣಿಕರು ಜಾರಿಗೆ ತರುವ ಮೌಲ್ಯದ ಅರ್ಥವ್ಯಾಪ್ತಿಗೆ ವಿಸ್ತರಣೆ ನೀಡಿರುವ ಸಬರದರು ಗುಡಿ ಕೈಗಾರಿಕೆಗಳ ನಾಶಕ್ಕೆ ಬಹುರಾಷ್ಟ್ರೀಯ ಕಂಪನಿಗಳಷ್ಟೇ ಅಲ್ಲದೆ ನಮ್ಮ ಬಂಡವಾಳಶಾಹಿಗಳೂ ಕಾರಣ ಎಂದು ನೇರವಾಗಿ ಹೇಳಿದ್ದಾರೆ. ಜೊತೆಗೆ ಸರಕಾರ ಈ ನಿಟ್ಟಿನಲ್ಲಿ ಕೈಗೊಳ್ಳಬಹುದಾದ ಕ್ರಮಗಳ ಬಗ್ಗೆ ಕೂಡ ನ್ಯಾಯೋಚಿತ ಸಲಹೆಗಳನ್ನು ನೀಡಿದ್ದಾರೆ. ಇಷ್ಟೆಲ್ಲಾ ಲೇಖನಗಳನ್ನು ಸಂಪಾದಿಸಿ ಪ್ರಕಟಿಸುವ ಮೂಲಕ ಜಾಗತೀಕರಣದ ವ್ಯಾಪಕ ಚರ್ಚೆಗೆ ವೇದಿಕೆಯನ್ನು ಒದಗಿಸಿಕೊಟ್ಟಿರುವ ಸಂಪಾದಕರು ಇಲ್ಲಿಯ ಅಷ್ಟೂ ಬರಹಗಳ ವೈವಿಧ್ಯತೆಯ ಸಾರ, ಅಭಿಪ್ರಾಯ ಭೇದಗಳ ಕಾರಣ ಹಾಗೂ ನಿಜವಾಗಿ ಈ ಸಂದರ್ಭದಲ್ಲಿ ಜಾಗತೀಕರಣದ ಚರ್ಚೆಯೂ ಸಾಗಬೇಕಿರುವ ಹಾದಿಗಳನ್ನೊಳಗೊಂಡಂತೆ ಒಂದು ಅಧ್ಯಯನಪೂರ್ಣ ಪ್ರವೇಶಿಕೆಯನ್ನು ಒದಗಿಸಿದ್ದರೆ ಇನ್ನೂ ಚೆನ್ನಾಗಿರುತ್ತಿತ್ತು.

– ಚಿದಾನಂದ ಸಾಲಿ, ಅಂಚೆ : ಸಿರವಾರ ತಾ.:ಮಾನ್ವಿ ಜಿ.:ರಾಯಚೂರು

೩. *ಒಂದು ಪಯಣದ ಕಥೆ : ಮೂಲ : ಬೆರ್ಟೋಲ್ಟ್ ಬ್ರೆಕ್ಟ್, ಅನು : ಎಸ್. ಮಾಲತಿ*

ಸಿವಿಜಿ ಪಬ್ಲಿಕೇಶನ್ಸ್, ೭೦, ೨ ನೇ ಮೇನ್, ಜಬ್ಬಾರ್ ಬ್ಲಾಕ್, ವೈಯಾಳಿಕಾವಲ್, ಬೆಂಗಳೂರು-೫೬೦ ೦೦೩.
ಪ್ರಮು. ೨೦೦೫, ಪು. ೬೪, ರೂ. ೫೦/-

ಬೆರ್ಟೋಲ್ಟ್ ಬ್ರೆಕ್ಟ್‌ನ ನಾಟಕ 'The Exception and the Rule'. ರಂಗ ನಿರ್ದೇಶಕಿ ಎಸ್. ಮಾಲತಿ ಈ ನಾಟಕವನ್ನು 'ಒಂದು ಪಯಣದ ಕಥೆ' ಎಂಬ ಹೆಸರಿನಿಂದ ಅನುವಾದಿಸಿದ್ದಾರೆ.

ನಾನೊಬ್ಬ ವ್ಯಾಪಾರಿ. ಒಂದು ವ್ಯಾಪಾರ ಒಪ್ಪಂದ ಮಾಡಿಕೊಳ್ಳಲು ಉರ್ಗಾಕ್ಕೆ ಹೊರಟಿದ್ದೇನೆ. ಬೇಗ ಉರ್ಗಾ ತಲುಪುವವರಿಗೆ ವ್ಯವಹಾರ ಕುದುರುತ್ತೆ. ನನ್ನ ಸ್ಪರ್ಧಿಗಳೂ ನನಗಿಂದ ಹಿಂದೆ ಬಿದ್ದಿಲ್ಲ– ಹೀಗೆ ವ್ಯಾಪಾರಿ ಆಡುವ ಮಾತುಗಳಿಂದ ನಾಟಕ ಶುರುವಾಗುತ್ತದೆ. ಈ ಮಾತುಗಳೇ ಮುಂದಿನ ಕತೆಯ ಬಗೆಗೆ ಕುತೂಹಲ ಕೆರಳಿಸುತ್ತವೆ. ವ್ಯಾಪಾರಿ ಉರ್ಗಾ ತಲುಪುವನೇ ಇಲ್ಲವೇ? ಮಾರ್ಗ ಮಧ್ಯೆ ಏನಾಗಬಹುದು? ಉಳಿದ ವ್ಯಾಪಾರಿಗಳಿಗೂ ಈ ವ್ಯಾಪಾರಿಗೂ ಸ್ಪರ್ಧೆ ಜೋರಾಗಬಹುದೇ? ವ್ಯಾಪಾರಿ, ಗೈಡ್, ಕೂಲಿ ಇವರ ನಡುವೇನೇ ಕಥೆ ಬೆಳೆಯಬಹುದೇ?– ಮುಂತಾದ ಪ್ರಶ್ನೆಗಳು ಏಳುತ್ತವೆ. ಒಂದು ಪಯಣದ ಕಥೆ ಎಂಬುದು ಎದುರು ಕಾಣುವಂತೆ ವ್ಯಾಪಾರಿ, ಕೂಲಿ ಮಾಡುವ ಪಯಣದ ಹಾಗೇ ವರ್ಗಸಂಘರ್ಷದ ಪಯಣದ ಕಥೆಯಾಗಿಯೂ ಮುಂದುವರಿಯುತ್ತದೆ.

ವ್ಯಾಪಾರಿ ಶ್ರೀಮಂತರ ಪ್ರತಿನಿಧಿಯಾಗಿಯೂ, ಗೈಡ್ ಮತ್ತು ಕೂಲಿಗಳು ಶ್ರಮಿಕರ ಪ್ರತಿನಿಧಿಯಾಗಿಯೂ ಕಾಣುತ್ತಾರೆ. ಇಬ್ಬರ ಮಾನಸಿಕ ತೊಳಲಾಟಗಳನ್ನು ನಾಟಕಕಾರ ಪ್ರಕಟಿಸುವನು. ಇಷ್ಟೇ ಅಲ್ಲ; ವ್ಯಾಪಾರಿ ತಾನು ಮಾಡಬೇಕಾದ ಲಾಭದ ಲೆಕ್ಕಾಚಾರದ ಅಮಲಲ್ಲಿದ್ದರೆ, ತನಗೆ ದೊರೆಯುವ ಸಂಬಳಕ್ಕಾಗಿ ಈ ದೇಹವನ್ನು ಎಂಥಾ ಶ್ರಮಕ್ಕಾದರೂ ಒಡ್ಡಲು ತಯಾರಾದ ಕೂಲಿ ಕಳ್ಳರಿಂದ ಜೀವಭಯಕ್ಕಾಗಿ ಹೆದರುತ್ತ, ಬದುಕಲು ಇಷ್ಟವುಳ್ಳ ಮನುಷ್ಯನಾಗಿ ಕಾಣುವನು. ಧನಿಕ ಶ್ರಮಿಕನನ್ನು ಕಾಣುವ ಬಗೆಯನ್ನೇ ಹೆಚ್ಚು ಕಾಣಿಸುವ ನಾಟಕ ಮುಂದೆ ನ್ಯಾಯಾಲಯದ ದೃಶ್ಯದಿಂದ ಕೊನೆಗೊಳ್ಳುತ್ತದೆ.

ನಾಟಕದಲ್ಲಿ ಸವಾಲಾಗಿ ಪರಿಣಮಿಸುವುದು ಕೊಲೆ ದೃಶ್ಯ. ವ್ಯಾಪಾರಿ ಮತ್ತು ಕೂಲಿ ಮರಳುಗಾಡಲ್ಲಿ ನಡೆದು ಹೋಗುವಾಗ ಡೇರೆಯೊಂದರಲ್ಲಿ ತಂಗಿದ್ದಾರೆ. ಕೂಲಿ ಮತ್ತು ತನ್ನಲ್ಲಿ ಅಂತರ ಕಾಪಾಡಿಕೊಳ್ಳುವಲ್ಲಿ ವ್ಯಾಪಾರಿಯ ಮೇಲ್ವರ್ಗದ ಪ್ರಜ್ಞೆ ಸ್ಪಷ್ಟವಾಗಿ ಕಾಣುತ್ತದೆ. ತನ್ನಲ್ಲಿ ನೀರಿದ್ದರೂ ಕೂಲಿಗೆ ಕಾಣದಂತೆ ನೀರು ಕುಡಿದ ವ್ಯಾಪಾರಿ 'ಎಷ್ಟೊತ್ತು ಅಂತ ಬಾಯಾರಿಕೆ ತಡಕೊಂಡಿರಕ್ಕಾಗುತ್ತೆ?'– ಅನ್ನುವನು.

"ನೀರಿನ ಫ್ಲಾಸ್ಕ್ ಯಜಮಾನರಿಗೆ ಕೊಡಬೇಕು. ಇಲ್ದಿದ್ರೆ ನಾನು ಆರೋಗ್ಯವಾಗಿದ್ದು ಅವರು ಅರ್ಧ ಜೀವ ಆಗಿದ್ರೆ ನನ್ನ ವಿಚಾರಣೆಗೆ ಗುರಿಪಡಿಸಬಹುದು" ಹೀಗೆ ಯೋಚಿಸಿದ ಕೂಲಿ ತನ್ನಲ್ಲಿದ್ದ ನೀರಿನ ಫ್ಲಾಸ್ಕನ್ನು ವ್ಯಾಪಾರಿಗೆ ಕೊಡಲು ಮುಂದಾಗುವನು. ಫ್ಲಾಸ್ಕನ್ನೇ ಕಲ್ಲು ಎಂದು ತಿಳಿದ ವ್ಯಾಪಾರಿ, ಕೂಲಿ ಆ ಕಲ್ಲಿನಿಂದ ನನಗೆ ಹೊಡೆದು ಪ್ರಾಣ ತೆಗೆಯುತ್ತಾನೆ ಎಂದು ಭಾವಿಸಿ, 'ಆ ಕಲ್ಲನ್ನು ಎಸಿ'– ಎಂದು ಹೇಳುತ್ತಲೇ ಪಿಸ್ತೂಲಿನಿಂದ ಗುಂಡು ಹಾರಿಸಿ ಕೂಲಿಯನ್ನು ಕೊಲ್ಲುವನು.

ಕೊಂದವನಿಗೆ ಶಿಕ್ಷೆ ಆಗಬೇಕು ಮತ್ತು ತನಗೆ ಪರಿಹಾರ ಸಿಗಬೇಕು ಎಂದು ಕೂಲಿಯ ಹೆಂಡತಿ ನ್ಯಾಯಾಲಯದಲ್ಲಿ ಮನವಿ ಮಾಡುವಳು. "ಅಪರಾಧಿಯು ಆತ್ಮರಕ್ಷಣೆಯ ಕ್ರಿಯೆಯಲ್ಲಿ ತೊಡಗಿದ್ದಾನೆಂಬುದು ಸಮರ್ಥನೀಯ. ಆದ್ದರಿಂದ ಅಪರಾಧಿಯನ್ನು ಖುಲಾಸೆ ಮಾಡಲಾಗಿದೆ. ಕೂಲಿಯ ಹೆಂಡತಿಯ ಅಪೀಲನ್ನು ವಜಾ ಮಾಡಲಾಗಿದೆ."– ಹೀಗೆಂದು ನ್ಯಾಯಾಧೀಶರು ತೀರ್ಪು ನೀಡುವರು. 'ನಾನು ಅವನನ್ನು ಕೊಲ್ಲದೇ ಇದ್ದಿದ್ರೆ, ಅವನು ನನ್ನನ್ನು ಕೊಂದಿರ್ತಾ ಇದ್ದ'– ಎಂದು ವ್ಯಾಪಾರಿ ಹೇಳುವ ಮಾತಿನ ಹಿನ್ನೆಲೆಯಲ್ಲಿ ಆತ್ಮರಕ್ಷಣೆಯ ಪರವಾಗಿ ನ್ಯಾಯಾಧೀಶರು ತೀರ್ಪು ನೀಡುವುದು ಸರಿಯಾಗಿಯೇ ಕಾಣಬಹುದಲ್ಲವೇ?

ಈ ನಾಟಕದ ಪಠ್ಯಕ್ಕೆ ಮುನ್ನುಡಿ ಬರೆದ ಟಿ. ಪಿ. ಅಶೋಕ್ ಹೇಳುತ್ತಾರೆ– 'ಆಟದ ನಿಯಮಗಳನ್ನೇ ಬದಲಾಯಿಸದೇ ಆಟಗಾರರ ವರ್ತನೆಗಳನ್ನು ಪರಿವರ್ತಿಸಲು ಸಾಧ್ಯವಿಲ್ಲ ಎಂಬುದು ಇಲ್ಲಿನ ಆಶಯವಾಗಿದೆ. ಒಳ್ಳೆಯವರೋ, ಕೆಟ್ಟವರೋ ಎಂಬ ಪ್ರಶ್ನೆ ನಾಟಕಕಾರನ ದೃಷ್ಟಿಯಲ್ಲಿ ಅಪ್ರಸ್ತುತ. ಸಂದೇಹ, ಅತೃಪ್ತಿ, ಅನುಮಾನ, ಶಿಕ್ಷೆ ಅಂತಿಮವಾಗಿ ವ್ಯಾಪಾರಿಯಿಂದ ಕೂಲಿಯ ಕೊಲೆ– ಈ ಎಲ್ಲ ಸನ್ನಿವೇಶಗಳನ್ನು ನಾಟಕಕಾರ ನಿರೂಪಿಸುತ್ತ ಹೋಗುತ್ತಿದ್ದಂತೆ ಓದುಗ ಪ್ರೇಕ್ಷಕರ ಮನಸ್ಸುಗಳು ಕ್ರಿಯಾಶೀಲವಾಗಿ ಚಿಂತಿಸಲು ಆರಂಭಿಸುತ್ತವೆ.'

ಬ್ರೆಕ್ಟ್‌ನ 'ತ್ರಿಪೆನ್ನಿ ಓಪೆರಾ', 'ತಾಯಿ', 'ಸೆಜುವಾನ್ ನಗರದ ಸಾಧ್ವಿ', 'ಪುಂಟಿಲಾ' ಮುಂತಾದ ನಾಟಕಗಳು ಕನ್ನಡಕ್ಕೆ ಅನುವಾದವಾಗಿದ್ದಲ್ಲದೇ ಕೆಲವು ರೂಪಾಂತರವೂ ಆಗಿವೆ. ನಾಟಕವನ್ನೇ ವೃತ್ತಿಯಾಗಿಸಿಕೊಂಡ ಕುಟುಂಬಗಳ ಸಮೂಹಕ್ಕೆ ನಾಟಕದ ಬಾಬಾ ಎಂದೇ ಹೆಸರಾಗಿದ್ದ ಬಿ. ವಿ. ಕಾರಂತರು, 'Good Women of Sejovan' ನಾಟಕವನ್ನು ವಿದೇಶೀನಾಟಕ ಎಂದು ಹೇಳದೇ 'ಬಸ್ತಿ ದೇವತಾ ಯಾದಮ್ಮ' ಎಂಬ ಹೆಸರಿನಲ್ಲಿ ನಿರ್ದೇಶಿಸಿ ಪ್ರದರ್ಶಿಸಿದ್ದು ನಾಟಕಕಾರ ಮತ್ತು ನಿರ್ದೇಶಕನ ಶಕ್ತಿಯನ್ನು ತೋರಿಸುತ್ತದೆ. ಕೆ. ವಿ. ಸುಬ್ಬಣ್ಣ, ಲಿಂಗದೇವರು ಹಳೆಮನೆ, ರಂ. ಶಾ. ಮುಂತಾದವರು ಬ್ರೆಕ್ಟ್ ನಾಟಕಗಳನ್ನು ಕನ್ನಡಕ್ಕೆ ತರುವಲ್ಲಿ ಯಶಸ್ವಿಯಾಗಿದ್ದಾರೆ.

ಸಾಮಾಜಿಕ ನ್ಯಾಯಕ್ಕೆ ಹೆಚ್ಚು ಒತ್ತು ಕೊಡುವ, ವ್ಯಕ್ತಿಯ ಕ್ರೂರತನಗಳನ್ನೂ, ಪ್ರಾಮಾಣಿಕತೆ, ಸಜ್ಜನಿಕೆಗಳನ್ನೂ ನಮ್ಮ ಮುಂದಿಟ್ಟು, ಘಟನೆಯೊಂದರ ಮೂಲಕ ಪ್ರಶ್ನೆಗಳನ್ನು ಎತ್ತಿ, ನ್ಯಾಯಾಲಯ

ದೃಶ್ಯ ತಂದು ಪ್ರೇಕ್ಷಕರನ್ನು ಚಿಂತನೆಗೆ ಹಚ್ಚುವ ಸೂತ್ರವೊಂದು ಬ್ರೆಕ್ಟ್‌ನ ಕೆಲವು ನಾಟಕಗಳಲ್ಲಿವೆ. ಇದೇ ಈ ನಾಟಕಕಾರನ ಯಶಸ್ಸಿನ ಗುಟ್ಟು. ಸ್ವತಃ ಕವಯಿತ್ರಿ, ನಾಟಕಕಾರ್ತಿ, ರಂಗಕರ್ಮಿ, ವಿಮರ್ಶಕಿಯಾಗಿರುವ ಎಸ್. ಮಾಲತಿಯವರು ಅನುವಾದಿಸಿದ `ಒಂದು ಪಯಣದ ಕಥೆ` ನಾಟಕದಲ್ಲೂ ಈ ಎಲ್ಲಾ ಲಕ್ಷಣಗಳಿವೆ. ಕುತೂಹಲ ಹುಟ್ಟಿಸುವ ಈ ನಾಟಕ ಅನುವಾದದಲ್ಲಿ ಅಪಾರ ಯಶಸ್ಸು ಕಂಡಿದೆ.

– ಬಂದಗದ್ದೆ ರಾಧಾಕೃಷ್ಣ, ಪುಸ್ತಕ ತೊಂಬಾಳೆ, ಕೆಳದಿ ಅಂಚೆ : ಸಾಗರ-೫೭೭ ೪೦೧, (ಶಿವಮೊಗ್ಗ)

೪. ಕನ್ನಡ ಕಲಾ ಸಂವಹನ : ಡಾ. ಸ್ವಾಮಿರಾವ ಕುಲಕರ್ಣಿ

ಶಿರಪುರ ಪ್ರಕಾಶನ, ೧೦-೯೩೪-೪೨, ಭೀಮಶ್ರೀ, ಮಹಾಲಕ್ಷ್ಮೀನಗರ, ಬ್ರಹ್ಮಪುರ, ಕಲಬುರಗಿ-೫೮೫ ೧೦೩. ಪ್ರಮು. ೨೦೦೫, ಪು. ೯೬, ರೂ. ೪೦/-

ಪ್ರೌಢಶಾಲೆ, ಪದವಿಪೂರ್ವ ಹಂತಗಳಿಗೇ ನಿಂತುಹೋಗುವ ಕನ್ನಡ ವ್ಯಾಕರಣ, ಭಾಷಾಶಾಸ್ತ್ರ, ಪತ್ರಲೇಖನ, ಬರವಣಿಗೆ ಚಿಹ್ನೆಗಳು, ಅನುವಾದ ಕಲೆ ಇತ್ಯಾದಿ ಪ್ರಾಥಮಿಕ ಹಾಗೂ ಅವಶ್ಯವಾಗಿರುವ ಇಂಥ ವಿಷಯಗಳ ಬಗ್ಗೆ ಸಂಕ್ಷಿಪ್ತವಾಗಿಯಾದರೂ ಪದವಿ ವಿದ್ಯಾರ್ಥಿಗಳು ತಿಳಿದುಕೊಂಡಿರಲಿ ಎಂಬ ಉದ್ದೇಶದಿಂದ ಗುಲ್ಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯು ಡಾ. ಸ್ವಾಮಿರಾವ ಕುಲಕರ್ಣಿ ಅವರಿಂದ ಈ ಪಠ್ಯವನ್ನು ಬರೆಸಿದ್ದು ವಿಶೇಷ.

ಕೃತಿಯಲ್ಲಿ `ಭಾಷಾಶಾಸ್ತ್ರ-ಕನ್ನಡ ಸಾಹಿತ್ಯ ಪಕ್ಷಿನೋಟ`, `ಕನ್ನಡ ವ್ಯಾಕರಣ`, `ಪತ್ರವ್ಯವಹಾರ/ಪತ್ರಲೇಖನ` ಮತ್ತು `ಭಾಷಣ ಕಲೆ-ಅನುವಾದ ಕಲೆ-ಬರವಣಿಗೆ ಚಿಹ್ನೆಗಳು` ಎಂಬ ನಾಲ್ಕು ವಿಭಾಗಗಳಿವೆ. ಪ್ರತಿ ವಿಭಾಗವು ಕನ್ನಡ ಭಾಷೆಯ ಸಮಗ್ರ ಅಭ್ಯಾಸ ಹಾಗೂ ತಿಳಿವಳಿಕೆಗಳಿಗೆ ಅನುಕೂಲವಾಗುವ ವಿಷಯ ವಿವರಗಳನ್ನು ಸಂಕ್ಷಿಪ್ತವಾಗಿ ಒಳಗೊಂಡಿದ್ದು ಲೇಖಕರ ಶ್ರಮ ಎದ್ದುಕಾಣುತ್ತದೆ.

ಲೇಖಕ, ಕಲಾವಿದ, ಸಂಘಟಕರಾಗಿರುವ ಕುಲಕರ್ಣಿಯವರು ಕನ್ನಡ ಅಧ್ಯಾಪಕರಾಗಿ ಅನೇಕ ವರ್ಷಗಳ ಕಾಲ ವಿದ್ಯಾರ್ಥಿಗಳಿಗೆ ಕನ್ನಡ ಸಾಹಿತ್ಯ, ವ್ಯಾಕರಣ, ಭಾಷೆ, ಮೀಮಾಂಸೆ ಇತ್ಯಾದಿಗಳನ್ನು ಬೋಧಿಸಿದ ಅನುಭವ ಇರುವವರು. ಪದವಿ ಹಂತದ ವಿದ್ಯಾರ್ಥಿಗಳ ಅರೆಕೊರೆಗಳನ್ನು ಆಳವಾಗಿ ಅರಿತವರು. ಅವರ ಬೋಧನೆ, ಅನುಭವ ಮತ್ತು ಅಧ್ಯಯನದ ಫಲ ಈ ಕೃತಿ. ಗಂಭೀರ ಓದುಗರಿಗೆ, ಪಂಡಿತರಿಗೆ ಸಾಮಾನ್ಯ ವಿಷಯಗಳಾಗಿರಬಹುದಾದ ಈ ಕೃತಿಯ ವಿಷಯಗಳು ವಿದ್ಯಾರ್ಥಿಗಳಿಗೆ ಹಾಗೂ ಬಾಹ್ಯವಾಗಿ ಭಾಷೆ, ವ್ಯಾಕರಣ, ಭಾಷಣ, ಅನುವಾದ ಇತ್ಯಾದಿಗಳನ್ನು ಪ್ರಾಥಮಿಕವಾಗಿ ತಿಳಿದುಕೊಳ್ಳಬೇಕೆನ್ನುವವರಿಗೆ ಉಪಯುಕ್ತವಾಗಿದೆ.

– ಬಿ. ಜಿ. ಚನ್ನೇಶ್ ಹೊನ್ನಾಳಿ, ಕನ್ನಡ ವಿಭಾಗ, ಸ.ಪ್ರ.ದ.ಕಾಲೇಜು, ಹಿರೇಕೆರೂರ-೫೮೧ ೧೧೧

೫. ಓ! ಕೆನಡಾ : ಗುರುಮೂರ್ತಿ ಪೆಂಡಕೂರು

ಯುವಕರ ಸಂಘ (ರಿ.), ರಾಮನಗರ, ಹಗರಿಬೊಮ್ಮನಹಳ್ಳಿ, ಬಳ್ಳಾರಿ ಜಿಲ್ಲೆ. ಪ್ರಮು. ೨೦೦೪, ಪು. ೬೪, ರೂ. ೫೦/-

ಗುರುಮೂರ್ತಿ ಪೆಂಡಕೂರು ಅವರ `ಕೆನಡಾದಲ್ಲಿ ಕನ್ನಡಿಗ` (ಪತ್ರಸಾಹಿತ್ಯ) (೧೯೯೦) ಮತ್ತು `ಬಹುರೂಪಾ ವಸುಂಧರಾ` (೧೯೯೯) ಪ್ರವಾಸಕಥನದ ಅನಂತರ ಪ್ರಕಟವಾಗಿರುವ ಎರಡನೆಯ ಪ್ರವಾಸಕಥನವಿದು. ಕೆನಡಾ ದೇಶದ ಸಾರ ವಿಸ್ತಾರವನ್ನು ತೆರೆದಿಡುವ ಮುನ್ನ ಅದರ ಪದನಿಷ್ಪತ್ತಿಯಿಂದ ಮೊದಲ್ಗೊಂಡು (ಕನಾಟಾ-ಕೆನಡಾ=ಒಂದು ಹಳ್ಳಿ, ಕೆಲವು ಗುಡಿಸಲುಗಳ ಗುಂಪು) ಭೌಗೋಳಿಕ, ಚಾರಿತ್ರಿಕ ಹಾಗೂ ರಾಜಕೀಯ ಪರಿಸರದ ಪರಿಚಯವನ್ನೂ ಸ್ಥೂಲವಾಗಿ ಸೆರೆಹಿಡಿದು ಪರಿಚಯಿಸುತ್ತಾರೆ. ಕೆನಡಾ ಒಂದು ವಿಶಾಲವಾದ ಸರ್ವತಂತ್ರ ಸ್ವತಂತ್ರ ದೇಶ. ಇದು ಒಂದೇ ದೇಶವಾಗಿದ್ದೂ ಇಂಗ್ಲಿಷ್ ಮತ್ತು ಫ್ರೆಂಚ್ ಎರಡು ರಾಷ್ಟ್ರಭಾಷೆಗಳನ್ನು ಹೊಂದಿರುವುದು ಇತರ ರಾಷ್ಟ್ರಗಳ ಕಣ್ಣು ತೆರೆಸುವಂತಹದು.

ಪೆಂಡಕೂರರರು ತಾವು ಕಂಡ ಸ್ಥಳ-ಪರಿಸರದ ವರ್ಣನೆ, ಊರು-ಕೇರಿಗಳ ನೆಲೆ-ಹಿನ್ನೆಲೆ, ಅವುಗಳ ಮೂಲ ಶೋಧನೆ, ಇತಿಹಾಸದ ಸಂಗತಿಗಳು, ಆದಿವಾಸಿಗಳು-ಮೂಲನಿವಾಸಿಗಳು, ಬುಡಕಟ್ಟು ಜನಾಂಗಗಳ ಬದುಕು, ನಾಗರಿಕತೆ, ಜನಜೀವನ, ದೇಶ ಕಾಲಮಾನ ಪರಿಸ್ಥಿತಿ, ರಾಷ್ಟ್ರಧ್ವಜ, ಭಾಷಾ ಸ್ವರೂಪ, ಸಂವಿಧಾನ, ಸಂಪತ್ತು, ಪ್ರಾಣಿ ಪಕ್ಷಿ ಸಂಕುಲಗಳ ಸಂಗತಿಗಳನ್ನು ಸಾಕಷ್ಟು ವಿವರವಾಗಿಯೇ ನೀಡಿದ್ದಾರೆ. ಅಲ್ಲದೆ ಅಲ್ಲಿನ ಪ್ರಜೆಗಳ ಸ್ಥಾನಮಾನ, ವ್ಯಾಪಾರ ವಹಿವಾಟು, ಸಾರಿಗೆ ಸಂಪರ್ಕ-ಸರಕು ಸರಂಜಾಮುಗಳ ಸಾಗಣೆಯ ದೈನಂದಿನ ವ್ಯವಸ್ಥೆ, ಪ್ರಾಮಾಣಿಕ ಸಾರ್ವಜನಿಕ ಜೀವನದ ಹಿತ ಮತ್ತು ರಕ್ಷಣೆ ಹಾಗೂ ಜನರ ಹವ್ಯಾಸಗಳನ್ನು ಪರಿಚಯಿಸಿದ್ದಾರೆ. ಅವರು ಎಲ್ಲಿಯೇ ಕಾಲಿಟ್ಟರೂ ಏನನ್ನೇ ನೋಡಿದರೂ ಅವರನ್ನು ಕಾಡುವುದು ಕನ್ನಡ ನಾಡಿನ ನೆನಪು ಹಾಗೂ ಸಮಗ್ರ ಭಾರತದ ಚಿತ್ರಣ: ಕನ್ನಡತನ ಮತ್ತು ಭಾರತೀಯತೆಯನ್ನು ಕಾಣಲು ತವಕ. ಅಲ್ಲಿ ಕೆಲವು ಸೆಲೆಕ್ಟೆಡ್ ಭಾರತೀಯರು ಉಳಿಸಿಕೊಂಡಿರುವ ತಾಯ್ನಾಡಿನ ಪ್ರೇಮ, ಮಮತೆಯನ್ನು ಕಂಡು ಆನಂದತುಂದಿಲರಾಗುತ್ತಾರೆ.

ಪೆಡಂಕೂರರರು ನಯಾಗರಾ ಜಲಪಾತವನ್ನು ನೋಡುತ್ತಲೆ ಕರ್ನಾಟಕದ ಜೋಗ್ ಜಲಪಾತ ಮತ್ತು ಆಂಧ್ರದ ಮಾಚರ್ಲದ ಹತ್ತಿರದ ಎತ್ತಿಪೋತಲ ಜಲಪಾತದ ಮೋಹಕತೆಯ ನೆನಪು ಕಾಡುತ್ತದೆ. ಕೆನಡಾವು ಕೆಲವು ವಿಧಗಳಲ್ಲಿ ಭಾರತದ ಒಂದು ಪ್ರತಿಬಿಂಬದಂತಿದೆಯೆನ್ನುತ್ತಾರೆ! ಮುಂದುವರಿದ ರಾಷ್ಟ್ರವಾದರೇನು? ಅಲ್ಲಿನವರ ಚೋರವಿದ್ಯೆ, ವೃದ್ಧಾಪ್ಯದಲ್ಲಿ ವ್ಯಕ್ತಿಗಳು ಪಡುವ ಸಂಕಟ, ಒಂಟಿತನ ಹಾಗೂ ಮಾನವನು ಎದುರಿಸುತ್ತಿರುವ ಸೋಲು ಗೆಲುವಿನ ಪರಿಯನ್ನು ಚರ್ಚಿಸಿದ್ದಾರೆ. ಸಿಕ್ಕಿದ್ದನ್ನು ಕೊಂಡು ಜೀವಿಸುವ ಜೀವನಕ್ರಮ ಕುರಿತು, 'ಸರಕು ಸನ್ನಿಹಿಡಿದ ಸಮಾಜದಲ್ಲಿ ಹೊಸತನ್ನು ಕೊಳ್ಳುವ ಆಸೆ ಪ್ರಬಲವಾಗಿರುತ್ತದೆ' ಎಂದು ಉದ್ಗಾರ ತೆಗೆಯುತ್ತಾರೆ.

ಕೆನಡಾದ ಜೀವಕುಲಸಂಕುಲ, ಭೂಜನನ, ಪುರಾತತ್ವ ಶೋಧನ, ಋತುಮಾನ, ಚರಿತ್ರೆ, ಸಮುದಾಯಗಳು ಮತ್ತು ಜನಾಂಗೀಯತೆ ಅಧ್ಯಯನಶೀಲವಾದುದು. ಕೃತಿಯ ಆಡಂಬರ ರಹಿತ, ಚಿತ್ತಾಕರ್ಷಕ, ಮೋಹಕ ಸುಲಲಿತ ಭಾಷೆ ಹಾಗೂ ವಿವರಣೆ ಶೈಲಿ ಸರಳವಾಗಿ ಓದಿಸಿಕೊಂಡು ಹೋಗುತ್ತದೆ, ಸುಳಿವು-ಹೊಳವುಗಳು ಸುಳಿದಾಡುತ್ತವೆ, ಮುದನೀಡುತ್ತವೆ. ಅಂದರೆ ಪ್ರವಾಸ ಸಾಹಿತ್ಯದ ಕೃತಿಯು ಕೇವಲ ಕೃತಕ ಸಮೀಕ್ಷೆ ಅಥವಾ ಊರು ತೇರಿನ ನೀರಸ ಪಟ್ಟಿಯೆನಿಸದೆ ಸಾಹಿತ್ಯ ಸ್ಪರ್ಶದಿಂದಾಗಿ, ಜೀವಂತಿಕೆಯನ್ನು ಪಡೆಯುವಂತಾಗಿದೆ.

– ಡಾ. ಹೆಚ್. ಎ. ಪಾರ್ಶ್ವನಾಥ್, ಪ್ರೊಫೆಸರ್, ಪೆಥಾಲಜಿ ವಿಭಾಗ, ಎಸ್.ಡಿ.ಎಂ. ಮೆಡಿಕಲ್ ಕಾಲೇಜು, ಸತ್ತೂರು, ಧಾರವಾಡ-೫೮೦ ೦೦೯

೬. ಕಪ್ಪು ನದಿ ಮತ್ತು ಅರಣ್ಯ : ಡಾ. ಅಮರೇಶ ಕುಂಬಾರ

ಶಾಲಿವಾಹನ ಪ್ರಕಾಶನ, ಲಿಂಗಸುಗೂರು-೫೮೪ ೧೨೨, ಪ್ರಮು. ೨೦೦೨, ಪು. ೮೦, ರೂ. ೪೫/-

"ಇಲ್ಲಿಯ ಬಹಳಷ್ಟು ಕವನಗಳು ತುಳಿತಕ್ಕೊಳಗಾದವರ, ದನಿ ಇಲ್ಲದವರ ನೋವು ಹಾಗೂ ವೇದನೆಗಳ ರೂಪದಲ್ಲಿವೆ" ಎನ್ನುತ್ತಾರೆ ಈ ಕೃತಿಗೆ ಬೆನ್ನುಡಿ ಬರೆದ ಪ್ರೊ. ದುಷ್ಯಂತ ನಾಡಗಾಡರು. ಈ ಮಾತುಗಳನ್ನು ಒಳಗೊಳ್ಳುವ ಇಲ್ಲಿಯ ಕವನಗಳ ಹಿಂದಿನ ಕಳಕಳಿ, ಪ್ರಾಮಾಣಿಕತೆಗಳನ್ನು ಕುರಿತಂತೆ ಬೇರೆ ಮಾತಿಲ್ಲ. ಆದರೆ, ನೆನಪಿಡಬೇಕಾದ ಅಂಶವೆಂದರೆ, ತಾಪ ತಳಮಳಗಳ ಮೂಕಗಳಿಗೆ ತಾಗಿಸುವ ಚೂಪುಗಳ ಹರಿತ ಈಯುವುದೇ ಬೇರೆ, ಕಳವಳ ಕಸಿವಿಸಿಗಳ ಅನಿಸಿಕೆಗಳಿಗೆ ಮಾತುಗಳ ಹರಿವು ಈಯುವುದೇ ಬೇರೆ. ಏಕೆಂದರೆ, ಮೊದಲ ಅಂಶದಲ್ಲಿ; ತಾಗಿಸಿಕೊಂಡವನ ಮನದ ಆಳದಲ್ಲಿ ಭದ್ರ ತಳ ಊರುವ ತಾಗಿನ ತೀವ್ರತೆ, ಎರಡನೆಯ ಅಂಶದಲ್ಲಿ, ಕಿವಿಬದಿಯ ಗಾಳಿಯಲ್ಲಷ್ಟೇ ಸುಳಿದಾಡಿ ಹರಿದು ಹೋಗಿಬಿಡುವ ಸಾಧ್ಯತೆ ಹೆಚ್ಚಾಗುತ್ತದೆ. ಅಮರೇಶ ಕುಂಬಾರರ ಬಹಳಷ್ಟು ಕವನಗಳು ಎರಡನೇ ಅಂಶದ ಚೌಕಟ್ಟಿನಲ್ಲಿ ಸಿಕ್ಕಿಬಿಡುತ್ತವೆ. ಆದ್ದರಿಂದ ಸ್ವಾಭಾವಿಕವಾಗಿಯೇ, ಅಭಿವ್ಯಕ್ತಿಗಳು, ಸರಳ ಹೇಳಿಕೆಗಳಾಗಿ ಪರಿಣಮಿಸಿಬಿಡುತ್ತವೆ.

ಹಾಗೆಂದು, ಅಮರೇಶರಲ್ಲಿ ಕವಿಯನ್ನಾಗಲೀ, ಕವಿಯ ಬೇಗುದಿಗಳನ್ನಾಗಲೀ ಬದಿಗಿರಿಸುವಂತಿಲ್ಲ. "ಅವರು ಬಾಯಿ ಬಿಡುವದಿಲ್ಲ / ನಾವೇ ಹೃದಯ ಬಿಚ್ಚಿಟ್ಟಿದ್ದೇವೆ—" ಎನ್ನುವಲ್ಲಾಗಲೀ, "ಸಂಪಾದು ನಮಗಿರಲಿ / ನಿಮಗವರ ಫಲವಿರಲಿ" ಎನ್ನುವಲ್ಲಾಗಲೀ ನಮ್ಮ ಮಾನವೀಯತೆಯ ಮುಖಗಳನ್ನು ತಿರುವುವುದಾದರೂ ಹೇಗೆ? (ಕಾವ್ಯಕೃಷಿಯ) 'ಫಲ' ಪಡೆಯಲೇಬೇಕಾದ ಅಮರೇಶರು ಸಿದ್ಧಲಿಂಗ ಪಟ್ಟಣಶೆಟ್ಟಿ ಅವರು ಬರೆದಂತೆ "ನಕ್ಷತ್ರಗಳ ಮಿನುಗು, ಅಲೆಗಳ ಚಲನೆ, ಭಾವಗಳ ಬೆಳಗು" ಇವುಗಳ ಬೆನ್ನು ನಿರಂತರ ಹತ್ತುತ್ತಲೇ ಇರಬೇಕು.

– ದೇಶಪಾಂಡೆ ಸುಬ್ಬರಾಯ, 'ನೆಲೆ', # ೧೩, ಕುಸುಮನಗರ, ಶ್ರೀರಂಗಮಾರ್ಗ, ಧಾರವಾಡ-೮

೨. ಚಿತ್ರದುರ್ಗ ಜಿಲ್ಲಾ ಇತಿಹಾಸ ಅಧ್ಯಯನದ ವ್ಯಾಪಕತೆ ಮತ್ತು ಸಾಧ್ಯತೆ:

ಪ್ರೊ. ಲಕ್ಷ್ಮಣ ತೆಲಗಾವಿ, ಪ್ರಕಾಶರು : ವಾಲ್ಮೀಕಿ ಸಾಹಿತ್ಯ ಸಂಪದ, ಹರ್ತಿಕೋಟೆ-೫೭೭ ೫೪೫. ತಾ. ಹಿರಿಯೂರು, ಪ್ರಮು. ೨೦೦೪, ಪು. ೧೧೬, ರೂ. ೫೦/-

ಕರ್ನಾಟಕ ಇತಿಹಾಸದಲ್ಲಿ ಚಿತ್ರದುರ್ಗ ಜಿಲ್ಲೆಗೆ ವಿಶಿಷ್ಟವಾದ ಸ್ಥಾನವಿದೆ. ಪ್ರಾಗೈತಿಹಾಸಿಕ ಕಾಲದಿಂದಲೂ ಇಲ್ಲಿಯ ಜನಜೀವನದ ಕುರುಹುಗಳು ಚರಿತ್ರೆಯನ್ನು ಪುನರ್‌ನಿರ್ಮಿಸಲು ಆಗರಗಳಾಗಿವೆ. ಇಂತಹ ಚಿತ್ರದುರ್ಗ ಜಿಲ್ಲೆಯ ಮೇಲೆ ಕಳೆದ ಶತಮಾನದಿಂದ ನಡೆದಿರುವ ಸಂಶೋಧನೆಗಳ ಪರಿಚಯಾತ್ಮಕ ಕೃತಿ ಇದಾಗಿದೆ. ಈ ಅಧ್ಯಯನಗಳ ಘಟ್ಟಗಳನ್ನು ತೆಲಗಾವಿಯವರು ನಾಲ್ಕು ಭಾಗಗಳನ್ನಾಗಿ ಮಾಡಿಕೊಂಡು ಅಧ್ಯಯನ ನಡೆಸಿದ್ದಾರೆ. ಮೊದಲ ಭಾಗ ಮೂಲಸಾಮಗ್ರಿ ಸಂಗ್ರಹಣೆ ಮತ್ತು ಪ್ರಕಟಣೆಗಳ ಸಾಂಪ್ರದಾಯಿಕ ಸಂಶೋಧನೆಗೆ ಸಂಬಂಧಪಟ್ಟ ಹಂತ(೧೯೦೦-೧೯೬೦), ಎರಡನೆಯದು ಗಮನಾರ್ಹ ಸಂಶೋಧನೆ ನಡೆಯದೇ ಇರುವ ಹಂತ(೧೯೬೦-೧೯೭೦), ಮೂರನೆಯದು ಹಂತ ಅಕೆಡೆಮಿಕ್ ನೆಲೆಯಿಂದ ನಡೆದ ಸಂಶೋಧನೆಗಳ ಹಂತ(೧೯೭೦-೧೯೯೦), ನಾಲ್ಕನೆಯ ಕಾಲಘಟ್ಟ ಸಂಶೋಧನೆಗಳ ಫಲಿತಗಳು ಕೃತಿಗಳ ರೂಪದಲ್ಲಿ ಹೊರಬರುವ ಹಂತ(೧೯೯೦-೨೦೦೦). ಈ ಕಾಲಕ್ಕೆ ಸೇರಿದ ವಿದೇಶೀಯ ಮತ್ತು ಭಾರತೀಯ ಚರಿತ್ರಕಾರರು ಕಟ್ಟಿಕೊಟ್ಟ ಚರಿತ್ರೆಯನ್ನು ವಿಶ್ಲೇಷಿಸುತ್ತಾರೆ. ಇಷ್ಟೇ ಅಲ್ಲದೆ ಜನಪದ ಹಾಗೂ ಕಥೆ, ಕಾದಂಬರಿ ಮುಂತಾದ ಸಾಹಿತ್ಯದಲ್ಲಿ ವರ್ಣಿತವಾಗಿರುವಂತಹ ಚಾರಿತ್ರಿಕತೆಯ ಮಗ್ಗುಲನ್ನೂ ಸೇರಿಸಿ ನಡೆಸಿರುವ ಸಂಶೋಧನೆಗಳು ಮತ್ತು ನಡೆಸಬೇಕಾದ ಸಂಶೋಧನೆಗಳನ್ನು ಸೂಚಿಸುತ್ತಾರೆ. ಇದು ಒಂದು ಅವಲೋಕನ ಗ್ರಂಥ. ಇತಿಹಾಸವನ್ನು ವಿವಿಧ ದೃಷ್ಟಿಕೋನಗಳಿಂದ ಕಟ್ಟಿಕೊಡುವ ಸಂದರ್ಭದಲ್ಲಿ ಎದುರಿಸಬೇಕಾದ ಸಮಸ್ಯೆಗಳನ್ನೂ ಈ ಪುಸ್ತಕ ವಿಶ್ಲೇಷಿಸುತ್ತದೆ.

– ಪ್ರೊ. ಕಿಕ್ಕೇರಿ ನಾರಾಯಣ್, ೨೬೨, ೧೯ನೇ ಮೇನ್, 'ಬಿ' ಬ್ಲಾಕ್
೩ನೇ ಹಂತ ವಿಜಯನಗರ, (ಜೆಸಿಇ ಹಿಂಭಾಗ), ಮೈಸೂರು-೫೭೦ ೦೧೭

ಸಂಕಲನ : ಅನಿಸಿಕೆ

೧. ಸಂಕಲನ-೨೮ ರ 'ಕಡೇಪುಟ' ಬದುಕು-ಬರಹ ಎರಡಕ್ಕೂ ಜೀವ ತುಂಬುವಂಥದ್ದು. ಬದುಕನ್ನೇ ಬರೆಯುವ್ರಿಗೆ, ಬರಹವನ್ನೇ ಬದುಕವ್ರಿಗೆ 'ಕಡೇಪುಟ' ಕೈಬೆರಳು. ಶಬ್ದಗಳನ್ನ ಸಿಂಗರಿಸೋದಕ್ಕಿಂತ ಅರ್ಥವನ್ನ ಅಲಂಕರಿಸೋದು ಹ್ಯಾಂಗ ಅನ್ನೋದು ತಿಳ್ಕೊಳ್ಳಾಕ ಬೀಜಮಾತ ಅದಾವು ಇಲ್ಲಿ. ಅಲಂಕಾರಶಾಸ್ತ್ರಾನ ಇಷ್ಟು ಛಂದ, ಇಷ್ಟು ಸರಳ ತಿಳಿಸಾಕ ಸಾಧ್ಯ ಐತಿ ಅನ್ನೋದು ಈಗ್ಲೆ ಗೊತ್ತಾದದ್ದು. ಇಂಥ ಪುಟಗಳ ಸಂಖ್ಯೆ ಹೆಚ್ಲಿ.

ದ್ರೌಪದಿ ಸೀರಿ-ನಾರಿ ಪ್ರಸಂಗಾನೂ ಹೊಸ ಚಿಂತನೆಗೆ ತೊಡಗಸ್ತು. ದುಶ್ಯಾಸನ ಸೆಳದದ್ದು ದ್ರೌಪದಿ ಸೀರೆಯನ್ನ ಮಾತ್ರ ಅಲ್ಲ. ಅಲ್ಲಿ ಪ್ರೇಕ್ಷಕರಾಗಿದ್ದವರ ಎಲ್ಲಾರ ವ್ಯಕ್ತಿತ್ವದ ವಸ್ತ್ರಲಿನ ಪರದೇನೂ ಸೆಳದ. ಯಾರ್‍ಯಾರಿಗಿ ದ್ರೌಪದಿ ಹ್ಯಾಂಗ್ಹ್ಯಾಂಗ ಕಂಡ್ಲೊ? ದೇಹ ಕಂಡಿದ್ದು ಎಷ್ಟು ಜನರಿಗೋ, ಮನಸು ಕಂಡಿದ್ದು ಎಷ್ಟು ಜನರಿಗೋ! ಸೀರೆ ಸೆಳೆಯತೊಡಗಿದಂತೆಯೆ ಅಲ್ಲಿ ದ್ರೌಪದಿ ಮರೆಯಾಗಿ ಅಪಮಾನ, ಅಸಹಾಯಕತೆ, ಭಯ, ಲಜ್ಜೆ, ಅಸಹ್ಯ ಏನೆಲ್ಲ ಭಾವಗಳ ಅಗ್ನಿಗೋಳವೊಂದು ಕಂಡಿದ್ದು ಎಷ್ಟು ಜನರಿಗೋ? 'ವ್ಯಾಸ'ನ ಪರಿಧಿಗೂ ಆಚೆ ಮಹಾಭಾರತ ಇದೆ. (ಮಜಾ ಅಂದ್ರ) ಸೀರಿ ಸೆಳದದ್ದು ದ್ರೌಪದೀದಾದರೂ ಬತ್ತಲೆ ಆದದ್ದು ಅಲ್ಲಿದ್ದವರೆಲ್ಲಾ. ಅಂದ್ರ ಭೀಷ್ಮ ಕೃಪ ಶಲ್ಯ ದುರ್ಯೋಧನ ದ್ರೋಣ ಮತ್ತು ಪಂಚಪಾಂಡವರು.

– ಚಂದ್ರಶೇಖರ ವಸ್ತ್ರದ, ಗದಗ

೨. ನಾನು ಮುಸ್ಲಿಮನಾದರೂ ನನಗೆ ಉರ್ದೂ ಓದಲು ಬರೆಯಲು ಗೊತ್ತಿಲ್ಲ. ಆದರೆ ಉರ್ದೂ ಲಿಪಿಯ ಪುಸ್ತಕಗಳನ್ನು ಹಿಂದಿನಿಂದ, ಅಂದರೆ 'ಕಡೇಪುಟ'ದಿಂದ ಓದುವುದು ಪದ್ಧತಿ ಎಂದು ಬಲ್ಲೆ. **ಸಂಕಲನ**ವನ್ನು ನಾನು 'ಕಡೇಪುಟ'ದಿಂದಲೇ ಓದಲು ಆರಂಭಿಸುತ್ತೇನೆ. 'ಒನ್ನೇಪುಟ'ವೂ ಈಚೆಗೆ ಟೆಮ್ಪ್ಟ್ ಮಾಡುತ್ತಿದೆ. ನಿಮ್ಮ ಧಾರವಾಡದ ಭಾಷೆ, ಲಯ ನನಗೆ ಬಹಳ ಬಹಳ ಇಷ್ಟ.
ಸಂಕಲನದ ಗುಣಮಟ್ಟವೇ ಚಂದಾದಾರರನ್ನು ಆಕರ್ಷಿಸುತ್ತದೆ. 'ಮೀನುಗಾರಿಕೆ ಕವನಗಳು' ಬರೆದಿರುವ ಡಾ. ಎಸ್. ಎಂ. ಶಿವಪ್ರಕಾಶ್ ನನ್ನ ಕಾಲೇಜ್ ಸಹಪಾಠಿಯಾಗಿದ್ದರು. ನಾವು ೧೯೭೭ ರಲ್ಲಿ ಬೇರೆಬೇರೆಯಾಗಿದ್ದೆವು. **ಸಂಕಲನ**ದಿಂದ ಈಗ ೨೯ ವರ್ಷದ ಮೇಲೆ ಮತ್ತೆ ಜೊತೆಯಾಗಿದ್ದೇವೆ ಸರ್. **ಸಂಕಲನ**ಕ್ಕೆ ಕೃತಜ್ಞತೆಗಳು.

– ಡಾ. ಮಿರ್ಜಾ ಬಶೀರ್, ಧರ್ಮಸ್ಥಳ

೩. **ಸಂಕಲನ-೨೮** ವಿದ್ವತ್ಪೂರ್ಣ ಬರಹಗಳಿಂದ ಅರ್ಥಪೂರ್ಣವಾಗಿ ಮೂಡಿಬಂದಿದೆ. ತಮ್ಮ 'ಒನ್ನೇಪುಟ' ಮತ್ತು 'ಕಡೇಪುಟ'ಗಳು ಬರಿಯ ಅಕ್ಷರಗಳ ಜೋಡಣೆಯಲ್ಲ, ಶಬ್ದಚಿತ್ರ, ಚಿತ್ರಕಾವ್ಯ! ಇಂಥ ರಸಗವಳವನ್ನೇ ನೀಡುತ್ತಿರುವ ನಿಮಗೆ ಅಭಿನಂದನೆಗಳು.

– ನೆಂಪು ನರಸಿಂಹ ಭಟ್ಟ, ಪರ್ಕಳ

೪. **ಸಂಕಲನ-೨೮** ತಲುಪಿತು. **ಸಂಕಲನ**ದಲ್ಲಿ ಮೊದಲು ನಾನು ಓದುವುದು 'ಒನ್ನೇಪುಟ' ಮತ್ತು 'ಕಡೇಪುಟ'. ಈ ಸಲದ 'ಒನ್ನೇಪುಟ'ದಲ್ಲಿ ಅಕಬರನ ಆಸ್ಥಾನದ ಕವಿರತ್ನ ಅಬ್ದುರ್ರಹೀಮ್ ಖಾನ್‌ಖಾನಾನ ವಿದ್ವತ್ತು ಮತ್ತು ಹಿಂದೂ ಧರ್ಮ ಹಾಗೂ ಸಂಸ್ಕೃತಿ ಬಗೆಗಿನ ಆತನ ಆಳವಾದ ಜ್ಞಾನ, ಅನುಭವಗಳ ಬಗ್ಗೆ, ಅವನ ಕೃತಿಗಳ ಬಗ್ಗೆ ಬಹಳ ಸಂಕ್ಷಿಪ್ತ ಹಾಗೂ ಸಮರ್ಥ ರೀತಿಯಲ್ಲಿ ನಿರೂಪಿಸಿರುವ ನಿಮ್ಮ ಶೈಲಿ ಅನನ್ಯ. ಅಪಾರವಾದ ವಿಷಯವನ್ನು ಒಂದೇ ಪುಟದಲ್ಲಿ ಸರ್ ಫ್ರಾನ್ಸಿಸ್ ಬೇಕನ್ ರೀತಿಯ ಶೈಲಿಯಲ್ಲಿ ನೀಡಿದ್ದೀರಿ. ಈ ರೀತಿ ಅಂಥ ಪ್ರತಿಭೆಗಳ ಬಗ್ಗೆ ಇನ್ನೂ ಹೆಚ್ಚು ತಿಳಿದುಕೊಳ್ಳಬೇಕೆಂಬ ಆಸಕ್ತಿ, ಅದಮ್ಯ ಕುತೂಹಲ ಓದುಗರಲ್ಲಿ ಉಂಟುಮಾಡಿದ್ದೀರಿ. ನಮ್ಮ ಸಾರಭೂತವಾದ ಸಾಂಸ್ಕೃತಿಕ ಬೇರುಗಳನ್ನು ಅರಸಿ ಗಟ್ಟಿ ನೆಲವನ್ನು ಹುಡುಕಿಕೊಳ್ಳಲು ಈಗಿನ ಜನಾಂಗಕ್ಕೆ ಇದು ನಾಂದಿಯಾಗಲಿದೆ. ಅಪಹ್ನುತಿ, ಭ್ರಮ, ಸಂದೇಹ ಕುರಿತಾದ 'ಕಡೇಪುಟ'ದಲ್ಲಿ ಕೆಲವೇ ಕೆಲವು ಪದಗಳನ್ನು ಕೈಗೆತ್ತಿಕೊಂಡು ಇಡೀ ಜೀವನದರ್ಶನ ಹೇಗಿರಬೇಕೆಂಬುದನ್ನು ಸ್ವಗತವೆನ್ನುವಂತೆ ಛಾಪಿಸಿದ್ದೀರಿ. ಇಲ್ಲಿ ವಿದ್ವತ್ತು, ಲೋಕಾನುಭವ ಪರಿಶುದ್ಧ ಅನುಭವವಾಗಿ ಆ ಅನುಭವ ಅನುಭಾವಗೊಂಡು ದರ್ಶನವಾಗಿ ಅರಳಿದೆ. ಇದೊಂದು ಅಪೂರ್ವ ಸಿದ್ಧಿಯೆಂದು ನನಗನಿಸಿದೆ. **– ಡಿ. ಎಸ್. ಮುನಿಕೃಷ್ಣ, ಬೆಂಗಳೂರು**

೫. 'ಒನ್ನೇಪುಟ'ದಲ್ಲಿ ಸೂರದಾಸ, ಕಬೀರದಾಸ ಮುಂತಾದವರ ಬಗ್ಗೆ ಬರೆಯುತ್ತಿದ್ದೀರಿ. ಇದೇ ರೀತಿ ಹಿಂದೀ ಸಾಹಿತ್ಯದ ಹಿರಿಯ ವ್ಯಕ್ತಿತ್ವಗಳನ್ನು ಪರಿಚಯಿಸಿರಿ. **– ಶೈಲಾ ಭಟ್ಟ, ಧಾರವಾಡ**

೬. ಸಂಕಲನ-೨೮ ರ 'ಒನ್ನೇಪುಟ'ದ ಅಬ್ದುರ್ರಹೀಮ್ ಖಾನ್‌ಖಾನಾರ ವ್ಯಕ್ತಿಚಿತ್ರ ಅಪೂರ್ವವಾಗಿದೆ. 'ಕಡೀಪುಟ'ದ ಚಿಂತನ ಮಂಥನ ಗಮನ ಸೆಳೆಯಿತು. ತೀನಂಶ್ರೀ ಕುರಿತ ಲೇಖನ ಅವರ ಕೃತಿಗಳನ್ನು ಮರುಚಿಂತನೆಗೊಳಪಡಿಸಲು ಪ್ರೇರೇಪಿಸುವಂತಿದೆ. ನವೋದಯ ಕಾಲಘಟ್ಟದ ವಿದ್ವಾಂಸರ ಸಾಹಿತ್ಯ ಸಾಧನೆ ಕುರಿತ ಲೇಖನಗಳು ಸಂಕಲನದಲ್ಲಿ ಮೂಡಿಬರಲಿ. ಪ್ರತಿ ಸಂಚಿಕೆಯಲ್ಲಿ ಹೊಸಹೊಸತನ್ನು ಕೊಡುತ್ತಿದ್ದೀರಿ. ಅಭಿನಂದನೆಗಳು. – **ಮಂದಾಕಿನಿ ಪುರೋಹಿತ, ಧಾರವಾಡ**

೭. ಗಟ್ಟಿ ಹಾಗೂ ಪರಿಶುದ್ಧ ಸಾಹಿತ್ಯ ಮತ್ತು ಎಳೆಯರಿಗೆ ಹೊಸ ದೃಷ್ಟಿ ನೀಡುವ ನವನವೀನ ವಿಚಾರಗಳ ಸಂಕಲನದ ಪ್ರಗತಿ ಕಂಡು ಸಂತಸವಾಯಿತು. ಇಂದಿನ ದುರ್ಭರ ದಿನಗಳಲ್ಲಿ ತುಂಬ ಧೈರ್ಯದಿಂದ ಆರೋಗ್ಯಕರವಾಗಿ ಮೈದುಂಬಿಕೊಂಡು ಬೆಳೆಯುತ್ತಿರುವ ಪತ್ರಿಕೆಯ ಹಿಂದೆ ತಮ್ಮ ಕ್ರಿಯಾಶೀಲತ್ವ ಹಾಗೂ ದೂರದೃಷ್ಟಿಯ ಪರಿಶ್ರಮವಿದೆ. – **ಡಾ. ವಸಂತ ಕುಲಕರ್ಣಿ, ವಿಜಾಪುರ**

೮. 'ಕಡೀಪುಟ' 'ಒನ್ನೇಪುಟ' ಬಂದ್ವು. 'ನಡಕಿನ ಪುಟ' ಯಾಕ್ ಬರವಲ್ಲು...? ಸಾಹಿತ್ಯದ ವೋಸೂ ನಮೂನೆಗಳನ್ನ ಗೋಳೇಹಾಕಿ ಶಾಣ್ಯಾ ಲೇಖಕರ ಭೋಲೋ ಭೋಲೋ ಲೇಖನಗಳನ್ನೆಲ್ಲ ತಮ್ಮ ಸಂಕಲನದಾಗss ಬರ್ಲಿ ಅನ್ನೋ ಸಿದ್ಧಲಿಂಗ ಪಟ್ಟಣಶೆಟ್ಟಿಯವರ ಸದಭಿರುಚಿ ಅಷ್ಟೂ ಪುಟದಾಗೂ ಛಾಪ್ ಒತ್ತೈತಿ. ಇದರಾಗ್ ಹೇಮಾನ ಖಟಿಪಿಟಿನೂ ಖಂಡಾಪಟ್ಟಿ ಐತಿ. ಸಂಕಲನ ಬಾಳ ಅಂದ್ರ ಬಾಳ ಛಂದ ಬರಾಕ ಹತ್ತೇತಿ. – **ಸುಮಿತ್ರಾ ಹಲವಾಯಿ, ಧಾರವಾಡ**

೯. ಸಂಕಲನ-೨೬ (ಮಾರ್ಚ್-ಏಪ್ರಿಲ್) ಸಂಚಿಕೆ ಓದಿ ಖುಶಿಯಾಯಿತು. ಲೇಖನಗಳು ವೈವಿಧ್ಯಮಯವಾಗಿದ್ದು, ಸ್ವಾರಸ್ಯಕರವಾಗಿವೆ. ಹೊಸ ವಿಚಾರಗಳನ್ನೊಳಗೊಂಡಿವೆ. ಅರವಿಂದ ಚೊಕ್ಕಾಡಿಯವರ 'ಬಡತನವನ್ನು ಭೇದಿಸಲು ಶಿಕ್ಷಣ' ಎಂಬ ಲೇಖನದಲ್ಲಿ ಅನೇಕ ಹೊಸ ವಿಚಾರಗಳಿವೆ. ಆದರೆ ಅವರ ಭಾಷೆಯಲ್ಲಿ ಇಂಗ್ಲಿಷ್ ಪದಗಳ ಬಳಕೆ ಕೆಲವು ಕಡೆ ಅತಿಯಾಗಿ ಕಿರಿಕಿರಿಯನ್ನುಂಟು ಮಾಡುತ್ತದೆ. ಉದಾ : "ರಾಷ್ಟ್ರ ಮಟ್ಟದ ಅಥಾರಿಟಿ ಡಿಸಿಷನ್ ಟೇಕಿಂಗ್ ಬಾಡಿಯಾಗಿ, ರಾಜ್ಯ ಮಟ್ಟದ ಅಥಾರಿಟಿ ಪಾಲಿಸಿ ಪ್ರಿಪೇರಿಂಗ್ ಬಾಡಿಯಾಗಿ, ಜಿಲ್ಲಾ ಮಟ್ಟದ ಅಥಾರಿಟಿ ಪಾಲಿಸಿ ಇಂಪ್ಲಿಮೆಂಟಿಂಗ್ ಬಾಡಿಯಾಗಿ ತಾಲೂಕ ಮಟ್ಟದ ಅಥಾರಿಟಿ ಪೂರ್ಣವಾಗಿ ಎಕ್ಸಿಕ್ಯೂಟಿವ್ ಬಾಡಿಯಾಗಿ ಕೆಲಸ ಮಾಡಬೇಕು." ಇದೆಂಥ ಕನ್ನಡ! ಸಂಪಾದಕರಾಗಿ ನೀವು ಇದನ್ನು ಸುಧಾರಿಸಲು ಸಾಧ್ಯವಾಗದೆ? – **ಎಂ. ಕೇಶವರಾವ್, ಬೆಂಗಳೂರು**

೧೦. ರಾಮಚಂದ್ರದೇವ ಅವರ 'ಸಮಾಜವಾದಿಯ ಕನಸು' ಒಳ್ಳೆಯ ಆಪ್ತ ಲೇಖನ. ಒಂದು ಕಾಲಖಂಡದ ಇತಿಹಾಸವನ್ನೇ ಅವರು ನಮ್ಮೆದುರು ಮೂಡಿಸಿದ್ದಾರೆ. – **ಶ್ರೀನಿವಾಸ ದೇಸಾಯಿ, ಧಾರವಾಡ**

೧೧. ಇವತ್ತಿನ (೬-೮-೦೬) ವಿಜಯ *ಕರ್ನಾಟಕ* ಸಾಪ್ತಾಹಿಕ ವಿಜಯದಲ್ಲಿ ಒಂದು ಲೇಖನ ಎಂ. ಎಸ್. ಶ್ರೀರಾಮ್ ಅನ್ನುವವರು ಬರೆದಿದ್ದಾರೆ. ಅದು ಸಾಹಿತ್ಯಿಕ ಪತ್ರಿಕೆಗಳನ್ನು ಕುರಿತದ್ದು. ಅದರಲ್ಲಿ ಮಾಸ್ತಿ ಅವರ 'ಜೀವನ' ಪತ್ರಿಕೆಯಿಂದ ಕಳೆದ ವರ್ಷ ಸುರುವಾದ 'ದೇಶ-ಕಾಲ'ದ ವರೆಗೆ ಎಲ್ಲ ಪತ್ರಿಕೆಗಳ ಪ್ರಸ್ತಾಪ ಇದೆ. ಸಾಕ್ಷಿ, ಋಜುವಾತು, ಸಂಕ್ರಮಣ, ಶೂದ್ರ ಇತ್ಯಾದಿ ಎಲ್ಲಾ ಇವೆ. ಆದರೆ ಸಂಕಲನದ ಪ್ರಸ್ತಾಪ ಮಾತ್ರ ಇಲ್ಲ. ಮನಸ್ಸಿಗೆ ಕಸಿವಿಸಿಯಾಯಿತು. ಐದು ವರ್ಷಗಳಿಂದ ಬರುತ್ತಿರುವ ಶುದ್ಧ ಸಾಹಿತ್ಯ ಪತ್ರಿಕೆ ಸಂಕಲನ ಹೀಗೆ ಅಲಕ್ಷಿಸಬಹುದಾದಂಥ ಪತ್ರಿಕೆಯೆ? ಇದೇ ವಿಷಯ ಕುರಿತು ಆ ಪತ್ರಿಕೆಯ ಸಂಪಾದಕರಿಗೂ ಬರೆದಿದ್ದೇನೆ. ಒಂದು ಲೇಖನವನ್ನು ಬರೆಯುವಾಗ ಸಾಕಷ್ಟು ರೀತಿಯಲ್ಲಿ ಆಲೋಚಿಸಬೇಕು. ಅಂಥ ಲೇಖನವನ್ನು ಪ್ರಕಟಿಸುವಾಗ ಆ ಪತ್ರಿಕೆಯ ಸಂಪಾದಕರಾದರೂ ಸಂಕಲನವನ್ನು ಮರೆಯಬಾರದಿತ್ತು. ಹಿಂದೆ ಸಂಪಾದಕ ವಿಶ್ವೇಶ್ವರ ಭಟ್ಟರು ಸ್ವತಃ ಸಂಕಲನ ಮೌಲ್ಯದ ವಿಷಯ ಮೆಚ್ಚಿ ಬರೆದದ್ದು ಸಹ ನಾನು ಓದಿದ್ದೇನೆ. ಈಗ ಹೀಗಾಗಬಾರದಿತ್ತು. – **ಮೋಹನ ಕಳಸದ, ಬೆಳಗಾವಿ**

ಕಡೀಪುಟ : ಸಿದ್ಧಲಿಂಗ ಪಟ್ಟಣಶೆಟ್ಟಿ

ಧಾರವಾಡ ಸೀಮಿಯೊಳಗ ಇತ್ತಿತ್ತಲಾಗಿ ಭಯಂಕರ ಪ್ರಖ್ಯಾತಿ ಪಡೀತಿರುವ ಒಬ್ಬ ಲೇಖಕಿ ನನ್ನ ಇತ್ತೀಚಿನ 'ಒಂದ್ ಗೆಸ್ಟ್ ಬೇಕಾಗೇತಿ' ಪುಸ್ತಕದ ಲಲಿತ ಲೇಖನಗಳನ್ನ ಓದಿ ಭಯಂಕರ ಖುಶೀಲೆ ಒಂದ್ ಭಯಂಕರ ಪತ್ರಾ ಬರದಾಳ. 'ನಿಮ್ಮ ಹಾಸ್ಯ, ವಿಡಂಬನೆ, ಧಾರವಾಡೀ (ಇದ ಅಕೀದ್‌ಅ ಭಯಂಕರ ಶಬ್ದ) ಕನ್ನಡ, ವಿಶಿಷ್ಟ ಬಗೆಯ ವಿಶ್ಲೇಷಣೆಗಳು, ಭಾಷಾ-ಕಾಳಜಿ ಇತ್ಯಾದಿ ಬಹಳ ಹಿಡಿಸಿದುವು' ಅಂತ ಬರದು, ಕಡೀಕ "'ಸಂಘಜೀವಿ' ಲೇಖನದ 'ಘ' ಯಾಕೋ ಅಕ್ಕಿಯಲ್ಲಿ ಹರಳು ಸಿಕ್ಕಂತೆನಿಸಿತು. 'ಸಂಗ' ಸರಿಯಾದ ಪ್ರಯೋಗ. (ಸಂಗದಿಂದಲ್ಲದೇ ಅಗ್ನಿ ಹುಟ್ಟದು –ಬಸವವಚನ)" ಅಂತ ನನ್ನ ಕನ್ನಡ ತಿದ್ದಿಕೊಳ್ಳಾಕ ಅಪ-ರೂಪದ ಸಲಹಾ ಕೊಟ್ಟು ಮುಗಿಸ್ಯಾಳ. ಈ ಪತ್ರಾ ಓದಿ ನನಗಾಗಿರುವ ಭಯಂಕರ ಖುಶಿಯನ್ನ ನನ್ನ ಕಡೀಪುಟದ ಸಂಘ-ಸಮುದಾಯ-ಸಮೂಹದ ಸಂಗಾತಿಗಳಿಗೂ ಹಂಚಿಬಿಡಬೇಕು ಅಂತ ಈ ಮಾತು ಬರ್‍ಯಾಕ್ಹತ್ತೇನಿ.

ನನ್ನ ಲೇಖನದೊಳಗ, ಮನಶ್ಯಾ ಮೂಲತಃ ಸಂಘಜೀವಿ, ಅವ್ನು ಯಾವಾಗಲೂ ಒಬ್ಬನ್‌ಅ ಇರೂದುಲ್ಲ, ಮತ್ತು ಇರಲಾರ... ಅಂತೆಲ್ಲಾ ಸುರು ಮಾಡಿ, ಒಂದು ಕುಟುಂಬ, ಪರಿವಾರ, ಸಮಾಜದ ಉಳಿದ ಸದಸ್ಯರ ಕೂಡ ಮನಶ್ಯಾ ಹೊಂದಿಕೊಂಡು ಇರಲೇಬೇಕಾಕ್ಕತಿ. ಸಂಘ ಜೀವನ ಅನ್ನೂದು ಬರೇ ಮನಶ್ಯಾರ ಸಂಬಂಧಕ್ಕ ಅಲ್ಲ, ಸಾಕುಪ್ರಾಣಿ, ಪಕ್ಷಿ, ಪ್ರಕೃತಿ, ಪುಸ್ತಕ-ಕಲಾ-ಪ್ರೀತಿ ಅಂತೆಲ್ಲಾ ಸ್ವಯಂವಿಸ್ತಾರ ಪಡಕೊಂತ ಹೊಕ್ಕತಿ. ಹಿಂಗ ಮನಶ್ಯಾ ನೋಡಾಕಷ್ಟ್‌ಅ ಏಕಾಕಿ ಇರತಾನ, ಆದರ ತನ್ನ ಸಾಂಘಿಕ ಅಪೇಕ್ಷೆಯನ್ನ ವಿಸ್ತರಿಸಿಕೊಂಡು ಸ್ವತಃ ಸಂಘ ಆಗೂದು ಅವ್ನನ ಆರೋಗ್ಯವನ್ನ, ಹಿತವನ್ನ ಹೆಚ್ಚಿಸತಯ್ತಿ, ಅಂತೆಲ್ಲಾ ಬರದಿದ್ದೆ.

ಈ ಪತ್ರಾ ಬರೆದ ಸಂಗಮ್ಮ–ಅರೆ, ಅಕೀ ಹೆಸರ ಹೇಳಬಾರದಂತ ಮಾಡಿದ್ದೆ, ಮರತ ಹೇಳಿಬಿಟ್ಟೆ, ಇರವಲ್ಲದ್ಯಾಕ ಬಿಡ್ರಿ– ಅಜಮಾಸು ಮೂವತ್ತ ವರ್ಷದ ಹಿಂದ ಒಂದು ಪ್ರಸಿದ್ಧ ವಿಶ್ವವಿದ್ಯಾ'ನಿ'ಲಯದಿಂದ ಕನಡಾ ಎಮ್ಮೆ ತೊಗೊಂಡಾಳ. ಕತಿ, ಕಾದಂಬರಿ, ಕವಿತಾ, ವಿಮರ್ಶ್ಯಾ ಬರದಾಳ. ಜಾನಪದ ಸಾಹಿತ್ಯವನ್ನ ತಳತನಕ ಸೋಸ್ಯಾಳ(ಂತ). ಇಷ್ಟೆಲ್ಲಾ ಮಾಡಿದಾಕಿ ಅಂದ ಮ್ಯಾಲ ಅಕಿ ತಪ್ಪು ಮಾಡಿರಾಕ ಸಾಧ್ಯನ್‌ಅ ಇಲ್ಲ. 'ಸಂಘ' ಶಬ್ದದ ತದ್ಭವ 'ಸಂಗ' ಅಂತನೂ ಆಕ್ಕತಿ. ಬಹುತೇಕ ಆ ಸಂಗದ ಸಂಗದಾಗ ಮಾತ್ರ ಅಕಿ ಇದ್ದಿರಬೇಕು. ಸಂಸ್ಥೆ, ಸಮೂಹ, ಜನರ ಗುಂಪು, ಒಕ್ಕೂಟ, ಘಟಕ, ಸಮಾಜ ಮುಂತಾದ ಅರ್ಥ ದ್ಯೋತಿಸುವ ಸಂಘಕ್ಕ ಈ ಸಂಗಮ್ಮ ತನ್ನ ನಾಮ-ಸ್ಪರ್ಶ-ಗಂಧ-ಲೇಪನ-ಬಲದಿಂದಾಗಿ ಸರ್ವಸಂಘ-ಪರಿತ್ಯಾಗ ಅನ್ನುವ ಸೋಡಚೀಟಿ ಕೊಟ್ಟು ಬರೇ ಸಂಗ-ಲೀಲಾ-ಲೀನೆಯಾಗಿರಬಹುದೇನೋ ಅನಸತಯ್ತಿ.

ಸಂಗ ಅಂದರ ಕೂಟ, ಕೂಡುವಿಕೆ, ಗೆಳೆತನ, ಒಡನಾಟ, ಮಿಲನ, (ಸಂ)ಯೋಗ, ಸಂಗಮ, ಸಂಸರ್ಗ, ಸ್ಪರ್ಶ, ಆಸಕ್ತಿ, ವಿಷಯ-ವಾಸನೆ, ಹೋರಾಟ, ತೊಂದರೆ ಮುಂತಾದ ಹತ್ತಿಪ್ಪತ್ತು ಅರ್ಥಗಳು ಹೊಮ್ಮುವುರಿಂದ; ಬರೇ ಸಂಸ್ಥೆ, ಗುಂಪು, ಮಂಡಳಿ, ಸಮಾಜ, ಸಂಘಟನೆ ಮುಂತಾದ ಕೆಲವೇ ಏಕದಿಶ ಅರ್ಥಗಳನ್ನ ಹೇಳುವ 'ಸಂಘ' ಸಂಗಮ್ಮಗ ಮೊದಲಿನಿಂದಲೂ ಬ್ಯಾಡಾಗಿದ್ದಿರಬಹುದು. ಆದರ ಅಕಿ ನನಗ ಬರದ ಪತ್ರದಾಗ

(‘ಸಂಗದಿಂದಲ್ಲದೇ ಅಗ್ನಿ ಹುಟ್ಟದು’) ಅಂತ ಕಿಡಿ ಬ್ಯಾರೆ ಹೊತ್ತಿಸಿ ಇಟ್ಟ್ಯಾಳ. ಇಂಥಾ ಈ ಅದ್ಭುತ ಮಧುರ ಸಂಗ, ಅದರೊಳಗಿನ ಸಂಘರ್ಷ, ಅದರಿಂದ ಹುಟ್ಟುವ ಬಿಸಿ, ಕಾವು, ಬೆಂಕಿ, ಸಂಗಾಗ್ನಿಗಳು ಅಕೀ ತಲ್ಯಾಗಿದ್ದ ಮ್ಯಾಲ ಮತ್ತ ನನ್ನ ಖಾಲೀ ‘ಸಂಘ’, ಅನೇಕ ವಿದ್ಯಾಸಂಸ್ಥೆಗಳು, ಸಾಹಿತ್ಯ ಸಂಘಗಳು, ಕಾರ್ಯಕರ್ತರ ಸಂಘಟನೆಗಳು, ಬೌದ್ಧರ ‘ಬುದ್ಧಂ ಧಮ್ಮಂ ಸಂಘಂ’ಗಳು ಮುಂತಾದುವೆಲ್ಲಾ ಏನು ಮಾಡಬೇಕು, ಶಬ್ದಕೋಶಗಳನ್ನ ಖಾಲಿ ಮಾಡಿ ಎಲ್ಲಿಗೆ ಹೋಗಬೇಕು? ಇವೆಲ್ಲಾ ಪ್ರಶ್ನೆಗಳಿಗೆ ನಮ್ಮ ಕೂಡಲ ಸಂಗಮ್ಮನ್ಅ ಪರಿಹಾರ ಹೇಳಬೇಕು, ಈಗ ತಾ ಮುಚ್ಚಿದ ದಾರೀ ತಾನ್ಅ ಮೋಕಳೀಕ ಮಾಡಿ ಕೊಡಬೇಕು.

ನನಗ ದಿನಾ ಬರುವ ಪತ್ರಗಳಲ್ಲಿ, ಲೇಖನಗಳಲ್ಲಿ ಕನಿಷ್ಠ ನಾಲ್ಕಾರು ಮಂದಿಯಾದರೂ ಸಂಗಮ್ಮ, ಸಂಗಪ್ಪಗಳು ದರ್ಶನಾ ಕೊಡತಿರತಾರು. ಅವರ ‘ಹೋರಿ-ಬಲ’ ಕನ್ನಡ ಭಾಷಾ-ಜ್ಞಾನವನ್ನ ನೋಡಿ, ತಿಳಿದು, ಸಹಿಸಿ, ತಿದ್ದಿ, ತೀಡಿ ಇನ್ನೂ ಉಳಕೊಂಡೇನಲ್ಲ ಅಂತ ಭಾಳ ಮಂದಿಗೆ ಆಶ್ಚರ್ಯನೂ ಆಗೇತಿ. ಇಂಥವರಲ್ಲಿ –ಯಾರ ದುರ್ಭಾಗ್ಯವೋ ಗೊತ್ತಿಲ್ಲ– ಶಿಕ್ಷಕರು, ಭಾಷಾವಿಭಾಗಗಳ ಹೆಡ್ಡರು, ರೀಡರ್‍ರು, ಪ್ರೊಫೇಶ್ವರರು, ಪಿಎಚ್‌ಡಿ ಅಂತಾರಲ್ಲ ಅದನ್ನ ಮಾಡಬೇಕನ್ನುವವರಿಗೆ ತಾವು ‘ಮಾರ್ಗದರ್ಶಕರು’ ಅಂತ ಮಾರ್ಗದ ತುಂಬ ಕಿರಾಣಿ ಅಂಗಡಿ ಜಾಹೀರಾತಿನ್ಹಂಗ ಬೋರ್ಡ್ ಹಾಕಿಕೊಂಡವರು, ಎರಡ್ಮೂರು ಎಂಥೆಂಥಾವೋ ಪುಸ್ತಕಾ ಪ್ರಕಟಿಸಿ, ಇನ್ನಮುಂದ ಮುಂದಿನ ಪೀಳಿಗೆಗೆ ಬರೇ ಮುನ್ನುಡಿ ಬರೀಬೇಕಂತ ಕಾಯತಿದ್ದವರು, ಯಾವಾಗಲೂ ಚಾಲ್ತಿಯೊಳಗಿರಬೇಕೆಂತ ನಾಕೂರು ಸುತ್ತಾಡಿ ಸ್ವಲ್ಪ ಖರ್ಚ್ ಆದರೂ ಅಡ್ಡಿಯಿಲ್ಲಾಂತ ಅಲ್ಲಲ್ಲಿಯ ಕಾರ್ಯಕ್ರಮದಾಗ ಕೊಡೂದು ಕೊಟ್ಟು ಹೆಸರು ಹಾಕಿಸಿಕೊಳ್ಳುವ ಕವಿ-ಭಾಷಣಕಾರರು, ಸಂಘಗಳ(ಅಲ್ಲ, ಸಂಗಗಳ) ಪ್ರಮುಖರು ಮುಂತಾದವರ ಕಲಸು ಮೇಲೋಗರ ಅರ್ಥಾತ್ ಕಲಸಿಕಲಸಿ ಮಾಡಿಟ್ಟ ವಗ್ಗರಣಿ ಓಗರ ನನ್ನ ನಾಲಿಗೀ ಮ್ಯಾಲ ಭಿನ್ನಾನ್ನವಾಗಿ ರುಚಿಸಾಕ್ಹತ್ತೇತಿ. ಈ ಇಂಥಾ ಅನ್ನದ ಮ್ಯಾಲ ಉದುರಿಸಿದ ಚಟ್ನಿಪುಡಿ ಕೋತಂಬ್ರಿಯಂಥಾ ಕೆಲವುನ್ನ ಮಾಸಲಿಗೆ ನೋಡಬಹುದು : ಶ್ರೇಷ್ಟತೆ, ಕಾಂತಸಮ್ಮಿತ, ಅರಣ್ಯಕ, ಉದ್ಧಕ್ಕೂ ಪ್ರತಿಪಾದಿಸುತ್ತ, ಬ್ರಷ್ಟ, ಜಾತೀವಾದಿ, ಸತ್ಯನಿಷ್ಟ, ಪ್ರಾಶಸ್ಥ್ಯ, ಶ್ರದ್ಧೆ, ಸಾಹಿತ್ಯಸೃಷ್ಠಿ, ಅಧ್ಯಾತ್ಮಿಕತೆ, ಆಧ್ಯಾತ್ಮ, ಅವಶ್ಯಕತೆ, ಮೇರುಸದ್ರುಶ್ಯ ವ್ಯಕ್ತಿತ್ವ, ಸ್ವಾತಂತ್ರ, ಸಿದ್ದತೆ, ಮುತ್ಸದ್ಧಿ, ನಿಸ್ಪ್ರುಹ, ಬುದ್ದಿ ಸ್ಥಿಮಿತದಲ್ಲಿರಲಿಲ್ಲ, ನಾಲ್ಕೂ ಹಣ್ಣು ತಿಂದ– ಇಂಥಿಂಥಾ ನಮನಮೂನೆಯ ಶಬ್ದರೂಪಗಳನ್ನ ನೋಡಿದಾಗ ಮೊದಲ ಮೈ ಉರೀತಿತ್ತು, ಇಂಥಾ ಶಬ್ದ-ಭಾಷಾ-ಸಂಘ-ಸಮಾಜದೊಳಗ ನಿತ್ಯ ವಿಹರಿಸುವ ರೂಢಿ ಆಗಿ ನಾನು ಆಮ್ಯಾಲ ಥಣ್ಣಗಾಗಿ ಬಿಡಾಕ್ಹತ್ತೇನಿ.

ನನ್ನ ಬಗ್ಗೇ ನನಗ ಕೆಟ್ಟನಿಸತಯ್ತಿ. ಇಂಥಾದ್ದಕ್ಕೆಲ್ಲ ಯಾರು ಕಾರಣ? ಕಲಿಸಿದವರೋ? ಕಲೀಲಿಕ್ಕೆ ಹ್ವಾದವರೋ? ತಾವೂ ಲೇಖಕರಾಗಬೇಕಂತ ಬಯಸವರು, ತಮ್ಮನ್ನ ಅಭಿವ್ಯಕ್ತಿಯ ಬೆಳಕಿಗೆ ಒಡ್ಡಿಕೊಳ್ಳುವ ಹಂಬಲ ಇದ್ದವರು ಶಬ್ದ-ಭಾಷಾ-ಪ್ರಯೋಗಗಳನ್ನ ನಿರ್ಲಕ್ಷಿಸುವುದರ ಬಗ್ಗೆ, ಅಸಡ್ಡೆ ಮಾಡುವುದರ ಬಗ್ಗೆ ಹೇಸಿಕೆ ಬರತಯ್ತಿ. ಇಂಥವರೆಲ್ಲಾರ್ನೂ ‘ಸಂಘ’ಟಿಸಿದರ ಸಂಗ ಆಕ್ಕತ್ಯೋ ಅಥವಾ ಅವರ ಸಂಗದಿಂದ ಅಗ್ನಿ ಸ್ಫುಲಿಂಗಿತವಾಗಿ ಮುಂದ ಅದರ ಬೆಳಕಿನ್ಯಾಗ ಅವರದ್ಅ ಒಂದು ಸಂಘ ಆಕ್ಕತ್ಯೋ ತಿಳೀವಲ್ಲದು.

ಹಂಗಾದಾಗ ಅಕ್ಕ್ಯಾಗ ಹಳ್ಳ ಸಿಗತಾವೋ ಹಳ್ಳ್ಯಾಗ ಅಕ್ಕಿ ಸಿಗತಾವೋ ಹೆಂಗ ಹೇಳೂದು...?

SANKALANA: RNI No. KARKAN 14160/10/1/2002-TC

ಸಂಕಲನ : ಸಪ್ಟಂಬರ್ + ಅಕ್ಟೋಬರ್ ೨೦೦೬

ಸಂಪುಟ ೫, ಸಂಚಿಕೆ ೫

ಸಂಪಾದಕರು : **ಸಿದ್ಧಲಿಂಗ ಪಟ್ಟಣಶೆಟ್ಟಿ + ಹೇಮಾ ಪಟ್ಟಣಶೆಟ್ಟಿ**

9845325721

•

ಜಿ. ಬಿ. ಹರೀಶ ಆರ್. ಪವಿತ್ರ ಪ್ರಿಯಭಾಷಿಣಿ

ಸುಮತೀಂದ್ರ ನಾಡಿಗ

ಎಸ್. ಜಿ. ಸಿದ್ಧರಾಮಯ್ಯ ಎಸ್. ಆರ್. ಕುಮಾರಕರ

ಬಸವರಾಜ ಪಕ್ಕುಂದ

ರಾಜೇಶ್ವರಿ ಶಿಂಧೆ ಸಿ.ಪಿ.ಕೆ. ಜಯಶ್ರೀ ಕೆ. ಸಿ.

ಮಂದಾಕಿನಿ ಪುರೋಹಿತ ರಜಿಯಾ ಡಿ. ಬಿ.

ನಾ. ಡಿಸೋಜ

ಶಂಕರಗೌಡ ಸಾತ್ಮಾರ ಷ. ಶೆಟ್ಟರ್

•

ಅಶೋಕ ಶೆಟ್ಟರ್

ಚಿದಾನಂದ ಸಾಲಿ ಬಂದಗದ್ದೆ ರಾಧಾಕೃಷ್ಣ

ಬಿ. ಜಿ. ಚನ್ನೇಶ್ ಹೊನ್ನಾಳಿ

ಹೆಚ್. ಎ. ಪಾರ್ಶ್ವನಾಥ್ ದೇಶಪಾಂಡೆ ಸುಬ್ಬರಾಯ

ಕಿಕ್ಕೇರಿ ನಾರಾಯಣ್

•

ಚಂದ್ರಶೇಖರ ವಸ್ತ್ರದ
ಬಿ. ಎಸ್. ಮುನಿಕೃಷ್ಣ
ವಸಂತ ಕುಲಕರ್ಣಿ
ಶ್ರೀನಿವಾಸ ದೇಸಾಯಿ

ಮಿರ್ಜಾ ಬಷೀರ್
ಶೈಲಾ ಭಟ್ಟ
ಸುಮಿತ್ರಾ ಹಲವಾಯಿ

ನೆಂಪು ನರಸಿಂಹ ಭಟ್ಟ
ಮಂದಾಕಿನಿ ಪುರೋಹಿತ
ಎಂ. ಕೇಶವರಾವ್
ಮೋಹನ ಕಳಸದ

•

ಸಿದ್ಧಲಿಂಗ ಪಟ್ಟಣಶೆಟ್ಟಿ

•

ಸಂಕಲನ ಪ್ರಕಾಶನ

ಹೂಮನೆ, ಶ್ರೀದೇವಿನಗರ, ವಿದ್ಯಾಗಿರಿ, ಧಾರವಾಡ - ೫೮೦ ೦೦೪